# ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಶುಕ್ರವಾರ, ನವೆಂಬರ್ 20, 2020

ಸಂಪುಟ : 47 ಸಂಚಿಕೆ : 200 ☎ 254736 91642 99999 RNI No: 27369/75, KA/SK/CTA-275/2018-2020. O/P @ J.D. Circle P.O. ಪುಟ : 6 ರೂ : 4.00 www.janathavani.com janathavani@mac.com


## ಸ್ಥಳೀಯ ಸಂಸ್ಥೆ ಮೀಸಲಾತಿ ಅಧಿಸೂಚನೆ ರದ್ದು

### ಅಧ್ಯಕ್ಷ, ಉಪಾಧ್ಯಕ್ಷ ಸ್ಥಾನದ ಚುನಾವಣಾ ಫಲಿತಾಂಶ ಅಮಾನತ್ತಿಗೆ ಹೈಕೋರ್ಟ್ ಆದೇಶ

ಬೆಂಗಳೂರು, ನ. 19 - ನಗರಸಭೆ, ಪುರಸಭೆ ಹಾಗೂ ಪಟ್ಟಣ ಪಂಚಾಯತಿ ಅಧ್ಯಕ್ಷರು, ಉಪಾಧ್ಯಕ್ಷರ ಹುದ್ದೆಗೆ ಸರ್ಕಾರ ಹೊರಡಿಸಿದ್ದ ಮೀಸಲಾತಿ ಅಧಿಸೂಚನೆಯನ್ನು ಹೈಕೋರ್ಟ್ ರದ್ದುಪಡಿಸಿದೆ.



**ಇತ್ತೀಚೆಗೆ ರಾಜ್ಯ ಸರ್ಕಾರದ ಮೀಸಲಾತಿಯಂತೆ ನಗರಸಭೆ, ಪುರಸಭೆ, ಪಟ್ಟಣ ಪಂಚಾಯತ್‌ಗಳಿಗೆ ಅಧ್ಯಕ್ಷರು, ಉಪಾಧ್ಯಕ್ಷರಾಗಿ ಆಯ್ಕೆಗೊಂಡಿದ್ದವರಿಗೆ ಹೈಕೋರ್ಟ್ ಆದೇಶ ದೊಡ್ಡ ಷಾಕ್ ಆದಂತಾಗಿದೆ.**

ಅಕ್ಟೋಬರ್ 8ರಂದು ರಾಜ್ಯದ ಒಟ್ಟು 2 77 ಸ್ಥಳೀಯ ಸಂಸ್ಥೆಗಳ ಅಧ್ಯಕ್ಷ - ಉಪಾಧ್ಯಕ್ಷರ ಚುನಾವಣೆಗೆ ಮೀಸಲಾತಿ ಅಧಿಸೂಚನೆ ಹೊರಡಿಸಲಾಗಿತ್ತು. ಈ ಅಧಿಸೂಚನೆಯನ್ನು ಪ್ರಶ್ನಿಸಿ ಹೈಕೋರ್ಟ್‌ನಲ್ಲಿ ಅರ್ಜಿ ದಾಖಲಿಸಲಾಗಿತ್ತು.

ಹೈಕೋರ್ಟ್ ಚುನಾವಣೆ ನಡೆಸಲು ಅನುಮತಿ ನೀಡಿತ್ತಾದರೂ, ಫಲಿತಾಂಶ ಪ್ರಕಟಿಸಬಾರದು. ಚುನಾವಣೆಯ ಫಲಿತಾಂಶ ಹೈಕೋರ್ಟ್‌ನ ಅಂತಿಮ ಆದೇಶಕ್ಕೆ ಒಳಪಟ್ಟಿರುತ್ತದೆ ಎಂದು ತಿಳಿಸಿತ್ತು.

ಅದರಂತೆ ಹರಿಹರ ನಗರಸಭೆ ಸೇರಿದಂತೆ ಬಹಳಷ್ಟು ಕಡೆ ಚುನಾವಣೆ ನಡೆದು ಅಧ್ಯಕ್ಷ - ಉಪಾಧ್ಯಕ್ಷರ ಚುನಾವಣೆಯ ಫಲಿತಾಂಶ ಪ್ರಕಟವಾಗಿದೆ. ಆದರೆ, ಹೈಕೋರ್ಟ್‌ನ ಗುರುವಾರದ ಆದೇಶದಿಂದ ಈ ಚುನಾವಣಾ ಫಲಿತಾಂಶಗಳು ಅಮಾನತ್ತು ಸ್ಥಿತಿಯಲ್ಲಿರುತ್ತವೆ.

ಸರ್ಕಾರದ ಅಧಿಸೂಚನೆ ಪ್ರಶ್ನಿಸಿ ರಾಜ್ಯದ ವಿವಿಧ ನಗರ ಸ್ಥಳೀಯ ಸಂಸ್ಥೆಗಳ ಚುನಾಯಿತ ಸದಸ್ಯರು, ಅಧ್ಯಕ್ಷ-ಉಪಾಧ್ಯಕ್ಷ ಸ್ಥಾನದ ಆಕಾಂಕ್ಷಿಗಳು ಸಲ್ಲಿಸಿದ್ದ ಅರ್ಜಿಗಳನ್ನು ಗುರುವಾರ ಮಾನ್ಯ ಮಾಡಿರುವ **(2ನೇ ಪುಟಕ್ಕೆ)**

## ಸಂಪುಟ ವಿಸ್ತರಣೆಗೆ ಗ್ರೀನ್ ಸಿಗ್ನಲ್

**ಸಿಎಂ ವಿಶ್ವಾಸ**

ಬೆಂಗಳೂರು, ನ.19- ಮಂತ್ರಿಮಂಡಲ ವಿಸ್ತರಣೆಗೆ ವರಿಷ್ಠರು ಹಸಿರು ನಿಶಾನೆ ತೋರಲಿದ್ದಾರೆ ಎಂಬ ವಿಶ್ವಾಸ ನನಗಿದೆ ಎಂದು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಇಂದಿಲ್ಲಿ ತಿಳಿಸಿದ್ದಾರೆ.

ಗೃಹ ಕಚೇರಿ ಕೃಷ್ಣಾದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಿನ್ನೆ ದೆಹಲಿಗೆ ಹೋಗಿ, ವರಿಷ್ಠರ ಜೊತೆ ಚರ್ಚಿಸಿ, ಸಂಪುಟಕ್ಕೆ ಯಾರನ್ನು ಸೇರ್ಪಡೆ ಮಾಡಿಕೊಳ್ಳಬೇಕು ಎಂಬುದರ ಬಗ್ಗೆ ಮಾಹಿತಿ ನೀಡಿ ಬಂದಿದ್ದೇನೆ. ಇನ್ನೆರಡು ಮೂರು ದಿನಗಳಲ್ಲಿ ವಿಸ್ತರಣೆಗೆ ಅನುಮತಿ ದೊರೆಯುವ ವಿಶ್ವಾಸ ನನಗಿದೆ ಎಂದರು.

ಸಂಪುಟದಲ್ಲಿ ಕೆಲವು ಬದಲಾವಣೆ ಮಾಡಬೇಕೆಂಬ ಅನಿಸಿಕೆ **(4ನೇ ಪುಟಕ್ಕೆ)**

# ಪ್ರತಿ ಹಳ್ಳಿಗೆ 'ಗ್ರಾಮ ಒನ್' ಸೇವೆ

### ಮಾಗಾನಹಳ್ಳಿಯಲ್ಲಿ ಗ್ರಾಮ ಒನ್‌ಗೆ ಚಾಲನೆ ನೀಡಿದ ಮುಖ್ಯಮಂತ್ರಿ ಯಡಿಯೂರಪ್ಪ

ದಾವಣಗೆರೆ, ನ. 19 - 750ಕ್ಕೂ ಹೆಚ್ಚು ಸೇವೆಗಳನ್ನು ಒದಗಿಸುವ ಗ್ರಾಮ ಒನ್ ಕೇಂದ್ರವನ್ನು ಮುಂಬರುವ ದಿನಗಳಲ್ಲಿ ರಾಜ್ಯದ ಪ್ರತಿ ಹಳ್ಳಿಯಲ್ಲೂ ಸ್ಥಾಪಿಸಲಾಗುವುದು ಎಂದು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ತಿಳಿಸಿದ್ದಾರೆ.

ದಾವಣಗೆರೆ ಜಿಲ್ಲೆಯ ನೂರು ಗ್ರಾಮಗಳಲ್ಲಿ ಪ್ರಾಯೋಗಿಕವಾಗಿ ಗ್ರಾಮ ಒನ್ ಯೋಜನೆಗೆ ಚಾಲನೆ ನೀಡುವ ಕಾರ್ಯಕ್ರಮವನ್ನು ಮಾಗಾನಹಳ್ಳಿಯಲ್ಲಿ ಆನ್‌ಲೈನ್ ಮೂಲಕ ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು.

ಸರ್ಕಾರಿ ಕಚೇರಿಗಳಿಗೆ ಜನರು ಭೇಟಿ ನೀಡುವ ಅಗತ್ಯವನ್ನು ತಪ್ಪಿಸಲು ಗ್ರಾಮ ಒನ್ ಯೋಜನೆ ರೂಪಿಸಲಾಗಿದೆ. ಇದರಿಂದಾಗಿ ಜನರ ಸಮಯ ಹಾಗೂ ಹಣ ಉಳಿತಾಯವಾಗಲಿದೆ. ಮಧ್ಯವರ್ತಿಗಳ ಹಾವಳಿಯೂ ಇರುವುದಿಲ್ಲ ಎಂದು ಯಡಿಯೂರಪ್ಪ ತಿಳಿಸಿದರು.

ಬೆಳಿಗ್ಗೆ 8ರಿಂದ ರಾತ್ರಿ 8ರವರೆಗೆ ಈ ಕೇಂದ್ರಗಳು ಕಾರ್ಯ ನಿರ್ವಹಿಸಲಿವೆ. ಮುಂಬರುವ ದಿನಗಳಲ್ಲಿ ಮೈಕ್ರೋ ಬ್ಯಾಂಕ್ ಸೇವೆಯನ್ನೂ ಈ ಕೇಂದ್ರಗಳ ಮೂಲಕ ಸ್ಥಾಪಿಸಲಾಗುವುದು ಎಂದವರು ಹೇಳಿದರು.

ಸಮಯಬದ್ಧ ಸೇವೆಗಳನ್ನು ತಂತ್ರಜ್ಞಾನದ ಬಳಕೆಯಿಂದ ನೀಡಲು ಸಾಧ್ಯವಿರುವುದರಿಂದ ಗ್ರಾಮ- ಒನ್ ಕೇಂದ್ರಗಳು ಜನಸ್ನೇಹಿ ಕೇಂದ್ರಗಳಾಗಲಿವೆ ಎಂದವರು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಅಧಿಕಾರಿಗಳು ಸಮಯ ಬದ್ಧತೆಯಿಂದ ಸೇವೆ ಸಲ್ಲಿಸಬೇಕು. ಜನರಿಗೆ ಸೇವೆ ತಲುಪಿಸುವುದನ್ನು ವಿಳಂಬ ಮಾಡಿದರೆ ಅಧಿಕಾರಿಗಳಿಗೆ ದಂಡ ವಿಧಿಸಲಾಗುವುದು ಎಂದೂ ಮುಖ್ಯಮಂತ್ರಿ ಎಚ್ಚರಿಸಿದರು.

ಮಾಗಾನಹಳ್ಳಿಯಲ್ಲಿ ನಡೆದ ವೇದಿಕೆಯ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಮಾತನಾಡಿದ ಶಿಕ್ಷಣ ಸಚಿವ ಸುರೇಶ್ ಕುಮಾರ್, ಸಕಾಲ ಹಾಗೂ ಸೇವಾ ಸಿಂಧು ಯೋಜನೆಗಳ ನಂತರ ಮಹತ್ವದ ಮೈಲಿಗಲ್ಲಾಗಿ ಗ್ರಾಮ ಒನ್ ಯೋಜನೆ ಜಾರಿಗೆ ಬರುತ್ತಿದೆ ಎಂದು ತಿಳಿಸಿದರು.

ದಾವಣಗೆರೆ ಜಿಲ್ಲೆಯ 100 ಹಳ್ಳಿಗಳಲ್ಲಿ ಗ್ರಾಮ ಒನ್ ಕೇಂದ್ರಗಳನ್ನು ಪ್ರಾಯೋಗಿಕವಾಗಿ ಸ್ಥಾಪಿಸಲಾಗಿದೆ. ಕಾರ್ಯಕರ್ತರು ಈ ಯೋಜನೆ ಯಶಸ್ವಿ ಮಾಡಿದರೆ, ರಾಜ್ಯಾದ್ಯಂತ ಕೇಂದ್ರಗಳನ್ನು ತೆರೆಯಲಾಗುವುದು. ಈ ಯೋಜನೆ ದೇಶಕ್ಕೇ ಮಾದರಿಯಾಗಲಿದೆ ಎಂದು ಸುರೇಶ್ ಕುಮಾರ್ ವಿಶ್ವಾಸ ವ್ಯಕ್ತಪಡಿಸಿದರು.

ಸಂಸದ ಜಿ.ಎಂ. ಸಿದ್ದೇಶ್ವರ ಮಾತನಾಡಿ, ಜನರು ಕಚೇರಿಗಳಿಗೆ ಅಲೆದಾಡಿ ಬೇಸತ್ತು ಹೋಗುವುದನ್ನು ತಪ್ಪಿಸಲು ಗ್ರಾಮ ಒನ್ ಸ್ಥಾಪಿಸಲಾಗಿದೆ. ಜನರ ಮನೆ ಬಾಗಿಲಿಗೆ ಸೇವೆಗಳನ್ನು **(2ನೇ ಪುಟಕ್ಕೆ)**

### ಆನ್‌ಲೈನ್ ಸೇವೆಗೆ ಆನ್‌ಲೈನ್ ಉದ್ಘಾಟನೆ

**ಸೇವಾ ಸಿಂಧು ಪೋರ್ಟಲ್ ಸೇರಿದಂತೆ ಆನ್‌ಲೈನ್ ಮೂಲಕ ಲಭ್ಯವಾಗುವ ಸೇವೆಗಳನ್ನು ಕಲ್ಪಿಸುವ ಗ್ರಾಮ ಒನ್ ಕಾರ್ಯಕ್ರಮದಲ್ಲಿ ಆನ್‌ಲೈನ್ ಮೂಲಕವೇ ಉದ್ಘಾಟನೆ ನೆರವೇರಿದ್ದು ಗಮನ ಸೆಳೆಯಿತು.**

**ಮುಖ್ಯಮಂತ್ರಿ ಯಡಿಯೂರಪ್ಪ ಬೆಂಗಳೂರಿನ ತಮ್ಮ ಗೃಹ ಕಚೇರಿಯಿಂದ ಕಾರ್ಯಕ್ರಮದಲ್ಲಿ ಪಾಲ್ಗೊಂಡರು. ಸಚಿವ ಸುರೇಶ್ ಕುಮಾರ್ ಅವರು ಮಾಗಾನಹಳ್ಳಿಯಲ್ಲಿ ನಡೆದ ವೇದಿಕೆಯ ಕಾರ್ಯಕ್ರಮದಲ್ಲಿ ಭಾಗಿಯಾದರು.**

**ಕಾರ್ಯಕ್ರಮದ ಸ್ವಾಗತ ಬೆಂಗಳೂರಿನಿಂದ ನಡೆದರೆ, ಸಮಾರೋಪ ನುಡಿಗಳು ಮಾಗಾನಹಳ್ಳಿಯಿಂದ ಕೇಳಿ ಬಂದವು.**



## ಶಿಕ್ಷಣ 'ಶೂನ್ಯ'ವಿಲ್ಲ, ವಿದ್ಯಾಗಮದ ಸುಧಾರಣೆ



ದಾವಣಗೆರೆ, ನ. 19 - ಕೊರೊನಾ ಕಾರಣದಿಂದಾಗಿ ಶಿಕ್ಷಣ 'ಶೂನ್ಯ ವರ್ಷ'ವಾಗುವ ಸಾಧ್ಯತೆ ತಳ್ಳಿ ಹಾಕಿರುವ ಶಿಕ್ಷಣ ಸಚಿವ ಸುರೇಶ್ ಕುಮಾರ್, ವಿದ್ಯಾಗಮವನ್ನು ಇನ್ನಷ್ಟು ಸುಧಾರಣೆ ಮಾಡುತ್ತೇವೆ ಎಂದು ತಿಳಿಸಿದ್ದಾರೆ.

ಪತ್ರಕರ್ತರೊಂದಿಗೆ ಮಾತನಾಡುತ್ತಿದ್ದ ಅವರು, ಶೂನ್ಯ ಶೈಕ್ಷಣಿಕ ವರ್ಷ ಎಂಬುದು ಹೊಸ ಕಲ್ಪನೆ. ಕಳೆದ ವರ್ಷ 1ರಿಂದ 9ನೇ ತರಗತಿಯವರೆಗೆ ಪರೀಕ್ಷೆ ನಡೆಸದೇ ಪಾಸ್ ಮಾಡಲಾಗಿತ್ತು. ಹಾಗೆಂದು ಅದನ್ನು ಶೂನ್ಯ ವರ್ಷವೆಂದು ಪರಿಗಣಿಸಿರಲಿಲ್ಲ ಎಂದು ತಿಳಿಸಿದರು.

ಈ ವರ್ಷ ಇನ್ನೂ ಸಮಯ ಸಾಕಷ್ಟಿದೆ. ಶಾಲಾರಂಭದ ಬಗ್ಗೆ ಮಕ್ಕಳ ಯೋಗಕ್ಷೇಮ ಹಾಗೂ ಭವಿಷ್ಯ, ಅವರ ಹಿತ ಹಾಗೂ ಆರೋಗ್ಯವನ್ನು ಮನಸ್ಸಿನಲ್ಲಿಟ್ಟುಕೊಂಡು ಕ್ರಮ ತೆಗೆದುಕೊಳ್ಳುತ್ತೇವೆ ಎಂದು ತಿಳಿಸಿದರು.

ಈಗಾಗಲೇ ಪದವಿ ತರಗತಿಗಳನ್ನು ಆರಂಭಿಸಲಾಗಿದೆ. ಉನ್ನತ ಶಿಕ್ಷಣ ಇಲಾಖೆ ಹಾಗೂ ಆರೋಗ್ಯ ಇಲಾಖೆಯ ಜೊತೆ ಚರ್ಚಿಸಿದ್ದೇವೆ. ಶಾಲಾಭಿವೃದ್ಧಿ ಸಮಿತಿ, ಶಿಕ್ಷಕರು, ಸಾಧ್ಯವಾದಾಗಲೆಲ್ಲ ಪೋಷಕರ ಜೊತೆ ಮಾತನಾಡಿ ಅಭಿಪ್ರಾಯ ಸಂಗ್ರಹಿಸಿದ್ದೇವೆ. ಮುಂದಿನ ದಿನಗಳಲ್ಲಿ ಶಾಲಾರಂಭದ ಕುರಿತು ನಿರ್ಧಾರ ತೆಗೆದುಕೊಳ್ಳುತ್ತೇವೆ ಎಂದವರು ಹೇಳಿದರು.

ವಿದ್ಯಾಗಮ ಸತ್ತು ಹೋಗಿದೆ ಎಂಬ ಅಭಿಪ್ರಾಯವನ್ನು ಒಪ್ಪದ ಅವರು, ವಿದ್ಯಾಗಮ ಉತ್ತಮ ಕ್ರಮವಾಗಿತ್ತು. ಕೆಲವರು ಅದನ್ನು ಸಾಯಿಸುವ ಪ್ರಯತ್ನ **(2ನೇ ಪುಟಕ್ಕೆ)**

### ಉತ್ಸವ್ ರಾಕ್ ಗಾರ್ಡನ್ ನಿರ್ಮಾತೃ

## ಸೊಲಬಕ್ಕನವರ್ ಇನ್ನಿಲ್ಲ



ದಾವಣಗೆರೆ, ನ. 19 - ಅಂತರರಾಷ್ಟ್ರೀಯ ಚಿತ್ರಕಲಾವಿದರೂ, ಜಾನಪದ ರಂಗಕರ್ಮಿಗಳೂ, ಶಿಲ್ಪಾ ಕಲಾವನಗಳ ರೂವಾರಿಗಳೂ, ಕರ್ನಾಟಕ ಬಯಲಾಟ ಅಕಾಡೆಮಿ ಅಧ್ಯಕ್ಷರೂ ಆಗಿದ್ದ ಡಾ. ಟಿ.ಬಿ.ಸೊಲಬಕ್ಕನವರ್ ಇಂದು ಮುಂಜಾನೆ ನಿಧನರಾದರು.

ಮೂಲತಃ ಧಾರವಾಡ ಜಿಲ್ಲೆ ಶಿಗ್ಗಾಂವ್ ತಾಲ್ಲೂಕು ಹೂಲಸೋಗಿ ಗ್ರಾಮದಲ್ಲಿ 1947ರಲ್ಲಿ ಬಡ ರೈತ ಕುಟುಂಬದಲ್ಲಿ ಜನಿಸಿದ ತಿಪ್ಪಣ್ಣ ಬಸವಲಿಂಗಪ್ಪ ಸೊಲಬಕ್ಕನವರ್ ಅವರು, ಪ್ರಾಥಮಿಕ ಶಾಲೆಯನ್ನು ಹೂಲಸೋಗಿಯಲ್ಲೂ, ಪ್ರೌಢಶಾಲೆಯನ್ನು ಶಿಗ್ಗಾಂವಿಯಲ್ಲಿಯೂ ಅಭ್ಯಾಸ ಮಾಡಿದರು. ಚಿಕ್ಕಂದಿನಿಂದಲೂ ಚಿತ್ರಕಲೆ ಹಾಗೂ ಜಾನಪದ, ರಂಗಭೂಮಿ ಕಲೆಯ ಬಗ್ಗೆ ಒಲವುಳ್ಳರಾಗಿದ್ದ ಸೊಲಬಕ್ಕನವರ್, ಮುಂದೆ ಗದಗದಲ್ಲಿ ಕಲಾವಿದ ಅಕ್ಕಿ ಕಲಾಶಾಲೆಯಲ್ಲಿ ಚಿತ್ರಕಲಾ ಅಭ್ಯಾಸ ಮಾಡುತ್ತಾರೆ. ಆ ಕಾಲಘಟ್ಟದಲ್ಲೇ ದೊಡ್ಡಾಟ, ಬಯಲಾಟ, ನಾಟಕಗಳ ತಂಡ ಕಟ್ಟಿಕೊಂಡು ಪ್ರದರ್ಶನ ಮಾಡುತ್ತಿರುತ್ತಾರೆ.

ನಂತರದಲ್ಲಿ ದಾವಣಗೆರೆಯಲ್ಲಿ ಸರ್ಕಾರ ಚಿತ್ರಕಲಾ **(2ನೇ ಪುಟಕ್ಕೆ)**

## ಮನೆ ಬಾಗಿಲಿಗೆ ತಾಜಾ ಮೀನು

ಬೆಂಗಳೂರು, ನ.19- ಮನೆ ಬಾಗಿಲಿಗೆ ತಾಜಾ ಮೀನುಗಳನ್ನು ಸರ್ಕಾರ ತಲುಪಿಸಲಿದೆ ಎಂದು ಬಂದರು ಮತ್ತು ಮೀನುಗಾರಿಕೆ ಸಚಿವ ಕೋಟಾ ಶ್ರೀನಿವಾಸ ಪೂಜಾರಿ ಹೇಳಿದ್ದಾರೆ. ಸುದ್ದಿಗೋಷ್ಠಿ ಯಲ್ಲಿ ಮಾತನಾಡಿದ ಅವರು, ಕರ್ನಾಟಕ ರಾಜ್ಯ ಮೀನುಗಾರಿಕೆ ಇಲಾಖೆಯಿಂದ ಈ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗುತ್ತಿದೆ ಎಂದರು.



ಆನ್‌ಲೈನ್ ಮುಖಾಂತರ ಆರ್ಡರ್ ಮಾಡಿದರೆ ಮನೆ ಬಾಗಿಲಿಗೆ ಮೀನು ತಂದು ಕೊಡಲಿದ್ದಾರೆ. **(2ನೇ ಪುಟಕ್ಕೆ)**

## 5 ವರ್ಷಗಳಲ್ಲಿ 300 ಶತಕೋಟಿ ಡಾಲರ್ ಡಿಜಿಟಲ್ ಆರ್ಥಿಕತೆ

**ಉಪ ಮುಖ್ಯಮಂತ್ರಿ ಅಶ್ವತ್ಥನಾರಾಯಣ**

ಬೆಂಗಳೂರು, ನ. 19- ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಡಿಜಿಟಲ್ ಇಂಡಿಯಾ ಹಾಗೂ ಆತ್ಮನಿರ್ಭರ್ ಭಾರತ್ ಪರಿಕಲ್ಪನೆ ಹಿನ್ನೆಲೆಯಲ್ಲಿ ಕರ್ನಾಟಕವು ಅಭಿವೃದ್ಧಿಯಲ್ಲಿ ದಾಪುಗಾಲು ಇಡುತ್ತಿದ್ದು, ಮುಂದಿನ ಐದು ವರ್ಷಗಳಲ್ಲಿ 300 ಶತಕೋಟಿ ಡಾಲರ್ ಡಿಜಿಟಲ್ ಆರ್ಥಿಕತೆಯ ಗುರಿ ಸಾಧಿಸಲಾಗುವುದು ಎಂದು ಐಟಿ-ಬಿಟಿ ಸಚಿವರೂ ಆಗಿರುವ ಉಪ ಮುಖ್ಯಮಂತ್ರಿ ಡಾ. ಸಿ.ಎನ್. ಅಶ್ವತ್ಥನಾರಾಯಣ ಹೇಳಿ ದರು. ಬೆಂಗಳೂರು ಟೆಕ್ ಸಮ್ಮಿಟ್ (ಬಿಟಿಎಸ್)-2020 ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದ ಅವರು, ಸದ್ಯಕ್ಕೆ 52 ಶತಕೋಟಿ ಡಾಲರ್‌ನಷ್ಟು ಡಿಜಿಟಲ್ ಆರ್ಥಿಕತೆಯ ಗುರಿಯನ್ನು ರಾಜ್ಯವು **(2ನೇ ಪುಟಕ್ಕೆ)**

### ಕೊರೊನಾ ವಾರಿಯರ್ ಮಕ್ಕಳಿಗೆ 5 ಎಂಬಿಬಿಎಸ್ ಸೀಟು

ನವದೆಹಲಿ,ನ. 19 – ಕೊರೊನಾ ವಾರಿಯರ್‌ಗಳ ಮಕ್ಕಳಿಗಾಗಿ ಎಂ.ಬಿ.ಬಿ.ಎಸ್. ಕೋಟಾದಲ್ಲಿ ಐದು ಸ್ಥಾನಗಳನ್ನು ಮೀಸಲಾಗಿರಿಸಲು ಕೇಂದ್ರ ಸರ್ಕಾರ ನಿರ್ಧರಿಸಿದೆ.

ಕೊರೊನಾ ವಾರಿಯರ್‌ಗಳು ನೀಡಿರುವ ಕೊಡುಗೆಯನ್ನು ಗೌರವಿಸಲು 2020-21ರ ಸಾಲಿನಲ್ಲಿ ಐದು ಎಂ.ಬಿ.ಬಿ.ಎಸ್. ಸೀಟುಗಳನ್ನು ಕೊರೊನಾ ವಾರಿಯರ್‌ಗಳ ಮಕ್ಕಳಿಗೆ ಮೀಸಲಿಡಲಾಗುವುದು ಎಂದು ಕೇಂದ್ರ ಆರೋಗ್ಯ ಸಚಿವ ಹರ್ಷ ವರ್ಧನ್ ತಿಳಿಸಿದ್ದಾರೆ.

## ಬಳ್ಳಾರಿ ವಿಭಜನೆ ನಿರ್ಣಯ ಏಕಪಕ್ಷೀಯ

### ಹರಪನಹಳ್ಳಿ ಶಾಸಕ ಜಿ. ಕರುಣಾಕರ ರೆಡ್ಡಿ ಅಸಮಾಧಾನ




ಹರಪನಹಳ್ಳಿ, ನ.19- ಬಳ್ಳಾರಿ ಜಿಲ್ಲೆಯನ್ನು ವಿಭಜಿಸಿ ವಿಜಯನಗರವನ್ನು ಪ್ರತ್ಯೇಕ ಮಾಡುವ ನಿರ್ಣಯ ಏಕಪಕ್ಷೀಯವಾಗಿದೆ ಎಂದು ಶಾಸಕ ಜಿ.ಕರುಣಾಕರ ರೆಡ್ಡಿ ಬಹಿರಂಗವಾಗಿಯೇ ಉದ್ದೇಶಿತ ವಿಜಯನಗರ ಜಿಲ್ಲೆಗೆ ವಿರೋಧ ವ್ಯಕ್ತಪಡಿಸಿದ್ದಾರೆ.


ತಾಲ್ಲೂಕಿನ ಶ್ರೀಕಂಠಪುರದಲ್ಲಿ ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಈ ಹಿಂದೆ ಬಳ್ಳಾರಿ ಜಿಲ್ಲೆಯನ್ನು ವಿಭಜಿಸಿ ಹೊಸ ಜಿಲ್ಲೆ ಮಾಡುವ ಸಂಬಂಧ ಮುಖ್ಯ ಮಂತ್ರಿಯವರು ಬೆಂಗಳೂರಿನಲ್ಲಿ ಸಭೆ ಕರೆದಾಗ ಒಮ್ಮತ ಮೂಡಿರಲಿಲ್ಲ. ಜಿಲ್ಲೆಯ ಶಾಸಕರು, ಮಾಜಿ ಶಾಸಕರುಗಳನ್ನೊಳಗೊಂಡು ಇನ್ನೊಂದು ಸಭೆ ಕರೆಯುವುದಾಗಿ ಸಿಎಂ ಹೇಳಿದ್ದರು. ಆದರೆ, ನಿನ್ನೆ ನಡೆದ ಸಚಿವ ಸಂಪುಟ ಸಭೆಯಲ್ಲಿ ಏಕಾಏಕಿ ನೂತನ ವಿಜಯನಗರ ಜಿಲ್ಲೆಗೆ ಮೌಖಿಕ ಒಪ್ಪಿಗೆ ನೀಡಿರುವುದಕ್ಕೆ ನನ್ನ ವಿರೋಧವಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಹರಪನಹಳ್ಳಿಯನ್ನು ಉದ್ದೇಶಿತ ವಿಜಯನಗರ ಜಿಲ್ಲೆಗೆ ಸೇರಿಸಬಾರದು ಎಂದು ಮುಖ್ಯಮಂತ್ರಿ ಯವರಿಗೆ ಪತ್ರ ಬರೆಯುತ್ತೇನೆ ಹಾಗೂ ಬರುವ ವಿಧಾನಸಭೆ ಅಧಿವೇಶನದಲ್ಲಿ ಹರಪನಹಳ್ಳಿಯನ್ನೇ ಜಿಲ್ಲೆಯನ್ನಾಗಿ ಮಾಡುವಂತೆ ಪಟ್ಟು ಹಿಡಿಯುವುದಾಗಿ ಅವರು ತಿಳಿಸಿದರು.

ಹೊಸಪೇಟೆಯನ್ನು ಜಿಲ್ಲೆಯನ್ನಾಗಿ ಮಾಡುವುದು ಅವೈಜ್ಞಾನಿಕವಾಗಿದ್ದು, ವೈಜ್ಞಾನಿಕವಾಗಿ ಹಡಗಲಿ, ಹಗರಿ ಬೊಮ್ಮನಹಳ್ಳಿ, ಕೊಟ್ಟೂರನ್ನೊಳಗೊಂಡು 130 **(2ನೇ ಪುಟಕ್ಕೆ)**

## ಜನತಾ ಬಜಾರ್ ಅಧ್ಯಕ್ಷರಾಗಿ ಬಿವಿಸಿ ಪುನರಾಯ್ಕೆ





**ಉಪಾಧ್ಯಕ್ಷರಾಗಿ ಬಿ.ಸಿ. ಶಿಲ್ಪಾ**

ದಾವಣಗೆರೆ,ನ.19- ಜಿಲ್ಲಾ ಕೇಂದ್ರ ಸಹಕಾರ ಸಗಟು ಮಾರಾಟ ಮಳಿಗೆ (ಜನತಾ ಬಜಾರ್) ಆಡಳಿತ ಮಂಡಳಿಯ ಅಧ್ಯಕ್ಷರಾಗಿ ಸಂಘದ ಹಾಲಿ ಅಧ್ಯಕ್ಷರೂ ಆದ ಹಿರಿಯ ಸಹಕಾರಿ ಧುರೀಣ ಬಿ.ವಿ. ಚಂದ್ರಶೇಖರ್ ಮತ್ತೊಂದು ಅವಧಿಗೆ ಪುನರಾಯ್ಕೆಯಾಗಿದ್ದಾರೆ.

ಉಪಾಧ್ಯಕ್ಷರಾಗಿ ಶ್ರೀಮತಿ ಬಿ.ಸಿ.ಶಿಲ್ಪಾ ಅವರೂ ಕೂಡಾ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಸಂಘದ ಕಚೇರಿಯಲ್ಲಿ ಇಂದು ನಡೆದ ಆಡಳಿತ ಮಂಡಳಿಯ ಸಭೆಯಲ್ಲಿ ಈ ಆಯ್ಕೆ ಒಮ್ಮತದಿಂದ ನಡೆಯಿತು.

ಸಂಘದ ನಿರ್ದೇಶಕರುಗಳಾದ ಕೆ.ಆರ್. ಗಂಗರಾಜ್, ಶ್ರೀಮತಿ ಅಮ್ರೀನ್ ನೂರುಲ್ಲಾ, ಕೆ.ಹೆಚ್. ಷಣ್ಮುಖಪ್ಪ, ಹೆಚ್. ತಿಪ್ಪೇಸ್ವಾಮಿ, ಜಿ.ಡಿ. ಗುರುಸ್ವಾಮಿ, ಎ. ಅಜ್ವಲ್ ಖಾನ್, ಹೆಚ್. ವಿಷ್ಣುಪಂಥ್, ಬಿ.ಮಂಜುನಾಥ್, ಕೆ. ಚಂದ್ರಣ್ಣ, ಎ.ಮಾರುತಿ, ಶ್ರೀಮತಿ ನಂದಿತಾ ಡಿ.ಆರ್. ಮಂಜು **(2ನೇ ಪುಟಕ್ಕೆ)**

## ಹರಪನಹಳ್ಳಿ ತಾ॥ ನಲ್ಲಿ 8 ಕೋ. ರೂ.ಗಳ ಕಾಮಗಾರಿಗಳಿಗೆ ಸಂಸದರ ಚಾಲನೆ



ಹರಪನಹಳ್ಳಿ ನ.19- ತಾಲ್ಲೂಕಿನ ವಿವಿಧೆಡೆ ಒಟ್ಟು 8 ಕೋಟಿ ರೂಪಾಯಿ ವೆಚ್ಚದ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಶಾಸಕ ಜಿ. ಕರುಣಾಕರ ರೆಡ್ಡಿ ಮತ್ತು ಸಂಸದ ಜಿ.ಎಂ. ಸಿದ್ಧೇಶ್ವರ ಇಂದು ಚಾಲನೆ ನೀಡಿದರು.

ವಡ್ಡಿನಹಳ್ಳಿ ಗ್ರಾಮದಿಂದ ಉಚ್ಚಂಗಿದುರ್ಗ, ಹಿರೇಮೇಗಳಗೇರಿಗೆ ಕೂಡುವ ರಸ್ತೆ ಮಾರ್ಗ ವಯಾ ಚಿಕ್ಕಮೇಗಳಗೇರಿ 4.34 ಕಿ.ಮೀ. ಕಾಂಕ್ರೀಟ್ ರಸ್ತೆ ಕಾಮಗಾರಿಗೆ 5 ಕೋಟಿ ರೂ. ನಿಗದಿಯಾಗಿದೆ. ಹಿರೇಮೇಗಳಗೇರಿಯಿಂದ ಶ್ರೀಕಂಠಪುರ ಗ್ರಾಮಕ್ಕೆ ಸೇರುವ 3 ಕೋಟಿ ರೂ. ವೆಚ್ಚದ 2.80 ಕಿ.ಮೀ. ಕಾಂಕ್ರೀಟ್ ರಸ್ತೆ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಲಾಯಿತು.

ಈ ಸಂದರ್ಭದಲ್ಲಿ ಜಿ.ಪಂ. ಸದಸ್ಯೆ ರಶ್ಮಿ ರಾಜಪ್ಪ, ಬಿಜೆಪಿ ಬಳ್ಳಾರಿ ಜಿಲ್ಲಾ ಎಸ್ಸಿ ಮೋರ್ಚಾ ಕಾರ್ಯದರ್ಶಿ ಆರ್. ಲೋಕೇಶ್, ಬಿಜೆಪಿ **(2ನೇ ಪುಟಕ್ಕೆ)**

## ರಫ್ತು ಉದ್ದಿಮೆದಾರರ ಸಮಸ್ಯೆಗಳನ್ನು ನಿವಾರಿಸಲು ಕ್ರಮ

**ಜಿಲ್ಲಾ ಮಟ್ಟದ ರಫ್ತು ಉತ್ತೇಜನಾ ಸಮಿತಿ ಸಭೆಯಲ್ಲಿ ಜಿಲ್ಲಾಧಿಕಾರಿ**

ದಾವಣಗೆರೆ, ನ.19- ಜಿಲ್ಲೆಯ ರಫ್ತು ಉದ್ದಿಮೆ ದಾರರ ಕುಂದು ಕೊರತೆಗಳನ್ನು ನಿವಾರಿಸಿ, ರಫ್ತಿಗೆ ಉತ್ತೇಜನ ನೀಡಲು ಜಿಲ್ಲಾ ಮಟ್ಟದ ರಫ್ತು ಉತ್ತೇಜನ ಸಮಿತಿಯನ್ನು ರಚಿಸಲಾಗಿದ್ದು, ಇನ್ನು ಮುಂದೆ ನಿಯಮಿತವಾಗಿ ಸಭೆ ಕರೆದು ರಫ್ತುದಾರರ ಅಹವಾಲುಗಳನ್ನು ಆಲಿಸಿ, ಸೂಕ್ತ ಕ್ರಮ ವಹಿಸಲಾಗುವುದು ಎಂದು ಜಿಲ್ಲಾಧಿಕಾರಿ ಮಹಾಂತೇಶ ಬೀಳಗಿ ತಿಳಿಸಿದರು.


ಜಿಲ್ಲಾಡಳಿತ ಕಚೇರಿ ಸಭಾಂಗಣದಲ್ಲಿ ಗುರುವಾರ ಏರ್ಪಡಿಸಲಾಗಿದ್ದ ಜಿಲ್ಲಾ ಮಟ್ಟದ ರಫ್ತು ಉತ್ತೇಜನಾ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಸಮಿತಿಗೆ ಅವಶ್ಯವಾದ ಸದಸ್ಯರನ್ನು ನೇಮಿಸಿ ಮಾತನಾಡಿ, ಜಿಲ್ಲೆಯನ್ನು ರಫ್ತು ಹಬ್ ಮಾಡಲು ಎಲ್ಲ ಅಗತ್ಯ ಕ್ರಮ ಕೈಗೊಳ್ಳಲು ಪ್ರಯತ್ನಿಸಲಾಗುವುದು ಎಂದರು.

ವಿದೇಶಿ ವ್ಯಾಪಾರದ ಹೆಚ್ಚುವರಿ ಪ್ರಧಾನ ನಿರ್ದೇಶಕ ಜಿ.ವಿ.ಪಾಟೀಲ್ ಮಾತನಾಡಿ, ಜಿಲ್ಲಾ ರಫ್ತು ಉತ್ತೇಜನಾ ಸಮಿತಿಯನ್ನು ರಚಿಸಲಾಗಿದ್ದು, ಒಂದು ಜಿಲ್ಲೆ ಒಂದು ಉತ್ಪನ್ನ ಕಾರ್ಯಕ್ರಮ ಅನುಷ್ಠಾನಗೊಳಿಸಲು ಜಿಲ್ಲೆಯಲ್ಲಿ ತೃಣಧಾನ್ಯ (ನವಣೆ, ಸಜ್ಜೆ, ಸಾವೆ, ರಾಗಿ) ಹಾಗೂ ಮೆಕ್ಕೆಜೋಳ ಮತ್ತು ಉಪ ಉತ್ಪನ್ನಗಳನ್ನು ಗುರುತಿಸಲಾಗಿದೆ ಎಂದರು.

**ರಫ್ತು ತಾಣಕ್ಕೆ ಕ್ರಿಯಾ ಯೋಜನೆ :** 'ಡಿಸ್ಟ್ರಿಕ್ಟ್ ಆಸ್ ಎ ಎಕ್ಸ್‌ಪೋರ್ಟ್ ಹಬ್' ಎಂಬ ಕಾರ್ಯಕ್ರಮ ಅನುಷ್ಠಾನಗೊಳಿಸಲು ಜಿಲ್ಲೆಯಲ್ಲಿ ಮೆಕ್ಕೆಜೋಳ, ತೃಣಧಾನ್ಯಗಳು ಸೇರಿದಂತೆ ಏಳು ಉತ್ಪನ್ನಗಳನ್ನು ಗುರುತಿಸಿದ್ದು, ಇವುಗಳಿಗೆ ಮಾರುಕಟ್ಟೆ ಸೌಲಭ್ಯ ಒದಗಿಸಲು ಹಾಗೂ ಉತ್ಪನ್ನಗಳ ಪೂರೈಕೆ ಜಾಲದ ಬಗ್ಗೆ ಮಾಹಿತಿ ಸಂಗ್ರಹಿಸಿ ಜಿಲ್ಲಾ ಕ್ರಿಯಾ ಯೋಜನೆ ತಯಾರಿಸಬೇಕು. ಜಿಲ್ಲೆಯಲ್ಲಿ ಎಷ್ಟು ರಫ್ತುದಾರರು ತಮ್ಮ ಉತ್ಪನ್ನಗಳನ್ನು ಯಾವ ದೇಶಗಳಿಗೆ ಎಷ್ಟು ಮೌಲ್ಯದ ಉತ್ಪನ್ನಗಳನ್ನು ರಫ್ತು ಮಾಡಲಾಗುತ್ತದೆ ಎಂಬ ಮಾಹಿತಿ ಸೇರಿಸಿ ಕ್ರಿಯಾ ಯೋಜನೆಯನ್ನು ಸಿದ್ದಪಡಿಸಿ ಡಿಸೆಂಬರ್ ಒಳಗೆ ಸಲ್ಲಿಸುವಂತೆ ಜಿಲ್ಲಾ ಕೈಗಾರಿಕಾ ಕೇಂದ್ರದ ಜಂಟಿ ನಿರ್ದೇಶಕರಿಗೆ ಸೂಚಿಸಿದರು. ಅಲ್ಲದೇ ಜಿಲ್ಲೆಯ ಉತ್ಪನ್ನಗಳಿಗೆ ಅವಶ್ಯಕವಾದ ಪರೀಕ್ಷಾ ಕೇಂದ್ರಗಳು, ಸಾಗಾಣಿಕೆ ಹಾಗೂ ಇತರೆ ವ್ಯವಸ್ಥೆ ಬಗ್ಗೆ ಸಹ ಉದ್ದಿಮೆದಾರರಿಂದ ಪ್ರಸ್ತಾವನೆ ಪಡೆದು ಸಲ್ಲಿಸುವಂತೆ ತಿಳಿಸಿದರು.

ಗ್ರೀನ್ ಆಗ್ರೋ ಪ್ಯಾಕ್ ಪ್ರೈಲಿ ನ ಮಾಲೀಕ ಕರಿಬಸಪ್ಪ, ಇಂಡಸ್ ವೆಜ್ ಪ್ರೊ ಪ್ರೈಲಿ ನ ಗಿರೀಶ್, ವೆಲ್ಕಸ್ತ ಫೌಂಡ್ರಿಯ ಮಾಲೀಕ ಸತ್ಯನಾರಾಯಣ, ಉದ್ದಿಮೆದಾರ ಪ್ರಕಾಶ್, ಮಿಲ್ಲೆಟ್ **(4ನೇ ಪುಟಕ್ಕೆ)**

# ಕೂಡ್ಲಿಗಿ ಪ.ಪಂ.ನ ಮೊದಲ ಸಭೆಯಲ್ಲೇ ಸಮಸ್ಯೆಗಳ ಅನಾವರಣ



ಕೂಡ್ಲಿಗಿ, ನ.19- ಪಟ್ಟಣದಲ್ಲಿ ಬೀದಿ ದೀಪಗಳಿದ್ದರೂ ಉರಿಯುತ್ತಿಲ್ಲ, ಚರಂಡಿಯಿದ್ದರೂ ಸ್ವಚ್ಛತೆ ಇಲ್ಲ, ಈಗ್ಗೆ ವರ್ಷದಿಂದ ಜನತೆ ಅಧಿಕಾರಿಗಳ ನಿರ್ಲಕ್ಷ್ಯಕ್ಕೆ ರೋಸಿ ಹೋಗಿದ್ದಾರೆ, ಈಗ ನಾವು ಸದಸ್ಯರಾಗಿದ್ದು ನಮ್ಮನ್ನು ಜನತೆ ಶಪಿಸುತ್ತಾರೆ. ಈ ಕೂಡಲೇ ಪಟ್ಟಣದಲ್ಲಿ ಮೂಲಭೂತ ಸೌಕರ್ಯ ನೀಡಬೇಕೆಂದು ಪಟ್ಟಣ ಪಂಚಾಯ್ತಿ ಸದಸ್ಯ ಕೆ.ಈಶಪ್ಪ ಅವರು ಮುಖ್ಯಾಧಿಕಾರಿ ಫಕೃದ್ದೀನ್ ಅವರನ್ನು ತೀವ್ರವಾಗಿ ತರಾಟೆಗೆ ತೆಗೆದುಕೊಂಡರು.

ಪಟ್ಟಣದ ತಾ.ಪಂ. ಸಭಾಂಗಣದಲ್ಲಿ ಕೂಡ್ಲಿಗಿ ಪಟ್ಟಣ ಪಂಚಾಯ್ತಿ ನೂತನ ಅಧ್ಯಕ್ಷರಾದ ಎಂ.ಶಾರದಾಬಾಯಿ ಅವರ ಅಧ್ಯಕ್ಷತೆಯಲ್ಲಿ ಇಂದು ನಡೆದ ಪ್ರಗತಿ ಸಭೆಯಲ್ಲಿ ಅವರು ಮಾತನಾಡುತ್ತಿದ್ದರು.

ಕೂಡ್ಲಿಗಿ ಪಟ್ಟಣದಲ್ಲಿ ಅತೀ ಹೆಚ್ಚು ತೆರಿಗೆ ವಿಧಿಸುತ್ತಿದ್ದು ಜನಸಾಮಾನ್ಯರು ರೋಸಿಹೋಗಿದ್ದಾರೆ. ಇಲ್ಲಿ ಬಹುತೇಕ ಬಡ ಜನತೆ ಇದ್ದು, ಮನೆ ಕಂದಾಯ ಕಟ್ಟಲು ಬಂದರೂ ಅಧಿಕಾರಿಗಳು ಹಣ ಕಟ್ಟಿಸಿಕೊಳ್ಳಲಾರದೇ ನಿರ್ಲಕ್ಷ್ಯ ವಹಿಸುತ್ತಿರುವುದು ಕಂಡು ಬಂದಿದೆ. ಇಲ್ಲಿಯವರೆಗೂ ಪಟ್ಟಣ ಪಂಚಾಯ್ತಿಯ ಆಡಳಿತ ಇದ್ದಿಲ್ಲ. ಈಗಾಗಿ ಅಧಿಕಾರಿಗಳೇ ಆಟ ಆಡಿದ್ದೀರಿ. ಇನ್ನು ಮುಂದೆ ನಿಮ್ಮ ಆಟ ನಡೆಯುವುದಿಲ್ಲ ಎಂದು ತಿಳಿಸಿದರು.

ಇದಕ್ಕೆ ಇನ್ನಿತರೆ ಚಿರಿಬಿ ಮಂಜುನಾಥ್, ಬಾಸುನಾಯ್ಕ ಸೇರಿದಂತೆ ಇತರೆ ಸದಸ್ಯರು ಧ್ವನಿಗೂಡಿಸಿದರು. ಮುಖ್ಯಾಧಿಕಾರಿಗಳು ಪಟ್ಟಣ ಪಂಚಾಯ್ತಿ ಆಡಳಿತ ಬಿಟ್ಟು ಹೊರಗಿನವರಿಗೆ ಮಣೆ ಹಾಕುತ್ತಿರುವುದು ಸರಿಯಾದ ಕ್ರಮವಲ್ಲ ಎಂದು 7ನೇ ವಾರ್ಡ್ ಸದಸ್ಯ ಕಾವಲ್ಲಿ ಶಿವಪ್ಪ ನಾಯಕ ಮುಖ್ಯಾಧಿಕಾರಿಗಳಿಗೆ ಎಚ್ಚರಿಸಿದರು. ನಮ್ಮ ವಾರ್ಡಿನಲ್ಲಿ ಶುದ್ಧ ಕುಡಿಯುವ ನೀರಿನ ಸಮಸ್ಯೆ ಇದ್ದು ಕಿಲೋಮೀಟರ್ ಗಟ್ಟಲೇ ಕೂಡ್ಲಿಗಿಗೆ ಬಂದು ನೀರನ್ನು ತೆಗೆದುಕೊಂಡು ಹೋಗಬೇಕಿದೆ. ಅಧಿಕಾರಿಗಳು ಶುದ್ಧ ಕುಡಿಯುವ ನೀರನ ಘಟಕ ಉಪಯೋಗಕ್ಕೆ ಬರದಿದ್ದರೆ ಯಾಕೆ ಸ್ಥಾಪನೆ ಮಾಡಿದ್ದೀರಿ ಎಂದು 19ನೇ ವಾರ್ಡ್ ಸದಸ್ಯ ಪೂರ್ಯಾನಾಯ್ಕ ಮುಖ್ಯಾಧಿಕಾರಿಗಳಿಗೆ ಬೆವರು ಇಳಿಸಿದರು.

**ತೆರಿಗೆ ವ್ಯವಸ್ಥೆಯಲ್ಲಿ ಬದಲಾವಣೆಯಾಗಬೇಕು:** ಕೂಡ್ಲಿಗಿ ಪಟ್ಟಣ ಪಂಚಾಯ್ತಿಯಲ್ಲಿ ಇಲ್ಲಿಯವರೆಗೂ ಅವೈಜ್ಞಾನಿಕವಾಗಿ ತೆರಿಗೆಯನ್ನು ವಸೂಲಿ ಮಾಡಿದ್ದು ಬಡವ, ಬಲ್ಲಿದ ಎಂಬ ಭೇದ, ಭಾವವಿಲ್ಲದೇ ತೆರಿಗೆ ವಸೂಲಿ ಮಾಡುವುದು ಬೇಡ. ಕೊಟ್ಟೂರು, ಹಗರಿಬೊಮ್ಮನಹಳ್ಳಿ ಸೇರಿದಂತೆ ಜಿಲ್ಲೆಯ ಇತರೆ ಪಟ್ಟಣ ಪಂಚಾಯ್ತಿ ಪುರಸಭೆಗಳಲ್ಲಿ ಯಾವ ರೀತಿ ತೆರಿಗೆ ಪದ್ಧತಿ ಇದೆ ಅದನ್ನು ಮುಂದಿನ ಸಭೆಯಲ್ಲಿ ವರದಿ ನೀಡಿ ನಂತರ ನಮ್ಮ ಪಂಚಾಯ್ತಿಯ ತೆರಿಗೆಯನ್ನು ನಿರ್ಧರಿಸೋಣ ಎಂದು ಮುಖ್ಯಾಧಿಕಾರಿಗೆ ಪಟ್ಟಣ ಪಂಚಾಯ್ತಿ ಸದಸ್ಯ ತಳಾಸ ವೆಂಕಟೇಶ್ ಸಲಹೆ ನೀಡಿದರು.

**ಮಹಿಳಾ ಸದಸ್ಯೆಯಿಂದ ಮಾತಿನ ಚಾಟಿ :** ಪಟ್ಟಣದ ಅಂಬೇಡ್ಕರ್ ನಗರದಲ್ಲಿ ಸಾಮೂಹಿಕ ಮಹಿಳೆಯರ ಶೌಚಾಲಯದಲ್ಲಿ ನೀರು ಹಾಗೂ ಇತರೆ ಸೌಲಭ್ಯಗಳಿಲ್ಲದೇ ಮಹಿಳೆಯರು ಶೌಚಾಲಯಕ್ಕೆ ಹೋಗುವುದಕ್ಕೆ ಸಾಧ್ಯವಾಗುತ್ತಿಲ್ಲ, ಮಹಿಳೆಯರ ಶೌಚಾಲಯದಲ್ಲಿ ಕುಡಿಯುವ ನೀರು ಸೇರಿದಂತೆ ಸ್ವಚ್ಛತೆ ಕಾಪಾಡುವುದು ಪಟ್ಟಣ ಪಂಚಾಯ್ತಿ ಕರ್ತವ್ಯವಾದರೂ ಇಲ್ಲಿಯವರೆಗೂ ಈ ಬಗ್ಗೆ ಗಮನಹರಿಸಿಲ್ಲ, ಮಹಿಳೆಯರಿಗೆ ಪಟ್ಟಣದಲ್ಲಿ ಸೂಕ್ತ ಸೌಲಭ್ಯ, ರಕ್ಷಣೆ ಇಲ್ಲವಾದರೆ ಹೇಗೆ ಎಂದು 14ನೇ ವಾರ್ಡಿನ ರೇಣುಕಾ ಎಸ್.ದುರುಗೇಶ್ ಅವರು ಮುಖ್ಯಾಧಿಕಾರಿಗೆ ಮಾತಿನ ಚಾಟಿ ಬೀಸಿದರು.

ಈ ಸಂದರ್ಭದಲ್ಲಿ ಉಪಾಧ್ಯಕ್ಷರಾದ ಊರಮ್ಮ, ಮುಖ್ಯಾಧಿಕಾರಿ ಫಕೃದ್ದೀನ್ ಮತ್ತಿತರರು ಉಪಸ್ಥಿತರಿದ್ದರು.

## ಉತ್ಸವ್ ರಾಕ್ ಗಾರ್ಡನ್ ನಿರ್ಮಾತೃ ಸೊಲಬಕ್ಕನವರ್ ಇನ್ನಿಲ್ಲ

**(1ನೇ ಪುಟದಿಂದ)** ಶಾಲೆಯನ್ನು ತೆರೆದಾಗ, ತಮ್ಮ ಅಂತಿಮ ವರ್ಷದ ಪದವಿಯನ್ನು ಸ್ಕೂಲ್ ಆಫ್ ಆರ್ಟ್ಸ್ ಪಡೆಯುತ್ತಾರೆ. ಅಲ್ಲದೇ ಸ್ಕೂಲ್ ಆಫ್ ಆರ್ಟ್ಸ್‌ನಲ್ಲಿಯೇ ಅಧ್ಯಾಪಕ ವೃತ್ತಿಯನ್ನು ಪ್ರಾರಂಭ ಮಾಡುತ್ತಾರೆ.

1975ರಲ್ಲಿ ಸಾವಿತ್ರಮ್ಮರೊಡನೆ ವಿವಾಹ ಜೀವನಕ್ಕೆ ಕಾಲಿಡುತ್ತಾರೆ ಹಾಗೂ ಹರ್ಷ ಮತ್ತು ವೇದ ಅವರಿಗೆ ಇಬ್ಬರು ಮಕ್ಕಳು.

ಮೂಲತಃ ಪಂಚಾಚಾರ್ಯ ಜನಾಂಗಕ್ಕೆ ಸೇರಿದ ಸೊಲಬಕ್ಕನವರ್‌ರವರ ವಂಶಸ್ಥರು ಕಾಶಿ ಪೀಠದ ಪರಮ ಭಕ್ತರಾಗಿರುತ್ತಾರೆ. ದಾವಣಗೆರೆ ಕಲಾ ಶಾಲೆಯ ಪ್ರಾಧ್ಯಾಪಕರಾದ ಮೇಲೆ ಸಮುದಾಯದಂತಹ ಪ್ರಗತಿಪರ ಸಂಘಟನೆಯ ಸದಸ್ಯರಾಗಿ, ಎಡಪಂಥೀಯರಾಗುತ್ತಾರೆ. ನಂತರದಲ್ಲಿ ಪ್ರಗತಿಪರ ಚಿಂತನೆಗಳ ನಾಟಕ, ಗೋಷ್ಠಿಗಳನ್ನು ಏರ್ಪಡಿಸುವಲ್ಲಿ ಮುಂದಾಗುತ್ತಾರೆ. ಸುಮಾರು 18 ವರ್ಷಗಳ ಕಾಲ ದಾವಣಗೆರೆಯಲ್ಲಿ ಸಮುದಾಯ ಹಾಗೂ ಪ್ರತಿಮ ಸಭಾ ಸಂಘಟನೆಗಳ ಜೊತೆಗೆ ನಿರಂತರ ಒಡನಾಟ ಅವರದು.

80ರ ದಶಕದಲ್ಲಿ ಅಧ್ಯಾಪಕ ವೃತ್ತಿಗೆ ರಾಜೀನಾಮೆ ನೀಡಿ, ತಮ್ಮ ಊರಾದ ಶಿಗ್ಗಾಂವ್ ತಾಲ್ಲೂಕು ಹೂಲಸೋಗಿ ಗ್ರಾಮಕ್ಕೆ ಹೆಂಡತಿ, ಮಕ್ಕಳನ್ನು ಕರೆದೊಯ್ಯುತ್ತಾರೆ. ಆ ವೇಳೆಗಾಗಲೇ ಇರುವ ಜಮೀನಿನ ಮೇಲೆ ಸಾಕಷ್ಟು ಸಾಲ ಇರುತ್ತದೆ. ಅದನ್ನು ಮಾರಿ ಹತ್ತಿರದಲ್ಲಿದ್ದ ಗೊಟಗೋಡಿ ಅಲ್ಲಿ ಸಾಲ ಸೋಲ ಮಾಡಿ, 12 ಎಕರೆ ಜಮೀನನ್ನು ಕೊಂಡುಕೊಳ್ಳುತ್ತಾರೆ. ಇದಕ್ಕೆ ಶಿಗ್ಗಾಂವಿಯಲ್ಲಿ ಪ್ರೌಢಶಾಲೆಯಲ್ಲಿ ಓದುತ್ತಿರುವ ಅವರ ಸಹಪಾಠಿಯಾಗಿದ್ದ ಚಂಪಲಾಲ್ (ಹಾಲಿ ದಾವಣಗೆರೆಯ ಖ್ಯಾತ ಬಟ್ಟೆ ಹಾಗೂ ಬಂಗಾರ ವ್ಯಾಪಾರಿ) ಅವರು, ಸೊಲಬಕ್ಕನವರ್‌ಗೆ ಯಾವುದೇ ಬರವಣಿಗೆಯಿಲ್ಲದೇ 5 ಲಕ್ಷ ರೂಪಾಯಿ ನೀಡುತ್ತಾರೆ. ಇಲ್ಲಿಂದ ಅವರ ಕನಸಿನ ಕೂಸು 'ಗೊಟಗೋಡಿ ರಾಕ್‌ಗಾರ್ಡನ್' ಜೀವ ಪಡೆಯುತ್ತದೆ.

ಈ ಸಂದರ್ಭದಲ್ಲಿ ಇಡೀ ಕುಟುಂಬ ಅನೇಕ ನೋವು ಕಷ್ಟಗಳನ್ನು ಅನುಭವಿಸುತ್ತದೆ. ಸೊಲಬಕ್ಕನವರ್ ಸ್ವತಃ ರಾಕ್‌ಗಾರ್ಡನ್ ಕಟ್ಟಲು ಕಲ್ಲು ಹೋರುತ್ತಾರೆ. ಮಗ ಹರ್ಷ ರಾಸುಗಳನ್ನು ಕಟ್ಟಿ ಹಾಲು ಮಾರಿ, ಜೀವನ ಸಾಗಿಸಲು ಆಸರೆಯಾಗುತ್ತಾರೆ. ಸುಮಾರು ಸತತ 5 ವರ್ಷಗಳ ನಂತರ 1990 ರ ವೇಳೆಗೆ 'ಉತ್ಸವ್ ರಾಕ್ ಗಾರ್ಡನ್' ಎಂಬ ಹೆಸರಿನಿಂದ ಪ್ರಾರಂಭವಾಗಿ ಇಡೀ ರಾಷ್ಟ್ರದ ಗಮನ ಸೆಳೆಯುತ್ತದೆ. ಮುಂದೆ ಸೊಲಬಕ್ಕನವರ್ ಇಡೀ ರಾಷ್ಟ್ರದಲ್ಲಿ ಆಲಮಟ್ಟಿ ಡ್ಯಾಂ ಮುಂಭಾಗ ಸೇರಿದಂತೆ ಅನೇಕ ಶಿಲ್ಪವನಗಳನ್ನು ನಿರ್ಮಾಣ ಮಾಡುತ್ತಾರೆ. ಇದೇ ಕಾಲಕ್ಕೆ ಗೊಟಗೋಡಿಯಲ್ಲಿ ಬಯಲಾಟಕ್ಕೆ ಮರುಜೀವ ಕೊಟ್ಟು ಕಲಾವಿದರನ್ನು ತಯಾರು ಮಾಡುತ್ತಾರೆ.

ಸರ್ಕಾರ ಇವರ ನೈಪುಣ್ಯತೆಯನ್ನು ಗಮನಿಸಿ, ಕರ್ನಾಟಕ ಬಯಲು ಸೀಮೆ ಅಕಾಡೆಮಿಯ ಅಧ್ಯಕ್ಷರನ್ನಾಗಿ ನೇಮಿಸುತ್ತದೆ. ಕೋವಿಡ್ ಬಂದ ನಂತರದ ದಿನಗಳಲ್ಲೂ ಕ್ರಿಯಾಶೀಲರಾಗಿದ್ದ ಸೊಲಬಕ್ಕನವರ್, ತಮ್ಮ ಚಟುವಟಿಕೆಗಳನ್ನು ಮುಂದುವರೆಸಿದ್ದರು. ಆದರೆ, ಒಂದೂವರೆ ತಿಂಗಳ ಹಿಂದೆ ಅವರಿಗೆ ಕೋವಿಡ್ ಸೋಂಕು ತಗುಲಿ ಆಸ್ಪತ್ರೆ ಸೇರುತ್ತಾರೆ. ನಂತರ ಗುಣಮುಖರಾಗಿ ಮತ್ತೆ ಗೊಟಗೋಡಿಗೆ ಬಂದರೂ ಪೂರ್ಣ ಪ್ರಮಾಣದಲ್ಲಿ ಚೇತರಿಸಿಕೊಳ್ಳಲು ಆಗಲಿಲ್ಲ. ಹೀಗೆ ವಾರದ ಹಿಂದೆ ಹುಬ್ಬಳ್ಳಿಯ ಖಾಸಗಿ ಆಸ್ಪತ್ರೆಯಲ್ಲಿ ದಾಖಲಾಗಿ ಚಿಕಿತ್ಸೆ ಪಡೆಯುತ್ತಿದ್ದರು. ಆದರೆ, ಚಿಕಿತ್ಸೆ ಫಲಕಾರಿಯಾಗದೇ ಇಂದು ಬೆಳಿಗ್ಗೆ ಕೊನೆಯುಸಿರೆಳೆದರು.

ಅವರ ಅಂತ್ಯಕ್ರಿಯೆ ಸಕಲ ಸರ್ಕಾರಿ ಗೌರವಗಳೊಂದಿಗೆ ಇಂದು ಮಧ್ಯಾಹ್ನ ಅವರ ಕರ್ಮ ಭೂಮಿ ಗೊಟಗೋಡಿಯಲ್ಲಿ ನೆರವೇರಿತು.

ಲಿಮ್ಕಾ ಪ್ರಶಸ್ತಿ ಸೇರಿದಂತೆ, ರಾಜ್ಯೋತ್ಸವ ಪ್ರಶಸ್ತಿ, ಅಕಾಡೆಮಿ ಪ್ರಶಸ್ತಿ ಸೇರಿದಂತೆ ಹಲವು ಸಂಘ-ಸಂಸ್ಥೆಗಳ ಪ್ರಶಸ್ತಿಗಳು ಸೊಲಬಕ್ಕನವರ್ ಮುಡಿಗೇರಿವೆ.

# ಮಹಿಳೆಯರಿಗೆ ಸಮಾನ ಅವಕಾಶಗಳು ಸಿಕ್ಕಾಗ ಮಾತ್ರ ಸಮಾಜ ಅಭಿವೃದ್ಧಿಯಾಗಲು ಸಾಧ್ಯ



**ಜಗಳೂರು : ಇಂದಿರಾ ಗಾಂಧಿ ಜನ್ಮದಿನಾಚರಣೆಯಲ್ಲಿ ಭವ್ಯ ನರಸಿಂಹಮೂರ್ತಿ**

ಜಗಳೂರು, ನ.19- ಮಹಿಳೆಯರಿಗೆ ಸಮಾನ ಅವಕಾಶಗಳು ಸಿಕ್ಕಾಗ ಮಾತ್ರ ಸಮಾಜ ಅಭಿವೃದ್ಧಿಯಾಗಲು ಸಾಧ್ಯವಾಗುತ್ತದೆ ಎಂದು ಕರ್ನಾಟಕ ಪ್ರದೇಶ ಮಹಿಳಾ ಕಾಂಗ್ರೆಸ್ ಪ್ರಿಯದರ್ಶಿನಿ ವಿಭಾಗದ ರಾಜ್ಯ ಸಂಚಾಲಕರಾದ ಭವ್ಯ ನರಸಿಂಹಮೂರ್ತಿ ಹೇಳಿದರು.

ಪಟ್ಟಣದ ಕಾಂಗ್ರೆಸ್ ಮುಖಂಡ ಸುಧೀರ್ ರೆಡ್ಡಿ ನಿವಾಸದ ಆವರಣದಲ್ಲಿ ಮಹಿಳಾ ಕಾಂಗ್ರೆಸ್ ವತಿಯಿಂದ ಆಯೋಜಿಸಿದ್ದ ಮಾಜಿ ಪ್ರಧಾನ ಮಂತ್ರಿ ಇಂದಿರಾ ಗಾಂಧಿ ಅವರ ಜನ್ಮದಿನಾಚರಣೆ ಹಾಗೂ ಪ್ರಿಯದರ್ಶಿನಿ ಸಂವಾದ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಕಾಂಗ್ರೆಸ್ ಪಕ್ಷಕ್ಕೆ ಮಾಜಿ ಪ್ರಧಾನಿ ಇಂದಿರಾಗಾಂಧಿ ಅವರು ತಮ್ಮದೇ ಕೊಡುಗೆ ನೀಡಿದ್ದಾರೆ. ಒಬ್ಬ ಮಹಿಳೆ ಒಂದು ದೇಶವನ್ನು ಸಮರ್ಥವಾಗಿ ಆಡಳಿತ ನಡೆಸಬಹುದು ಎನ್ನುವುದನ್ನು ತೋರಿಸಿಕೊಟ್ಟಿದ್ದು, ಅವರ ವಿಚಾರಧಾರೆಗಳಿಗೆ ಪ್ರಭಾವಿತಳಾಗಿ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯಿಂದ ಪ್ರಿಯದರ್ಶಿನಿ ಎಂಬ ವಿಭಾಗದಡಿಯಲ್ಲಿ ಮಹಿಳೆಯರ ಹಕ್ಕು ಮತ್ತು ಕರ್ತವ್ಯಗಳು ಹಾಗೂ ಮಹಿಳಾ ಶೋಷಣೆ ಮುಕ್ತ ಸಮಾಜ ನಿರ್ಮಾಣ ಮಾಡಲು ಪ್ರತೀ ತಾಲ್ಲೂಕು ಮಟ್ಟದಲ್ಲೂ ಸಂವಾದ ನಡೆಸುವ ಮೂಲಕ ಕಾಂಗ್ರೆಸ್ ಪಕ್ಷದ ಸಿದ್ಧಾಂತಗಳಿಗೆ ಮಹಿಳೆಯರನ್ನು ಸೆಳೆಯಲಾಗುವುದು ಎಂದರು.

ಮಾಜಿ ಶಾಸಕ ಹೆಚ್.ಪಿ. ರಾಜೇಶ್ ಮಾತನಾಡಿ, ಪ್ರಿಯದರ್ಶಿನಿ ಎಂದೇ ಖ್ಯಾತವಾಗಿದ್ದ ಉಕ್ಕಿನ ಮಹಿಳೆ ಇಂದಿರಾಗಾಂಧಿ ಅವರು ಸಂಕಷ್ಟದ ಸಮಯದಲ್ಲೂ ದೇಶದ ಸರ್ವಾಂಗೀಣ ಅಭಿವೃದ್ಧಿಗೆ ಶ್ರಮಿಸುವ ಮೂಲಕ ಗ್ರಾಮೀಣ ಭಾಗದ ಬಡಜನರ, ಮಹಿಳೆಯರ ಹಾಗೂ ಎಲ್ಲಾ ವರ್ಗದ ಜನರ ಹಿತಕಾಯುವಲ್ಲಿ ಶ್ರಮ ವಹಿಸಿದ್ದು, ಅವರ ಆದರ್ಶದ ಕೊಡುಗೆಗಳೇ ಇಂದಿನ ಕಾಂಗ್ರೆಸ್ ಪಕ್ಷದ ಉನ್ನತಿಗೆ ಕಾರಣವಾಗಿವೆ ಎಂದರು. ಆದರೆ, ಇತ್ತೀಚೆಗೆ ಏನೂ ಮಾಡದ ಬಿಜೆಪಿ ಪಕ್ಷ ಕೇವಲ ಸುಳ್ಳು ಹೇಳಿ ಯುವಕರನ್ನು ದಾರಿ ತಪ್ಪಿಸಿ ಭಾವನಾತ್ಮಕ ವಿಚಾರಧಾರೆಗಳನ್ನು ಮುಂದಿಟ್ಟುಕೊಂಡು ಮತ ಕೇಳುತ್ತಿದೆ. ಅಭಿವೃದ್ಧಿಯಲ್ಲಿ ಹಿಂದುಳಿದಿದ್ದು, ದೇಶಕ್ಕೆ ಅವರ ಕೊಡುಗೆ ಶೂನ್ಯವಾಗಿದೆ ಎಂದರು.

ಕೆಪಿಸಿಸಿ ಎಸ್ಟಿ ಘಟಕದ ರಾಜ್ಯಾಧ್ಯಕ್ಷ ಕೆ.ಪಿ. ಪಾಲಯ್ಯ ಮಾತನಾಡಿ, ಕಾಂಗ್ರೆಸ್ ಪಕ್ಷ ದೇಶಕ್ಕೆ ಸಾಕಷ್ಟು ಕೊಡುಗೆ ನೀಡಿದೆ. ಅತ್ಯಂತ ಶ್ರೀಮಂತ ಕುಟುಂಬವಾಗಿದ್ದ ಇಂದಿರಾ ಗಾಂಧಿ ಅವರ ಕುಟುಂಬ ಕೇವಲ ಸ್ವಾರ್ಥಕ್ಕಾಗಿ ಬದುಕದೇ ದೇಶದ ಉನ್ನತಿಗಾಗಿ ತಮ್ಮ ಪ್ರಾಣವನ್ನೇ ಪಣವಾಗಿಟ್ಟಂತಹ ಕುಟುಂಬವಾಗಿದೆ ಎಂದರು.

ಈ ಸಂದರ್ಭದಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಶಂಷೀರ್ ಅಹಮದ್, ಮಹಿಳಾ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷೆ ಕೆಂಚಮ್ಮ ಧನ್ಯಕುಮಾರ್, ತಾಲ್ಲೂಕು ಪಂಚಾಯ್ತಿ ಅಧ್ಯಕ್ಷೆ ಮಂಜುಳಾ ಶಿವಾನಂದಪ್ಪ, ಜಿಲ್ಲಾ ಪಂಚಾಯ್ತಿ ಮಾಜಿ ಅಧ್ಯಕ್ಷೆ ನಾಗರತ್ನಮ್ಮ ಮಲ್ಲೇಶಪ್ಪ, ತಾ.ಪಂ. ಸದಸ್ಯ ಕುಬೇಂದ್ರಪ್ಪ, ಪ.ಪಂ ಸದಸ್ಯರಾದ ರವಿಕುಮಾರ್, ಶಕೀಲ್ ಅಹಮದ್, ಪ.ಪಂ. ಮಾಜಿ ಅಧ್ಯಕ್ಷೆ ರಾಜೇಶ್ವರಿ ಲೋಕೇಶ್, ಪ್ರಿಯದರ್ಶಿನಿ ವಿಭಾಗದ ಜಿಲ್ಲಾ ಸಂಚಾಲಕಿ ಸುಧಾ, ಪ್ರಧಾನ ಕಾರ್ಯದರ್ಶಿ ಸಾವಿತ್ರಮ್ಮ, ಕರುನಾಡ ರಕ್ಷಣಾ ಪಡೆ ಜಿಲ್ಲಾಧ್ಯಕ್ಷೆ ಎಸ್.ಕೆ.ಇಂದಿರಾ, ಕಾಂಗ್ರೆಸ್ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಶೇಖರಪ್ಪ, ಮುಖಂಡರಾದ ಸಿ.ತಿಪ್ಪೇಸ್ವಾಮಿ ಬಿ.ಲೋಕೇಶ್, ವೆಂಕಟೇಶ್, ಅಜಾಮುಲ್ಲಾ, ಬಿ.ಹೆಚ್.ನಾಗರಾಜ್, ಬೊಮ್ಮಲಿಂಗ, ಶ್ರೀನಿವಾಸ್ ಹಾಜರಿದ್ದರು.

## ಮನೆ ಬಾಗಿಲಿಗೆ ತಾಜಾ ಮೀನು

**(1ನೇ ಪುಟದಿಂದ)** ಇದಕ್ಕೆ ಅಗತ್ಯವಾದ ಆಪ್ ಸಿದ್ದಪಡಿಸಲಾಗಿದೆ. ಎಲ್ಲವೂ ಅಂದುಕೊಂಡಂತೆ ನಡೆದರೆ ಇದೇ 21 ರಂದು ನಗರದಲ್ಲಿ ನಡೆಯುವ ಮತ್ಸ್ಯ ಸಂಪದ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಬಿ. ಎಸ್. ಯಡಿಯೂರಪ್ಪ ಚಾಲನೆ ನೀಡಲಿದ್ದಾರೆ ಎಂದರು.

ರಾಜ್ಯದಲ್ಲಿ ಐದು ಹೊಸ ಮೀನುಗಾರಿಕೆ ಕಾಲೇಜುಗಳನ್ನು ಶೀಘ್ರವೇ ಆರಂಭಿಸುವುದಾಗಿ ಇದೇ ಸಂದರ್ಭದಲ್ಲಿ ಅವರು ತಿಳಿಸಿದರು. ಹೊಸ ಕಾಲೇಜುಗಳನ್ನು ಮೈಸೂರು, ಶಿವಮೊಗ್ಗ, ಅಂಕೋಲ, ಉಡುಪಿ, ಹಾಗೂ ಕಾರವಾರಗಳಲ್ಲಿ ಆರಂಭಿಸಲಾಗುವುದು. ಮಂಗಳೂರು ಮೀನುಗಾರಿಕಾ ಕಾಲೇಜನ್ನು ಮೀನುಗಾರಿಕಾ ವಿಶ್ವವಿದ್ಯಾಲಯ ಮಾಡಬೇಕೆಂದು ಕೇಂದ್ರದ ಮುಂದೆ ಪ್ರಸ್ತಾಪ ಇಟ್ಟಿದ್ದೇವೆ. ಇದಕ್ಕೆ ಶೀಘ್ರವೇ ಅನುಮತಿ ದೊರೆಯುವ ನಿರೀಕ್ಷೆ ಇದೆ ಎಂದರು.

## ಜನತಾ ಬಜಾರ್ ಅಧ್ಯಕ್ಷರಾಗಿ ಬಿವಿಸಿ ಪುನರಾಯ್ಕೆ

**(1ನೇ ಪುಟದಿಂದ)** ಸಭೆಯಲ್ಲಿ ಉಪಸ್ಥಿತರಿದ್ದರು.

ತಹಶೀಲ್ದಾರ್ ಬಿ.ಎನ್. ಗಿರೀಶ್ ಅವರು ಚುನಾವಣಾಧಿಕಾರಿಯಾಗಿ ಕಾರ್ಯ ನಿರ್ವಹಿಸಿದರು. ಸಹಕಾರಿ ಅಭಿವೃದ್ಧಿ ಅಧಿಕಾರಿ ಸುರೇಂದ್ರ ಸಹಾಯಕ ಚುನಾವಣಾಧಿಕಾರಿಯಾಗಿದ್ದರು. ಸಹಕಾರ ಸಂಘಗಳ ಸಹಾಯಕ ನಿಬಂಧಕರೂ ಆದ ಸಂಘದ ಪ್ರಧಾನ ವ್ಯವಸ್ಥಾಪಕ ಎಂ. ದಕ್ಷಿಣಮೂರ್ತಿ ಉಪಸ್ಥಿತರಿದ್ದರು.

# ರೈತರು ಕಡೆಯ ದಿನಾಂಕದೊಳಗೆ ಬೆಳೆ ವಿಮೆ ಮಾಡಿಸಲು ಸೂಚನೆ

ದಾವಣಗೆರೆ, ನ.19- 2020-21ನೇ ಸಾಲಿನ ಹಿಂಗಾರು ಮತ್ತು ಬೇಸಿಗೆ ಹಂಗಾಮಿನ ಬೆಳೆಗಳಿಗೆ ರೈತರು ಬೆಳೆ ವಿಮೆ ಮಾಡಿಸುವ ಸಂಬಂಧ ಹೆಚ್ಚಿನ ಪ್ರಚಾರ ನೀಡಿ, ವಿಮೆ ಮಾಡಿಸಬೇಕೆಂದು ಜಿಲ್ಲಾಧಿಕಾರಿಗಳು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಜಿಲ್ಲಾಡಳಿತ ಕಚೇರಿ ಸಭಾಂಗಣದಲ್ಲಿ ಏರ್ಪಡಿಸಲಾಗಿದ್ದ ರೈತ ಉತ್ಪಾದಕ ಸಂಸ್ಥೆಗಳ ಸಮನ್ವಯ ಮತ್ತು ಮೇಲ್ವಿಚಾರಣಾ ಸಮಿತಿ ಸಭೆ ಹಾಗೂ ಹಿಂಗಾರು ಮತ್ತು ಬೇಸಿಗೆ ಹಂಗಾಮಿನ ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಭೀಮಾ ಯೋಜನೆ ಅನುಷ್ಠಾನ ಕುರಿತ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಪ್ರಸಕ್ತ ಸಾಲಿನಲ್ಲಿ ದಾವಣಗೆರೆ, ಹರಿಹರ, ಹೊನ್ನಾಳಿ ಮತ್ತು ನ್ಯಾಮತಿ ತಾಲ್ಲೂಕಿಗೆ ಹೊಸದಾಗಿ 4 ರೈತ ಉತ್ಪಾದಕ ಸಂಸ್ಥೆಗಳನ್ನು ರಚನೆ ಮಾಡಲು ಗುರಿ ಹೊಂದಲಾಗಿದೆ. ದಾವಣಗೆರೆ ತಾಲ್ಲೂಕು ತೆಂಗು, ಹರಿಹರ ತಾಲ್ಲೂಕು ವೀಳ್ಯೆದೆಲೆ, ಹೊನ್ನಾಳಿ ತಾಲ್ಲೂಕು ಬಾಳೆ ಮತ್ತು ತರಕಾರಿ, ನ್ಯಾಮತಿ ತಾಲ್ಲೂಕಿನಲ್ಲಿ ಶೇಂಗಾ ಬೆಳೆಯಲ್ಲಿ ಮೌಲ್ಯವರ್ಧನೆಗಾಗಿ ರೈತ ಉತ್ಪಾದಕ ಸಂಸ್ಥೆಯನ್ನು ರಚಿಸುವ ಕುರಿತು ಸಭೆಯಲ್ಲಿ ನಿರ್ಣಯಿಸಲಾಯಿತು.

ಇದೇ ಸಂದರ್ಭದಲ್ಲಿ ಹಿಂಗಾರು ಮತ್ತು ಬೇಸಿಗೆ ಬೆಳೆ ವಿಮೆ ಕುರಿತಂತೆ ಸಿದ್ಧಪಡಿಸಲಾದ ಕರಪತ್ರವನ್ನು ಜಿಲ್ಲಾಧಿಕಾರಿಗಳು ಬಿಡುಗಡೆ ಮಾಡಿದರು. ಕೊನೆಯ ದಿನಾಂಕದೊಳಗೆ ರೈತರು ತಮ್ಮ ಬೆಳೆ ವಿಮೆಯನ್ನು ನೋಂದಣಿ ಮಾಡಿಕೊಳ್ಳಲು ಕೋರಿದ ಅವರು 2019-20ನೇ ಸಾಲಿನಲ್ಲಿ 25,734 ರೈತರು ರೂ. 385.98 ಲಕ್ಷ ಪ್ರೀಮಿಯಂ ಪಾವತಿಸಿ ನೋಂದಣಿ ಮಾಡಿಕೊಂಡಿದ್ದು, ರೂ. 1,536.14 ಲಕ್ಷ ಬೆಳೆ ವಿಮಾ ಮೊತ್ತ ರೈತರ ಖಾತೆಗೆ ಜಮಾವಣೆ ಮಾಡಿರುವುದಾಗಿ ತಿಳಿಸಿದರು.

ತೋಟಗಾರಿಕೆ ಬೆಳೆಗಳಲ್ಲಿ 6,563 ರೈತರು ಬೆಳೆ ವಿಮೆ ಮಾಡಿಸಿದ್ದು, ಒಟ್ಟು ರೂ.346.93 ಲಕ್ಷ ಪ್ರೀಮಿಯಂ ಮೊತ್ತ ಪಾವತಿಸಿದ್ದು, ರೂ. 1,257.42 ಲಕ್ಷ ಬೆಳೆ ವಿಮೆ ರೈತರ ಖಾತೆಗೆ ಜಮೆ ಆಗಿರುವುದಾಗಿ ತಿಳಿಸಿದರು.

ಸಭೆಯಲ್ಲಿ ಕೃಷಿ ಜಂಟಿ ನಿರ್ದೇಶಕ ಶ್ರೀನಿವಾಸ್ ಚಿಂತಾಲ್ ಮತ್ತು ಇತರೆ ಅಧಿಕಾರಿಗಳು ಇದ್ದರು.

## ಸೊಲಬಕ್ಕನವರ ನಿಧನಕ್ಕೆ ವಚನಾನಂದ ಶ್ರೀ ಸಂತಾಪ

ಹರಿಹರ, ನ.19- ಜಾನಪದ ಸೊಗಡನ್ನು ತಮ್ಮ ಕಲೆಯ ಮೂಲಕ ಅಭಿವ್ಯಕ್ತಪಡಿಸಿದವರೂ, ಬಯಲಾಟ ಅಕಾಡೆಮಿಯ ಅಧ್ಯಕ್ಷರೂ ಆದ ಡಾ. ಟಿ.ಬಿ. ಸೊಲಬಕ್ಕನವರ್ ನಿಧನದಿಂದ ನಾಡಿಗೆ ಅಪಾರ ನಷ್ಟವಾಗಿದೆ ಎಂದು ಪಂಚಮಸಾಲಿ ಪೀಠದ ಜಗದ್ಗುರು ಶ್ರೀ ವಚನಾನಂದ ಸ್ವಾಮೀಜಿ ಸಂತಾಪ ವ್ಯಕ್ತಪಡಿಸಿದ್ದಾರೆ.

## ಇಂದು 'ಶ್ರೀ ಸತ್ಯಸಾಯಿ ಅಮೃತ ಸಿಂಚನ' ಬಿಡುಗಡೆ

ಶ್ರೀ ಸತ್ಯಸಾಯಿ ಬಾಬಾರವರ 95ನೇ ಜನ್ಮ ದಿನದ ಪ್ರಯುಕ್ತ ಶ್ರೀ ಸತ್ಯಸಾಯಿ ಅಮೃತ ಸಿಂಚನ' ಪುಸ್ತಕ ಬಿಡುಗಡೆ ಹಾಗೂ ಕೊರೊನಾ ವಾರಿಯರ್ಸ್‌ಗೆ ಸನ್ಮಾನ ಸಮಾರಂಭ ಕಾರ್ಯಕ್ರಮವನ್ನು ಇಂದು ಸಂಜೆ 4.00 ಗಂಟೆಗೆ ಈಶ್ವರಮ್ಮ ಶಾಲಾ ಆವರಣದಲ್ಲಿ ಹಮ್ಮಿಕೊಳ್ಳಲಾಗಿದೆ. ಅಧ್ಯಕ್ಷತೆಯನ್ನು ಶ್ರೀಮತಿ ಬಿ.ಆರ್. ಶಾಂತಕುಮಾರಿ ವಹಿಸುವರು. ಹರಿಹರ ರಾಮಕೃಷ್ಣ ಆಶ್ರಮದ ಶ್ರೀ ಸ್ವಾಮಿ ಶಾರದೇಶಾನಂದ ಸ್ವಾಮೀಜಿ ಅಮೃತ ಸಿಂಚನ ಪುಸ್ತಕ ಬಿಡುಗಡೆ ಮಾಡುವರು. ಕಾಸಲ್ ರಾಧಾಕೃಷ್ಣ, ಶ್ರೀಮತಿ ಸುಜಾತ ಕೃಷ್ಣ ಅವರನ್ನು ಸನ್ಮಾನಿಸಲಾಗುವುದು. ಉಪಸ್ಥಿತಿ : ಎಂ. ವೀರಭದ್ರರಾವ್, ಜಿ.ಆರ್. ವಿಜಯಾನಂದ್. ಡಾ. ಸಿ. ನಾಗಮ್ಮ ಕೇಶವಮೂರ್ತಿ, ಶ್ರೀಮತಿ ಉಷಾ ರಂಗನಾಥ್, ಶ್ರೀಮತಿ ಸುಜಾತ ವಿಜಯಾನಂದ್.

# ಪ್ರತಿ ಹಳ್ಳಿಗೆ 'ಗ್ರಾಮ ಒನ್' ಸೇವೆ

**(1ನೇ ಪುಟದಿಂದ)** ತಲುಪಿಸಲಾಗುತ್ತಿದೆ ಎಂದು ತಿಳಿಸಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಶಾಸಕ ಎಸ್.ಎ. ರವೀಂದ್ರನಾಥ್ ಮಾತನಾಡಿ, ಇಲ್ಲಿನ ಗ್ರಾಮ ಒನ್ ಘಟಕ ರಾಜ್ಯಕ್ಕೇ ಮಾದರಿಯಾಗುವ ರೀತಿಯಲ್ಲಿರಲಿ ಎಂದು ಹಾರೈಸಿದರು.

ಮಾಗಾನಹಳ್ಳಿಯ ರೈತ ಮಹಿಳೆಯಾದ ಶಾಂತಮ್ಮ ಅವರು ಮೊಟ್ಟ ಮೊದಲ ಗ್ರಾಮ ಒನ್ ಕೇಂದ್ರವನ್ನು ಉದ್ಘಾಟಿಸಿದ್ದು ವಿಶೇಷವಾಗಿತ್ತು.

ವೇದಿಕೆಯ ಮೇಲೆ ವಾಲ್ಮೀಕಿ ನಿಗಮದ ಅಧ್ಯಕ್ಷ ಹಾಗೂ ಶಾಸಕ ಎಸ್.ವಿ.ರಾಮಚಂದ್ರ, ಜಿಲ್ಲಾ ಪಂಚಾಯ್ತಿ ಅಧ್ಯಕ್ಷೆ ದೀಪಾ ಜಗದೀಶ್, ಜಿ.ಪಂ. ಸದಸ್ಯೆ ಮಂಜುಳ ಟಿ.ವಿ., ಎಸ್‌ಪಿ ಹನುಮಂತರಾಯ ಉಪಸ್ಥಿತರಿದ್ದರು.

ಬೆಂಗಳೂರಿನಲ್ಲಿ ಮುಖ್ಯಮಂತ್ರಿಗಳ ಗೃಹ ಕಚೇರಿ ಕೃಷ್ಣಾ ಯಡಿಯೂರಪ್ಪನವರ ಜೊತೆ ಉಪಸ್ಥಿತರಿದ್ದ ಜಿಲ್ಲಾ ಉಸ್ತುವಾರಿ ಸಚಿವ ಭೈರತಿ ಬಸವರಾಜ್, ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿ ಎಂ. ಪಿ. ರೇಣುಕಾಚಾರ್ಯ, ಶಾಸಕ ಪ್ರೊ. ಲಿಂಗಣ್ಣ ಆನ್‌ಲೈನ್ ಮೂಲಕ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಐಎಎಸ್ ಅಧಿಕಾರಿ ಸಿಂಧು ಬಿ. ರೂಪೇಶ್ ಸ್ವಾಗತಿಸಿದರೆ, ಉಪ ನ್ಯಾಸಕಿ ಶೋಭಾ ಚಪ್ಪರದಹಳ್ಳಿಮಠ ನಿರೂಪಿಸಿದರು ಹಾಗೂ ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ವಂದಿಸಿದರು.

### ಗ್ರಾಮ ಒನ್ ಸವಾಲಿನ ಕಾರ್ಯ

ಸಕಾಲ ಯೋಜನೆಯನ್ನು ಮೊದಲು ಮೂರು ತಾಲ್ಲೂಕುಗಳಲ್ಲಿ ಪ್ರಾಯೋಗಿಕವಾಗಿ ಜಾರಿಗೆ ತಂದ ನಂತರ ರಾಜ್ಯಾದ್ಯಂತ ವಿಸ್ತರಿಸಲಾಗಿತ್ತು. ಅದೇ ರೀತಿ ಗ್ರಾಮ ಒನ್ ಪ್ರಯೋಗದ ನಂತರ ರಾಜ್ಯಾದ್ಯಂತ ವಿಸ್ತರಿಸಲಾಗುವುದು ಎಂದು ಶಿಕ್ಷಣ ಸಚಿವ ಸುರೇಶ್ ಕುಮಾರ್ ತಿಳಿಸಿದ್ದಾರೆ.

ಗ್ರಾಮ ಒನ್ ಹೆಚ್ಚು ಸವಾಲಿನ ಕಾರ್ಯ. ಅಂತರ್ಜಾಲ ಹಾಗೂ ಬ್ಯಾಂಡ್‌ವಿಡ್ತ್ ಸರಿ ಇದ್ದಾಗ ಮಾತ್ರ ಸೇವೆ ಲಭ್ಯವಾಗುತ್ತದೆ. ಆದರೂ, ಸಾಮಾನ್ಯ ನಾಗರಿಕನ ಸಮಯ ಹಾಗೂ ಹಣ ಖರ್ಚಾಗಬಾರದು. ವ್ಯವಸ್ಥೆ ಬಗ್ಗೆ ವಿಶ್ವಾಸ ಮೂಡಿಸಬೇಕೆಂದು ಯೋಜನೆ ಜಾರಿಗೆ ತರಲಾಗುತ್ತಿದೆ ಎಂದರು.

ಬೆಂಗಳೂರಿನಲ್ಲಿ ಜನ ಸೇವಕ ಯೋಜನೆಯನ್ನು ಜಾರಿಗೆ ತರಲಾಗಿದೆ. ಈ ಯೋಜನೆಯ ಅನ್ವಯ ಸರ್ಕಾರದಿಂದ ನೇಮಕಗೊಂಡವರು ಸಾರ್ವಜನಿಕರ ಮನೆಯ ಬಾಗಿಲಿಗೆ ತೆರಳಿ ಸರ್ಕಾರಿ ಸೇವೆಗಳನ್ನು ಒದಗಿಸಲಿದ್ದಾರೆ. ಅದರ ಮುಂದುವರಿದ ಭಾಗವೇ ಗ್ರಾಮ ಒನ್ ಎಂದು ಸುರೇಶ್ ಕುಮಾರ್ ಹೇಳಿದರು.

## ವಿದ್ಯಾಗಮದ ಸುಧಾರಣೆ

**(1ನೇ ಪುಟದಿಂದ)** ಮಾಡಿದ್ದಾರೆ. ವಿದ್ಯಾಗಮವನ್ನು ತಾತ್ಕಾಲಿಕವಾಗಿ ನಿಲ್ಲಿಸಲಾಗಿದೆಯಷ್ಟೇ. ಅದನ್ನು ಸುಧಾರಣೆ ಮಾಡುತ್ತೇವೆ ಎಂದು ಸುರೇಶ್ ಕುಮಾರ್ ಹೇಳಿದರು.

ಸರ್ಕಾರಿ ಶಾಲೆಗಳಿಗೆ ಸಾವಿರಾರು ಎಕರೆ ಭೂದಾನ ಮಾಡಲಾಗಿದೆ. ಆದರೆ, ಆ ಜಮೀನು ಶಾಲೆಯ ಹೆಸರಿಗೆ ಆಗಿಲ್ಲ ಎಂಬ ಇನ್ನೊಂದು ಪ್ರಶ್ನೆಗೆ ಉತ್ತರಿಸಿದ ಅವರು, ಜಮೀನನ್ನು ಶಾಲೆಗಳ ಹೆಸರಿಗೆ ಮಾಡಲು ನೋಡಲ್ ಅಧಿಕಾರಿಗಳನ್ನು ನೇಮಿಸಲಾಗುವುದು. ಇದಕ್ಕಾಗಿ ಕಂದಾಯ ಇಲಾಖೆ ಜೊತೆಗೂಡಿ ಕ್ರಮ ತೆಗೆದುಕೊಳ್ಳಲಾಗುವುದು ಎಂದರು.

ಶಿಕ್ಷಕರ ವರ್ಗಾವಣೆಗೆ ಸಂಬಂಧಿಸಿದಂತೆ ತೊಡಕುಗಳು ಎದುರಾಗಿರುವ ಬಗ್ಗೆ ಕೇಳಿದ ಇನ್ನೊಂದು ಪ್ರಶ್ನೆಗೆ ಉತ್ತರಿಸಿದ ಸಚಿವರು, ಯಾವುದೇ ಸಮಸ್ಯೆ ಎದುರಾಗಿಲ್ಲ. ತಾಂತ್ರಿಕ ಸಮಸ್ಯೆ ಇದ್ದುದನ್ನು ಬಗೆಹರಿಸಲಾಗಿದೆ ಎಂದು ಹೇಳಿದರು.

## ಮೀಸಲಾತಿ ಅಧಿಸೂಚನೆ ರದ್ದು

**(1ನೇ ಪುಟದಿಂದ)** ನ್ಯಾಯಮೂರ್ತಿ ಆರ್. ದೇವದಾಸ್ ಅವರಿದ್ದ ಪೀಠ ಈ ಆದೇಶ ನೀಡಿದೆ.

ಮೀಸಲು ಕಲ್ಪಿಸುವ ವೇಳೆ ರೊಟೇಷನ್ ನಿಯಮ ಪಾಲನೆಯಾಗಿಲ್ಲ. ಅಲ್ಲದೇ, ಸಮುದಾಯದವರು ಇರುವ ಜನಸಂಖ್ಯೆಯ ಪ್ರಮಾಣ ಪರಿಗಣಿಸದೇ ಮೀಸಲಾತಿ ಕಲ್ಪಿಸಲಾಗಿದೆ ಎಂದು ಹಲವಾರು ಅರ್ಜಿದಾರರು ಆಕ್ಷೇಪಿಸಿದ್ದರು.

ಈ ಬಗ್ಗೆ ವಿಚಾರಣೆ ನಡೆಸಿರುವ ಹೈಕೋರ್ಟ್, ಮೀಸಲಾತಿಯನ್ನು ರದ್ದುಗೊಳಿಸಿದೆ. ಮುಂದಿನ 4 ವಾರಗಳ ಒಳಗೆ ರೊಟೇಷನ್ ಪದ್ಧತಿ ಅನುಸಾರ ಮೀಸಲಾತಿ ಕಲ್ಪಿಸಿ ಮರು ಅಧಿಸೂಚನೆ ಹೊರಡಿಸಬೇಕೆಂದು ಸರ್ಕಾರಕ್ಕೆ ಸೂಚಿಸಿದೆ.

ಒಂದು ವೇಳೆ ಈ ಹಿಂದೆ ನಿಗದಿ ಪಡಿಸಲಾಗಿದ್ದ ಮೀಸಲಾತಿಯಲ್ಲಿ ಬದಲಾವಣೆಯ ಅಗತ್ಯವಿಲ್ಲ ಎಂಬುದು ಮರು ಪರಿಶೀಲನೆಯ ವೇಳೆ ಕಂಡು ಬಂದಲ್ಲಿ ರಾಜ್ಯ ಸರ್ಕಾರ ಆ ಬಗ್ಗೆ ಹೈಕೋರ್ಟ್‌ಗೆ ರಿಟ್ ಸಲ್ಲಿಸಬಹುದು ಎಂದೂ ಆದೇಶದಲ್ಲಿ ಹೇಳಲಾಗಿದೆ.

ಹೈಕೋರ್ಟ್ ಮುಂದಿನ ಆದೇಶ ಹೊರಡಿಸುವವರೆಗೆ ಇಲ್ಲವೇ ರಾಜ್ಯ ಸರ್ಕಾರ ಹೊಸ ಅಧಿಸೂಚನೆ ಹೊರಡಿಸುವವರೆಗೆ ಅಧ್ಯಕ್ಷ ಹಾಗೂ ಉಪಾಧ್ಯಕ್ಷ ಸ್ಥಾನದ ಚುನಾವಣೆಯ ಫಲಿತಾಂಶವನ್ನು ಅಮಾನತ್ತಿನಲ್ಲಿರಿಸಬೇಕು ಎಂದು ಹೈಕೋರ್ಟ್ ತಿಳಿಸಿದೆ.


॥ ಶ್ರೀ ಮಲ್ಲಿಕಾರ್ಜುನ ಸ್ವಾಮಿ ಪ್ರಸನ್ನ ॥

**ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆ**


ದಾವಣಗೆರೆ ಜಿ॥ ಮತ್ತು ತಾ॥ ಶ್ಯಾಗಲೆ ಗ್ರಾಮದ ವಾಸಿ,
ಶ್ರೀ ಬೀಸನಹಳ್ಳಿ ಲಿಂ॥ ಪರ್ವತಪ್ಪನವರ ಮಗನಾದ
**ಶ್ರೀ ಬಿ. ದೇವೇಂದ್ರಪ್ಪ ಮತ್ತು ಸಹೋದರರು** ಇವರು ಮಾಡುವ ವಿಜ್ಞಾಪನೆಗಳು



ಶರಣ ಬಂಧುಗಳೇ,
ದಿನಾಂಕ : 12-11-2020ನೇ
ಗುರುವಾರ ಸಂಜೆ 4-30ಕ್ಕೆ
ನನ್ನ ಧರ್ಮಪತ್ನಿಯಾದ
**ಶ್ರೀಮತಿ ಬಿ. ಶಂಕರಮ್ಮ**
ಇವರು ಶಿವಾಧೀನರಾದ ಪ್ರಯುಕ್ತ
ಮೃತರ ಆತ್ಮಶಾಂತಿಗಾಗಿ
**'ಕೈಲಾಸ ಶಿವಗಣಾರಾಧನೆ'ಯನ್ನು**
**ದಿನಾಂಕ : 20-11-2020ನೇ**
**ಶುಕ್ರವಾರ ಬೆಳಿಗ್ಗೆ 10 ಗಂಟೆಗೆ**
**ದಾವಣಗೆರೆ ತಾಲ್ಲೂಕು ಶ್ಯಾಗಲೆ ಗ್ರಾಮದ ಮೃತರ ಸ್ವಗೃಹದಲ್ಲಿ**
ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು : ಶ್ರೀ ಬೀಸನಹಳ್ಳಿ ದೇವೇಂದ್ರಪ್ಪ
ಶ್ರೀಮತಿ ಸುಧಾ ಡಿ.ಬಿ. ಮತ್ತು ಶ್ರೀ ದೇವೇಂದ್ರಪ್ಪ ಮತ್ತು ಮಕ್ಕಳು
ಶ್ರೀಮತಿ ಲತಾ ಮತ್ತು ಶ್ರೀ ಗಣೇಶ್ ಡಿ.ಬಿ. ಮತ್ತು ಮಕ್ಕಳು
ಶ್ರೀಮತಿ ಮಧು ಮತ್ತು ಶ್ರೀ ಸುರೇಶ್ ಡಿ.ಬಿ. ಮತ್ತು ಮಕ್ಕಳು
ಶ್ರೀಮತಿ ವೀಣಾ ಡಿ.ಬಿ. ಮತ್ತು ಶ್ರೀ ಜಗದೀಶ್ ಮತ್ತು ಮಕ್ಕಳು, ಚಿಕ್ಕಮಗಳೂರು
ಬೀಸನಹಳ್ಳಿ ವಂಶಸ್ಥರು, ಶ್ಯಾಗಲೆ ಹಾಗೂ ಬಂಧು-ಮಿತ್ರರು.
**ಮೊ. : 94489 24146, 94487 29053**


### ಹರಿಹರದ ಗುರುಶಾಂತಪ್ಪ ನಿಧನ



ದಾವಣಗೆರೆ ಎಂ.ಸಿ.ಸಿ 'ಬಿ' ಬ್ಲಾಕ್, 11ನೇ ಮುಖ್ಯರಸ್ತೆ, 2ನೇ ಅಡ್ಡರಸ್ತೆ, ಎಸ್.ಎಸ್. ಮನೆ ಎದುರು ವಾಸಿ ಹರಿಹರದ ಗುರುಶಾಂತಪ್ಪ (79) ಅವರು, ದಿನಾಂಕ 18.11.2020 ರ ಬುಧವಾರ ರಾತ್ರಿ 11 ಗಂಟೆಗೆ ನಿಧನರಾದರು. ಮೂವರು ಪುತ್ರರು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 20.11.2020 ರ ಶುಕ್ರವಾರ ಬೆಳಿಗ್ಗೆ 11 ಗಂಟೆಗೆ ನಗರದ ವೀರಶೈವ ರುದ್ರಭೂಮಿಯಲ್ಲಿ ನೆರವೇರಲಿದೆ.

**ಮಾಸ್ಕ್ ಬಳಸಿ ಕೊರೊನಾ ತೊಲಗಿಸಿ**

# 5 ವರ್ಷಗಳಲ್ಲಿ ಡಿಜಿಟಲ್ ಆರ್ಥಿಕತೆ

**(1ನೇ ಪುಟದಿಂದ)** ದಾಟಿದೆ. ಮುಂದಿನ ಪಂಚ ವರ್ಷಗಳಲ್ಲಿ ಈ ನಿಟ್ಟಿನಲ್ಲಿ ಹಾಕಿಕೊಂಡಿರುವ ಗುರಿಯನ್ನು ಮುಟ್ಟಲು ಎಲ್ಲ ರೀತಿಯ ಕ್ರಮಗಳನ್ನು ಸರಕಾರ ಕೈಗೊಂಡಿದೆ ಎಂದರು.

ಪ್ರಧಾನಮಂತ್ರಿ ಮೋದಿ ಅವರು ನಿಗದಿಪಡಿಸಿರುವ ಒಂದು ಟ್ರಿಲಿಯನ್ ಡಿಜಿಟಲ್ ಆರ್ಥಿಕತೆಯ ಗುರಿಗೆ ಹೆಚ್ಚಿನ ಕೊಡುಗೆ ನೀಡಲು ಕರ್ನಾಟಕ ಸನ್ನದ್ಧವಾಗಿದೆ. ಈ ನಿಟ್ಟಿನಲ್ಲಿ ಅಗತ್ಯ ಸುಧಾರಣೆಗಳನ್ನು ಕೈಗೊಂಡು ಐಟಿ-ಬಿಟಿ ಸೇರಿದಂತೆ ಸರ್ವ ಕ್ಷೇತ್ರಗಳಲ್ಲೂ ಸುಧಾರಣೆ ಗಳನ್ನು ತರಲಾಗಿದೆ. ನಿಗದಿತ ಗುರಿಯನ್ನು ತಪ್ಪದೇ ಮುಟ್ಟಲಾಗುವುದು ಎಂದು ಉಪ ಮುಖ್ಯಮಂತ್ರಿ ಸ್ಪಷ್ಟವಾಗಿ ಹೇಳಿದರು.

ಡಿಜಿಟಲ್ ಆರ್ಥಿಕತೆಯ ಗುರಿ ತಲುಪಲು ರಾಜ್ಯವು ಈಗಾಗಲೇ ಡಿಜಿಟಲ್ ಎಕಾನಮಿ ಮಿಷನ್ ಸ್ಥಾಪನೆ ಮಾಡಿ ಕಾರ್ಯಪ್ರವೃತ್ತವಾಗಿದೆ. ತಂತ್ರಜ್ಞಾನದ ಮೂಲಕ ಆರ್ಥಿಕತೆಗೆ ವೇಗ ನೀಡುವುದು ಈ ಮಿಷನ್ ಉದ್ದೇಶವಾಗಿದೆ.

ಡಿಜಿಟಲ್ ಎಕಾನಮಿ ಮಿಷನ್ ಮೂಲಕ ಇನ್‌ವೆಸ್ಟ್ ಇಂಡಿಯಾ ಮೂಲಕ ಜಾಗತಿಕ ಸಂಪರ್ಕಗಳನ್ನು ಕರ್ನಾಟಕದ ಜತೆ ಅನುಸಂಧಾನಗೊಳಿಸುತ್ತಿದ್ದು, ಈ ಉಪಕ್ರಮದಿಂದ ಕರ್ನಾಟಕದ ತಂತ್ರಜ್ಞಾನ ಉದ್ಯಮ ಮತ್ತು ರಾಜ್ಯದ ಬ್ರಾಂಡ್ ಈಕ್ವಿಟಿಯನ್ನು ಉತ್ತಮಗೊಳಿಸುತ್ತಿದೆ. ಈ ಮೂಲಕ ಮುಂದಿನ ಮೈಲುಗಲ್ಲು ಸಾಧಿಸಲಾಗುವುದು. ಇದಕ್ಕೆ ಪೂರಕವಾಗಿ ಹೊಸ ತಲೆಮಾರಿನ ನವೋದ್ಯಮ, ಐಟಿ ಬಿಟಿ ಜತೆಗೆ ಎಲೆಕ್ಟ್ರಾನಿಕ್ ಸಂಶೋಧನೆ ಮತ್ತು ಅಭಿವೃದ್ಧಿಗೆ ಹೆಚ್ಚು ಆದ್ಯತೆ ನೀಡಲಾಗಿದೆ.

ತಂತ್ರಜ್ಞಾನ ಕ್ಷೇತ್ರವೇ ಮುಂದಿನ ದಿನಗಳಲ್ಲಿ ತನ್ನ ಅಧಿಪತ್ಯವನ್ನು ಸಾಧಿಸಲಿದೆ. ಅದಕ್ಕೆ ಡಿಜಿಟಲ್ ಇಂಡಿಯಾ, ಡಿಜಿಟಲ್ ಎಕಾನಮಿ ಉಪ ಕ್ರಮಗಳು ಬಲ ತುಂಬುತ್ತಿವೆ. ಭವಿಷ್ಯದಲ್ಲಿ ತಂತ್ರಜ್ಞಾನವೇ ಆಡಳಿತ ನಡೆಸಲಿದೆ. ಆ ನಿಟ್ಟಿನಲ್ಲಿ ಭಾರತದ ಜತೆ ಕರ್ನಾಟಕವೂ ದಾಪುಗಾಲು ಇಡುತ್ತಿದೆ ಎಂದರು.

# ವಿಭಜನೆ ನಿರ್ಣಯ ಏಕಪಕ್ಷೀಯ

**(1ನೇ ಪುಟದಿಂದ)** ಕಿ.ಮೀ ದೂರದಲ್ಲಿರುವ ಹರಪನಹಳ್ಳಿ ತಾಲ್ಲೂಕನ್ನು ಪ್ರತ್ಯೇಕ ಜಿಲ್ಲೆ ಮಾಡಬೇಕು. ಯಾವುದೇ ಕಾರಣಕ್ಕೂ ಹರಪನಹಳ್ಳಿಯನ್ನು ವಿಜಯನಗರ ಜಿಲ್ಲೆಗೆ ಸೇರಿಸದಂತೆ ಮನವಿ ಮಾಡುತ್ತೇನೆ ಎಂದರು.

ಹರಪನಹಳ್ಳಿ ಹೊಸ ಜಿಲ್ಲೆಯಾಗಲು ಎಲ್ಲಾ ರೀತಿಯಿಂದಲೂ ಸೂಕ್ತವಿದೆ. ಆದ್ದರಿಂದ ಹರಪನಹಳ್ಳಿಯನ್ನು ಜಿಲ್ಲೆ ಮಾಡಲು ಸ್ಥಳೀಯವಾಗಿ ಸ್ಥಾಪನೆಯಾಗಿರುವ ಜಿಲ್ಲಾ ಹೋರಾಟ ಸಮಿತಿಗೆ ನನ್ನ ಬೆಂಬಲವಿದೆ ಎಂದು ಹೇಳಿದರು.

**ನಾನೂ ಕೂಡ ಸಚಿವ ಸ್ಥಾನದ ಆಕಾಂಕ್ಷಿ:** ಸುಮಾರು 26 ವರ್ಷಗಳಿಂದ ಬಿಜೆಪಿ ಪಕ್ಷಕ್ಕೆ ನಿಷ್ಠೆಯಿಂದ ಇದ್ದೇನೆ. ನಾನೂ ಶಾಸಕನೇ, ಹಾಗಾಗಿ ನಾನೂ ಕೂಡ ಸಚಿವ ಸ್ಥಾನದ ಆಕಾಂಕ್ಷಿಯೇ ಆಗಿದ್ದೇನೆ. ಸಂಸದನಾಗಿ, ಸಚಿವನಾಗಿ ಕಾರ್ಯ ನಿರ್ವಹಿಸಿದ ಅನುಭವ ಇದೆ. ಆದರೂ ಪಕ್ಷದ ತೀರ್ಮಾನಕ್ಕೆ ಬದ್ಧನಾಗಿದ್ದೇನೆ. ಆಸೆ ಯಾರಿಗಿಲ್ಲ, ಎಲ್ಲರಿಗೂ ಇರುತ್ತದೆ ಎಂದರು.

ಈ ಸಂದರ್ಭದಲ್ಲಿ ಸಂಸದ ಜಿ. ಎಂ.ಸಿದ್ದೇಶ್ವರ, ಜಿಲ್ಲಾ ಪಂಚಾಯ್ತಿ ಸದಸ್ಯರಾದ ರಶ್ಮಿ ರಾಜಪ್ಪ, ಸಹಾಯಕ ಕಾರ್ಯಪಾಲಕ ಅಭಿಯಂತರ ಲಿಂಗಪ್ಪ, ಸಿಪಿಐ ಕೆ. ಕುಮಾರ್, ಜಿಲ್ಲಾ ಎಸ್ಟಿ ಮೋರ್ಚಾ ಕಾರ್ಯದರ್ಶಿ ಆರ್. ಲೋಕೇಶ್, ಮುಖಂಡರಾದ ಶಿವಾಜಿ. ಹಾಲೇಶ್, ದುರ್ಗೇಶ್, ಸಹಾಯಕ ಅಭಿಯಂತರ ಕುಬೇಂದ್ರ ನಾಯ್ಕ, ಪ್ರಕಾಶ್ ನಾಯ್ಕ, ಅಶೋಕ, ಮಂಜುನಾಥ ಉಪಸ್ಥಿತರಿದ್ದರು.

## ಹರಪನಹಳ್ಳಿ : ಕಾಮಗಾರಿಗಳಿಗೆ ಸಂಸದರ ಚಾಲನೆ

**(1ನೇ ಪುಟದಿಂದ)** ಮುಖಂಡರಾದ ಹಿರೇಮೇಗಳಗೇರಿ ಎಸ್. ದೇವೇಂದ್ರಪ್ಪ, ಹಾಲೇಶ್, ಶಿವಾಜಿ. ಹಂಚಿನ ಮನಿ ದುರು ಗೇಶ, ಎಂ. ಸಂತೋಷ, ಲೋಕೋಪಯೋಗಿ ಇಲಾಖೆ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಲಿಂಗಪ್ಪ, ಸಿಬ್ಬಂದಿ ಅಶೋಕ ಇನ್ನಿತರರಿದ್ದರು.

## ವಿಜಯನಗರಕ್ಕೆ ಕೂಡ್ಲಿಗಿ ಸೇರಿಸಿ



ಕೂಡ್ಲಿಗಿ, ನ 19 - ಕೂಡ್ಲಿಗಿ ತಾಲ್ಲೂಕನ್ನು ನೂತನವಾಗಿ ರಚನೆ ಯಾಗುವ ವಿಜಯನಗರ ಜಿಲ್ಲೆಗೆ ಸೇರ್ಪಡೆ ಮಾಡಲು ತಾಲ್ಲೂಕಿನ ಜನಪ್ರತಿನಿಧಿ ಗಳು, ಜಿಲ್ಲಾ ಉಸ್ತುವಾರಿ ಸಚಿವ ಆನಂದ್ ಸಿಂಗ್, ಸಿಎಂ ಯಡಿಯೂರಪ್ಪ ಅವರು ಇಚ್ಛಾ ಶಕ್ತಿ ತೋರಿಸುವ ಮೂಲಕ ಈ ತಾಲ್ಲೂಕಿನ ಜನತೆಗೆ ನ್ಯಾಯ ಒದಗಿಸಬೇಕೆಂದು ಕೂಡ್ಲಿಗಿ ತಾಲ್ಲೂಕು ಬಿಜೆಪಿ ಮಾಜಿ ಅಧ್ಯಕ್ಷ ಹಾಗೂ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಮಾಜಿ ಅಧ್ಯಕ್ಷ ಜರ್ಮಲಿ ಶಶಿಧರ್ ಒತ್ತಾಯಿಸಿದ್ದಾರೆ.

ಕೂಡ್ಲಿಗಿ ತಾಲ್ಲೂಕು ಅತ್ಯಂತ ಹಿಂದುಳಿದ ಪ್ರದೇಶವಾಗಿದ್ದು ಇಲ್ಲಿಯ ಜನತೆ ಬಳ್ಳಾರಿಗೆ ಹೋಗಲು ದಿನಗಟ್ಟಲೇ ಕಾಲಾವಕಾಶ ಬೇಕು. ಆದರೆ, ವಿಜಯನಗರ ಜಿಲ್ಲೆಗೆ ಸೇರ್ಪಡೆ ಯಾದಲ್ಲಿ ಗಂಟೆಯೊಳಗೆ ಹೊಸಪೇಟೆ ತಲು ಪಲು ರಾಷ್ಟ್ರೀಯ ಹೆದ್ದಾರಿ ಅನುಕೂಲವಾಗಿದೆ. ಭೌಗೋಳಿಕವಾಗಿ ಹೊಸಪೇಟೆ ಹಾಗೂ ಕೂಡ್ಲಿಗಿ ಬಹಳ ಹತ್ತಿರವಾಗಿದ್ದು, ನೂರು ಕಿಲೋ ಮೀಟರ್ ದೂರದ ಬಳ್ಳಾರಿಗೆ ಹೋಗುವುದು ಕಷ್ಟ, ರಾತ್ರಿಯಾದರೆ ಸಾರಿಗೆ ಸಂಪರ್ಕ ಸಹ ಇಲ್ಲ. ಹೀಗಾಗಿ ಕೂಡ್ಲಿಗಿಯನ್ನು ವಿಜಯನಗರ ಜಿಲ್ಲೆಗೆ ಸೇರ್ಪಡೆ ಮಾಡುವುದು ಸೂಕ್ತ ಎಂದವರು ಹೇಳಿದ್ದಾರೆ.

## ನಗರದಲ್ಲಿ ಇಂದು ಸಂಸದರ ಕಾರ್ಯಕ್ರಮ

ಸಂಸದ ಜಿ.ಎಂ. ಸಿದ್ದೇಶ್ವರ ಅವರು ಇಂದು ಬೆಳಿಗ್ಗೆ 11.30 ಕ್ಕೆ ವಿವಿಧ ಸ್ಥಳಗಳಲ್ಲಿ ಪ್ರಗತಿಯ ಲ್ಲಿರುವ ರೈಲ್ವೆ ಕಾಮಗಾರಿಗಳನ್ನು ಅಧಿಕಾರಿಗಳೊಂದಿಗೆ ಭೇಟಿ ನೀಡಿ ಪರಿಶೀಲನೆ ನಡೆಸುವರು. ನಂತರ ಡಿಸಿ ಕಚೇರಿಯಲ್ಲಿ ಪ್ರಗತಿ ಪರಿಶೀಲನಾ ಸಭೆ ನಡೆಸುವರು.

# ಇಂದಿನಿಂದ 'ಮಕರ ರಾಶಿಯಲ್ಲಿ ಗುರು ಸಂಚಾರ'

**- ಜಯತೀರ್ಥಾಚಾರ್ ವಡೇರ್, ದಾವಣಗೆರೆ.**

ಗುರುವು ಗುರುಬಲ ನೀಡುವವನು, ಅಂದರೆ ಐಶ್ವರ್ಯ, ಧನ, ಸಂಪತ್ತು, ಐಷಾರಾಮಿ ಎಂದೆಲ್ಲಾ ನಾವು ಏನು ಕರೆಯುತ್ತೇವೆಯೋ, ಅವುಗಳ ಕಾರಕ ಗ್ರಹ ಈ ಗುರು. ಹೀಗಾಗಿ ಗುರು ಸಂಚಾರ ಮಾಡುತ್ತಿದ್ದಾನೆ ಎಂದರೆ, ರಾಶಿಗಳ ಮೇಲೆ ತನ್ನದೇ ಆದ ಪ್ರಭಾವವನ್ನು ಈತ ಬೀರುತ್ತಾನೆ. ಗುರು ಆಯಕಟ್ಟಿನ ಸ್ಥಾನದಲ್ಲಿದ್ದರೆ, ಜಾತಕನಿಗೆ ಸಂಪತ್ತು ಮತ್ತು ಸಂತೋಷ ಹೆಚ್ಚಿಗೆ ದೊರೆಯುತ್ತದೆ. ಸಂಪತ್ತು ದೊರೆಯುವುದರ ಜೊತೆಗೆ ದ್ವಿಗುಣಗೊಳ್ಳುತ್ತಾ ಹೋಗುತ್ತದೆ. ಅದೇ ರೀತಿ ಗುರು ವಿನ ಸಂಚಾರವು ಕೆಲವರಿಗೆ ನಕಾರಾತ್ಮಕ ಪ್ರಭಾವವನ್ನೂ ಸಹ ನೀಡುತ್ತದೆ. ಇಂದು ನಾವು ಗುರು ಸಂಚಾರದಿಂದ ಪ್ರಯೋಜನ ವನ್ನು ಪಡೆಯುವ ರಾಶಿಗಳ ಕುರಿತಾಗಿ ಚರ್ಚಿಸುತ್ತೇವೆ.

**ಮೇಷ ರಾಶಿ :** ಈ ರಾಶಿಯವರಿಗೆ, ಗುರುವು ದಶಮ ಸ್ಥಾನದಲ್ಲಿ, ಅಂದರೆ ಕರ್ಮ ಸ್ಥಾನದಲ್ಲಿರುವುದರಿಂದ, ಕಷ್ಟಕಾಲ ದಲ್ಲಿ ಸ್ನೇಹಿತರ ನೆರವು ದೊರೆಯಲಿದೆ.ಉದ್ಯಮದಲ್ಲಿ ಅಭಿವೃದ್ಧಿ, ಹಿಡಿದ ಕಾರ್ಯದಲ್ಲಿ ಯಶಸ್ಸು, ಮಡದಿ-ಮಕ್ಕಳಿಂದ ನೆಮ್ಮದಿ, ಹೋದಲ್ಲೆಲ್ಲಾ ರಾಜ ಮರ್ಯಾದೆ, ಹಾಗೂ ಹಣಕಾಸಿನ ಹರಿವು ಹೆಚ್ಚಿ, ಆರ್ಥಿಕ ಸಮಸ್ಯೆಯು ಬಗೆಹರಿಯಲಿದೆ. ಸಮಾಜದಲ್ಲಿ ಪ್ರತಿಷ್ಠೆ, ಗೌರವ ಲಭಿಸಲಿದೆ, ಆದರೆ ಮಕ್ಕಳ ಅನಿಶ್ಚಿತ ಭವಿಷ್ಯ ಅವರನ್ನು ಕಂಗೆಡಿಸಬಹುದು, ಅನುಭವಿಗಳಾದ ಹಿರಿಯರ ಆಣತಿಯಂತೆ ನಡೆಯುವುದು ಉತ್ತಮ ನಿರ್ಧಾರವಾಗಲಿದೆ. ಆತ್ಮವಿಶ್ವಾಸದೊಂದಿಗೆ ಮುನ್ನಡೆಯಿರಿ, ಅತಿಯಾದ ಮೋಜು ಮಸ್ತಿ, ಆರೋಗ್ಯದ ಮೇಲೆ ಅಡ್ಡಪರಿಣಾಮ ಬೀರೀತು.


**ವೃಷಭ ರಾಶಿ :** ಈ ರಾಶಿಯವರಿಗೆ ಗುರುವು ಒಂಭತ್ತನೇ ಮನೆಯಲ್ಲಿ, ಅಂದರೆ ಭಾಗ್ಯಸ್ಥಾನದಲ್ಲಿ ಬರುವವನಾಗಿ, ಉದ್ಯೋಗದಲ್ಲಿ ಮುಂಬಡ್ತಿ, ವೇತನದಲ್ಲಿ ಹೆಚ್ಚಳ, ರಾಜಕಾರಣಿಗಳಿಗೆ ಪಕ್ಷದಲ್ಲಿ ಉನ್ನತ ಸ್ಥಾನ-ಮಾನಗಳು ದೊರೆಯಲಿವೆ. ಮನೆಯಲ್ಲಿ ವಿಶೇಷ ಹೋಮ-ಹವನ ಮತ್ತು ಮದುವೆ ಮೊದಲಾದ ಮಂಗಳ ಕಾರ್ಯಗಳು ನಡೆಯಲಿವೆ. ಬಂಧು ಪ್ರೇಮಿಯಾಗಿ ಅನೇಕರಿಗೆ ಆಶ್ರಯ ಕೊಡುವರು. ದೊಡ್ಡ ದೊಡ್ಡ ಕೆಲಸಗಳಿಗೆ ವಿಶೇಷ ಪ್ರಯತ್ನ ಪಡುವರು. ಆದಾಯದ ಹೆಚ್ಚಿನ ಭಾಗ ದಾನ, ಧರ್ಮಗಳಿಗೆ ಮೀಸಲಾಗಿಡುವರು.ಆದರೆ ತಮ್ಮ ದೈನಂದಿನ ಪೂಜೆ ಪುನಸ್ಕಾರಗಳಲ್ಲಿ ಉದಾಸೀನತೆ ಕಂಡುಬರಲಿದೆ. ಗುರು-ಹಿರಿಯರಲ್ಲಿ ವಿಧೇಯತೆ ಮೂಡಲಿದೆ. ವಿದ್ಯಾರ್ಥಿಗಳಿಗಂತೂ ಅತ್ಯುತ್ತಮ ಭವಿಷ್ಯ ಕಾದಿದೆ. ಹೊಸಮನೆ ಖರೀದಿ ಯೋಗವಿದೆ.



**ದಿನಾಂಕ : 20.11.2020 ಶುಕ್ರವಾರ, ಮಧ್ಯಾಹ್ನ 1.23 ಕ್ಕೆ ಸಲ್ಲುವ ಶುಭ ಕುಂಭ ಲಗ್ನ, ಶ್ರವಣ ನಕ್ಷತ್ರ, ಮಕರ ರಾಶಿಯಲ್ಲಿ ಪ್ರವೇಶಿಸಿ, ಮುಂದೆ ದಿನಾಂಕ: 21.11.2021ನೇ ಭಾನುವಾರದವರೆಗೆ ಮಕರ ರಾಶಿಯಲ್ಲಿ ಸಂಚಾರ.**

**ಮಿಥುನ ರಾಶಿ :** ಈ ರಾಶಿಯವರಿಗೆ, ಗುರುಗ್ರಹವು ಅಷ್ಟಮ ಸ್ಥಾನದಲ್ಲಿ ಅಂದರೆ, ಶತ್ರುವಿನ ಸ್ಥಾನಕ್ಕೆ ಬರುವವನಾಗಿ, ಈ ರಾಶಿಯವರು ಸಾಮಾನ್ಯವಾಗಿ ತಮ್ಮ ವಂಶಕ್ಕೆ ವಿರುದ್ಧವಾದ ಕೆಲಸ ಮಾಡುವರು. ಯಾರೋ ಮಾಡಿದ ತಪ್ಪಿನಿಂದಾಗಿ ನೀವು ತಲೆದಂಡ ತೆರಬೇಕಾದೀತು. ಮಾಡುವ ಉದ್ಯೋಗದಲ್ಲಿ ನೀವು ಗುಲಾಮರಂತಿರಬೇಕಾದೀತು. ಅತಿಶಯ ಅಹಂಕಾರದಿಂದ ವಿವೇಚನೆ ಕಳೆದುಕೊಳ್ಳಬೇಕಾದೀತು. ಮಕ್ಕಳು ಪೋಷಕರಿಂದ ಕೆಲಕಾಲ ದೂರವಿರುವರು. ಅನಿರೀಕ್ಷಿತವಾಗಿ ರೋಗ-ರುಜಿನ ಗಳಿಂದ ಪೀಡಿತರಾಗಿ ಕಷ್ಟಪಡುವರು.ಪರಮಾಪ್ತರ ಅಗಲಿಕೆ ಅತೀವ ದುಃಖವನ್ನುಂಟು ಮಾಡಲಿದೆ. ಮತ್ತೊಬ್ಬರಿಗೆ ಕೊಟ್ಟ ಹಣ ಸಕಾಲದಲ್ಲಿ ಬರುವುದು ಅನುಮಾನ. ಆದಾಯ ಕಡಿಮೆ, ಖರ್ಚು ಹೆಚ್ಚಾಗಲಿದೆ. ಬಂಧುಗಳೊಂದಿಗೆ ತೀವ್ರ ವಿರೋಧ ಕಂಡುಬರಬಹುದು. ಗುರು ಜಪ ಎಷ್ಟು ಸಾಧ್ಯವೋ ಅಷ್ಟುಮಾಡಿ.

**ಕರ್ಕಾಟಕ ರಾಶಿ:** ಗುರುಗ್ರಹವು ಈ ರಾಶಿಯವರಿಗೆ ಸಪ್ತಮ ಸ್ಥಾನದದಲ್ಲಿದ್ದು, ವಿದ್ಯಾರ್ಥಿಗಳಿಗೆ ಉತ್ತಮ ದಿನಗಳು. ಅರ್ಥಕ್ಕೆ ನಿಂತಿದ್ದ ವಿದ್ಯಾಭ್ಯಾಸ ಮತ್ತೆ ಮುಂದುವರೆಯಲಿದೆ. ನಿಮ್ಮ ಅನೇಕ ಸಮಸ್ಯೆಗಳಿಗೆ ನೀವೇ ಪರಿಹಾರ ಕಂಡು ಕೊಳ್ಳುವಿರಿ. ಆದಾಯದ ಮೂಲದಲ್ಲಿ ತೀವ್ರ ಹೆಚ್ಚಳ, ಗುರು-ಹಿರಿಯರಲ್ಲಿ ವಿಶೇಷ ಗೌರವ ತೋರುವಿರಿ. ಪರ ಸ್ತ್ರೀಯರ ವಿಚಾರದಲ್ಲಿ ಆಸಕ್ತಿ ಮೂಡುವುದು. ತಮ್ಮ ಆಸ್ತಿ, ಅಂತಸ್ತಿನ ಬಗ್ಗೆ ಗರ್ವ ತೋರುವರು. ಸತ್ಯವಂತರೇ ಆಗಿದ್ದರೂ, ಪ್ರಾಸಂಗಿಕವಾಗಿ ಅವರಿಂದ ಪ್ರಾಮಾಣಿಕತೆ ನಿರೀಕ್ಷಿಸುವುದು ಕಷ್ಟ. ಸಾಧು-ಸಂತರ ದರ್ಶನ ಮತ್ತು ಪುಣ್ಯ ಕ್ಷೇತ್ರಗಳ ದರ್ಶನ ಭಾಗ್ಯ. ಶಾಸ್ತ್ರಾಧ್ಯಯನ ಮಾಡುವವರಿಗೆ, ಮಠ ಮಾನ್ಯಗಳಿಂದ ಸನ್ಮಾನವಾಗಿ, ಸಾಮಾಜಿಕ ಪ್ರತಿಷ್ಠೆ ಹೆಚ್ಚುವುದು. ಗುಟ್ಟಾಗಿ ಆಸ್ತಿ ಮಾಡುವರು. ಅನೇಕ ಅಲಂಕಾರಿಕ ವಸ್ತುಗಳ ಖರೀದಿ ಜೋರಾಗಿಯೇ ನಡೆಯಲಿದೆ. ಹೊಸಮನೆ ಕಟ್ಟುವ ವಿಚಾರವಿದ್ದಲ್ಲಿ ಬಂಧುಗಳಿಂದ ಆರ್ಥಿಕ ನೆರವು ದೊರೆಯಲಿದೆ. ಕುಟುಂಬದಲ್ಲಿ ಸುಖ, ಶಾಂತಿ, ನೆಮ್ಮದಿ ದೊರೆಯಲಿದೆ.



**ಸಿಂಹ ರಾಶಿ :** ಈ ರಾಶಿಯವರಿಗೆ ಗುರುವು ರಿಪು ಅಂದರೆ ಶತ್ರು ಸ್ಥಾನದಲ್ಲಿ ಗುರು ಗ್ರಹದ ಸಂಚಾರವಿರುವುದರಿಂದ, ಶತ್ರುಗಳ ಎಲ್ಲಾ ಮರ್ಮವನ್ನರಿತು, ಅವರ ತಂತ್ರಗಳು ಅವರಿಗೇ ತಿರುಗು ವಂತೆ ಮಾಡುವಲ್ಲಿ ಯಶಸ್ವಿಯಾಗು ವಿರಿ. ಆದಾಯದ ಮೂಲದಲ್ಲಿ ಎಷ್ಟೇ ಹೆಚ್ಚಳವಾದರೂ, ಆರ್ಥಿಕ ಸಮಸ್ಯೆ ತಪ್ಪಿದ್ದಲ್ಲ. ಮನೆಯಲ್ಲಿ ಹಿರಿಯರ ಆರೋಗ್ಯದಲ್ಲಿ ವ್ಯತ್ಯಾಸವಾಗುವು ದಲ್ಲದೆ, ವೈಯಕ್ತಿಕ ಆರೋಗ್ಯದಲ್ಲೂ ವ್ಯತ್ಯಾಸ ಕಂಡು ಬರಬಹುದು. ಆದರೆ, ಸಂಗೀತ ಕ್ಷೇತ್ರದಲ್ಲಿರುವವರು ವಿಶೇಷ ಸಾಧನೆ ಮಾಡಿ, ಕೀರ್ತಿವಂತರಾಗುವರು. ಯಾವುದೇ ಕೆಲಸದಲ್ಲಿ ಆರಂಭಿಕ ಆಲಸ್ಯ ತಪ್ಪಿದ್ದಲ್ಲ. ಸೋದರ ಮಾವನಿಂದಲೇ ಅಪಮಾನಕ್ಕೊಳಗಾಗಬಹುದು. ಸರ್ಕಾರಿ ನೌಕರರಿಗೆ ಯಾವುದೋ ಹಳೆಯ ಕೇಸೊಂದು ಮತ್ತೆ ವಿಚಾರಣೆಗೆ ಬಂದು, ದೂರದೂರಿಗೆ ವರ್ಗವಾಗಿ, ಕುಟುಂಬದಿಂದ ದೂರವಿರಬೇಕಾದ ಪ್ರಸಂಗ ಬರಬಹುದು. ವಿದ್ಯಾರ್ಥಿಗಳು, ಅನೇಕ ಅವಕಾಶಗಳಿಂದ ವಂಚಿತರಾಗುವರು. ಬಂಧುಗಳ ಉಪಟಳ, ನಿಮ್ಮನ್ನು ಹೈರಾಣಾಗಿಸುವುದು. ಯೋಗಾಭ್ಯಾಸ, ಧ್ಯಾನಗಳನ್ನು ಮಾಡುವುದರ ಜೊತೆಗೆ, ವಿಷ್ಣು ಸಹಸ್ರನಾಮ ಪಠಣ ಮಾಡುವುದು ಲೇಸು.

**ಕನ್ಯಾ ರಾಶಿ:** ಈ ರಾಶಿಯವರಿಗೆ ಪಂಚಮಭಾವದಲ್ಲಿ ಅಂದರೆ ಪುಣ್ಯ ಸ್ಥಾನದಲ್ಲಿ ಗುರು ಗ್ರಹ ಸಂಚಾರವಿರುವುದರಿಂದ ವಿದ್ಯಾರ್ಥಿಗಳಿಗೆ ವಿಶೇಷಾಧ್ಯಯನ ಮಾಡಲು ಉತ್ತಮ ಅವಕಾಶ ದೊರೆಯಲಿದೆ.ವಿದೇಶದಲ್ಲಿರುವ ಮಗನಿಂದ, ನಿರೀಕ್ಷಿತ ಶುಭ ಸಮಾಚಾರ ಕೇಳಿಬರಲಿದೆ. ಬಹಳ ಕಾಲದಿಂದ ಸಂತತಿ ಹೀನರಾದವರಿಗೆ, ಸಂತಾನ ಪ್ರಾಪ್ತಿಯ ಎಲ್ಲಾ ಲಕ್ಷಣಗಳು ಕಂಡುಬರುತ್ತದೆ. ಹಿರಿಯರಿಂದ ಬರಬೇಕಾಗಿದ್ದ ಆಸ್ತಿಯು, ಅನಾಯಾಸವಾಗಿ ಕೈ ಸೇರಲಿದೆ. ಹಿಡಿದ ಯಾವುದೇ ಕೆಲಸಗಳು ಅನಾಯಾಸವಾಗಿ ನೆರವೇರಲಿವೆ. ಉತ್ತಮ ಆಚಾರ-ವಿಚಾರಗಳನ್ನು ರೂಢಿಸಿಕೊಳ್ಳುವರು. ದೊಡ್ಡ ದೊಡ್ಡ ನಗರಗಳಲ್ಲಿ ಮನೆ ಅಥವಾ ನಿವೇಶನ ಕೊಂಡುಕೊಳ್ಳುವ ಯೋಗವಿದೆ. ಅಲಂಕಾರಿಕ ವಸ್ತುಗಳ ಖರೀದಿ ಜೋರಾಗಿಯೇ ನಡೆಯಲಿದೆ. ಬೌದ್ಧಿಕ ಚುರುಕುತನದಿಂದ ಹಾಗೂ ಮಾತಿನ ಮೋಡಿಯಿಂದ ಎಲ್ಲರನ್ನೂ ವಶಪಡಿಸಿಕೊಳ್ಳುವರು. ಮಕ್ಕಳಲ್ಲಿ ವಿಧೇಯತೆ ಮೂಡಿ, ನಿಮ್ಮ ಎಲ್ಲಾ ಕೆಲಸ ಕಾರ್ಯಗಳಲ್ಲಿ ನೆರವಾಗುವರು. ಬಹಳ ದಿನಗಳಿಂದ ಕಾಡುತ್ತಿದ್ದ ಅನಾರೋಗ್ಯ ಸಮಸ್ಯೆ ಇಷ್ಟರಲ್ಲೇ ನಿವಾರಣೆಯಾಗಲಿದೆ. ಆದಾಯದ ಮೂಲದಲ್ಲಿ ತೀವ್ರ ಹೆಚ್ಚಳ ಕಂಡುಬಂದು, ಉಳಿತಾಯದ ಬಗ್ಗೆ ಚಿಂತಿಸುವಿರಿ, ಮನೆಯಲ್ಲಿ ಅನೇಕ ಮಂಗಳ ಕಾರ್ಯಗಳು ನಡೆಯಲಿವೆ.

**ತುಲಾ ರಾಶಿ :** ಈ ರಾಶಿಯವರಿಗೆ ಚತುರ್ಥ ಸ್ಥಾನದಲ್ಲಿ ಅಂದರೆ, ಮಾತೃ ಸ್ಥಾನವನ್ನು ಪ್ರತಿನಿಧಿಸುತ್ತಿದ್ದು, ಕಳೆದು ಹೋಗಿದ್ದ ಹಿರಿಯರ ಪ್ರೀತಿ-ವಿಶ್ವಾಸ ಮರಳಿ ಪಡೆಯುವರು. ಹೊಸ ವಾಹನಗಳ ಖರೀದಿ ಯೋಗವಿದ್ದು, ಅದಕ್ಕೆ ಬೇಕಾದ ಆರ್ಥಿಕ ನೆರವು ದೊರೆಯಲಿದೆ. ಕುಲದೇವತಾನುಗ್ರಹ (5ನೇ ಪುಟಕ್ಕೆ)

# ಹರಿಹರ : ಇಂದಿನಿಂದ ತುಂಗಭದ್ರಾ ಪುಷ್ಕರ ಬ್ರಹ್ಮಯಜ್ಞ

**12 ಪುಣ್ಯ ನದಿಗಳಲ್ಲಿ 12 ವರ್ಷಗಳಿಗೊಮ್ಮೆ 12 ದಿನಗಳ ಕಾಲ ಬರುವ ಪುಣ್ಯಕಾಲವೇ ಈ ಪುಷ್ಕರ (ಕುಂಭ ಮೇಳ) ಈ ಪುಷ್ಕರ ಸಮಯದಲ್ಲಿ ನದಿಯಲ್ಲಿ ಸ್ನಾನ ಮಾಡಿದರೆ ಕೋಟಿ ಪಾಪಗಳು ನಾಶವಾಗಿ ಅಶ್ವಮೇಧ ಯಾಗ ಫಲವು ದೊರೆಯುತ್ತದೆ. ಈ ಸಮಯದಲ್ಲಿ ಬ್ರಹ್ಮಯಜ್ಞ ಮಾಡುವ ಮೂಲಕ ಕೊರೊನಾ ನಾಶ ಮಾಡಿ ಲೋಕ ಕಲ್ಯಾಣ ಮಾಡಲಾಗುತ್ತದೆ.**

**-ವರಹಾಚಾರ್, ಪ್ರಧಾನ ಗುರುಗಳು, ಶ್ರೀ ರಾಘವೇಂದ್ರ ಸ್ವಾಮಿ ಮಠ.**

ಹರಿಹರ, ನ.19- ನಗರದ ತುಂಗಭದ್ರಾ ನದಿ ದಂಡೆಯ ಮೇಲಿರುವ ಶ್ರೀ ರಾಘವೇಂದ್ರ ಸ್ವಾಮಿಗಳ ಮಠದ ಆವರಣದಲ್ಲಿ ವಿಕಾಸ ತರಂಗಿಣಿ, ಆಂಡಾಳ್ ಗೋಷ್ಠಿ ಸ್ಫೂರ್ತಿ ಸೇವಾ ಟ್ರಸ್ಟ್ ವತಿಯಿಂದ ಕೋವಿಡ್-19 ಸಂಪೂರ್ಣ ನಿವಾರಣೆಗಾಗಿ ಮತ್ತು ಲೋಕ ಕಲ್ಯಾಣಾರ್ಥ ತುಂಗಭದ್ರಾ ಪುಷ್ಕರ (ಕುಂಭ ಮೇಳ) ಬ್ರಹ್ಮಯಜ್ಞವನ್ನು ನಾಳೆ ದಿನಾಂಕ 20ರ ಶುಕ್ರವಾರದಿಂದ ಬರುವ ಡಿಸೆಂಬರ್ 1 ರವರೆಗೆ ಆಯೋಜಿಸಲಾಗಿದೆ ಎಂದು ಶ್ರೀ ರಾಘವೇಂದ್ರ ಸ್ವಾಮಿ ಮಠದ ಪ್ರಧಾನ ಗುರುಗಳಾದ ವರಹಾಚಾರ್ ತಿಳಿಸಿದರು.

ಪ್ರತಿನಿತ್ಯ ಬೆಳಗ್ಗೆ 8 ಗಂಟೆಗೆ ಗೋಪೂಜೆ, ಅರ್ಚನೆ, ಸೇವಾ ಕಾಲ, ವೇದಪಾರಾಯಣ, ನಂತರದಲ್ಲಿ ಬೆಳಿಗ್ಗೆ 9 ಗಂಟೆಯಿಂದ ಯಜ್ಞಗಳು ಪ್ರಾರಂಭ ಮತ್ತು ಸಂಜೆ 6 ಗಂಟೆಗೆ ತುಂಗಭದ್ರಾ ನದಿಗೆ ಆರತಿ. ದಿನಾಂಕ 20 ರಂದು ಶುಕ್ರವಾರ ಸಂಜೆ 6-30 ಕ್ಕೆ ಅಂಕುರಾರ್ಪಣ ಧ್ವಜಾರೋಹಣ. ದಿನಾಂಕ 21 ರ ಶನಿವಾರ, ಶ್ರೀ ಯಾಗ (ಲಕ್ಷ್ಮಿ ಯಾಗ) ಐಶ್ವರ್ಯ ಪ್ರಾಪ್ತಿಗಾಗಿ. ದಿನಾಂಕ 22 ಭಾನುವಾರ ಶ್ರೀ ಮಹಾವಿಷ್ಣು ಯಾಗ ಸಹಸ್ರನಾಮಗಳಿಂದ ಹವನ ಮೂಲಕ ಹೋಮ, ದಿನಾಂಕ 23ರ ಸೋಮವಾರ ಶ್ರೀ ಸುದರ್ಶನ ಯಾಗ (ಶತ್ರು ವಿನಾಶಕ್ಕಾಗಿ) ದಿನಾಂಕ 24ರ ಮಂಗಳವಾರ ಶ್ರೀ ನರಸಿಂಹ ಯಾಗ (ಆರೋಗ್ಯ ಸಿದ್ಧಿಗಾಗಿ) ದಿನಾಂಕ 25ರ ಬುಧವಾರ ಶ್ರೀ ಅನಸ್ತೇಷ್ಠಿ (ಕುಜ ದೋಷ ನಿವಾರಣೆಗಾಗಿ) ದಿನಾಂಕ 26ರ ಶ್ರೀ ಲಕ್ಷ್ಮೀ ಹಯಗ್ರೀವ ಯಾಗ (ಜ್ಞಾನ ಸಿದ್ದಿಗಾಗಿ) ದಿನಾಂಕ 27 ಶುಕ್ರವಾರ ಶ್ರೀ ಧನ್ವಂತರಿ ಯಾಗ (ಕೊರೊನಾ ನಿವಾರಣೆಗಾಗಿ) ದಿನಾಂಕ 28ರ ಶನಿವಾರ ಶ್ರೀ ವೈನತೇಯ ಯಾಗ (ಸರ್ಪದೋಷ ನಿವಾರಣೆಗಾಗಿ) ದಿನಾಂಕ 29 ಭಾನುವಾರ ಶ್ರೀರಾಮ ತಾರಕ ಯಜ್ಞ ( ಸರ್ವಲೋಕ ರಕ್ಷಣೆಗಾಗಿ) ದಿನಾಂಕ 30ರ ಸೋಮವಾರ ಶ್ರೀ ಸಂತಾನಗೋಪಾಲ ಯಾಗ ( ಸತ್ ಸಂತಾನ ಪ್ರಾಪ್ತಿಗಾಗಿ) ಸಂಜೆ 5 ಗಂಟೆಗೆ ಶ್ರೀ ಲಕ್ಷ್ಮೀ ನಾರಾಯಣ ಕಲ್ಯಾಣ ಮಹೋತ್ಸವ. ದಿನಾಂಕ 1ರ ಮಂಗಳವಾರ ಬೆಳಗ್ಗೆ 10 ಗಂಟೆಯಿಂದ ಶ್ರೀ ಬ್ರಹ್ಮಯಜ್ಞದ ಮಹಾಪೂರ್ಣಾಹುತಿ (ಅಷ್ಟೈ ಶ್ವರ್ಯ ಸಿದ್ಧಿಗಾಗಿ) ನಂತರದಲ್ಲಿ ಮಹಾಮಂಗ ಳಾರತಿ ಪ್ರಸಾದ ವಿನಿಯೋಗ ನಡೆಯುತ್ತದೆ.

## ಮುಂದುವರೆದ ಮಂಗನ ಹಾವಳಿ ಬಲೆಗೆ ಸಿಗದ ಹುಚ್ಚು ಮಂಗ



**ಹೊನ್ನಾಳಿ**

ಹೊನ್ನಾಳಿ, ನ.19- ಹುಚ್ಚು ಮಂಗನ ಹಾವಳಿ ಮುಂದುವರೆದು ಎರಡು ದಿನಗಳಲ್ಲಿ ಹತ್ತಕ್ಕು ಹೆಚ್ಚು ಜನರಿಗೆ ಕಚ್ಚಿ ಹಾನಿ ಮಾಡಿದ್ದು, ಸಾರ್ವಜನಿಕರ ದೂರಿನ ಮೇರೆಗೆ ಪಟ್ಟಣ ಪಂಚಾಯಿತಿ ಅಧ್ಯಕ್ಷ ಶ್ರೀಧರ್ ನೇತೃತ್ವದಲ್ಲಿ ಮಂಗನ ಹಿಡಿಯಲು ಪಂಚಾಯಿತಿ ಅಧಿಕಾರಿಗಳು ಹಾಗೂ ಅರಣ್ಯ ಅಧಿಕಾರಿಗಳು ಮುಂದಾದ ಘಟನೆ ನಡೆಯಿತು. ನಿನ್ನೆ ಇಡೀ ದಿನ ಅಧಿಕಾರಿಗಳು ಮಂಗನ ಹಿಡಿಯುಲು ಕಾರ್ಯ ಪ್ರವೃತ್ತರಾದರೂ ಹಿಡಿಯಲು ಸಾಧ್ಯವಾಗದೆ ಇರುವುದು ಸಾರ್ವಜನಿಕರಲ್ಲಿ ಮತ್ತಷ್ಟು ಆತಂಕ ಹೆಚ್ಚಿಸಿದೆ.

ಪಟ್ಟಣ ಪಂಚಾಯಿತಿ ಅಧ್ಯಕ್ಷ ಶ್ರೀಧರ್ ಮಾತನಾಡಿ, ಮಂಗನನ್ನು ಹಿಡಿಯಲು ಪ್ರಯತ್ನಿಸಿದ್ದು, ಪಂಚಾಯಿತಿ ಮುಖ್ಯಾಧಿಕಾರಿ ವೀರಭದ್ರಯ್ಯನವರೊಂದಿಗೆ ಪಂಚಾಯಿತಿಯ 20 ಪೌರ ಕಾರ್ಮಿಕರ ಹಾಗೂ ಅರಣ್ಯ ಸಿಬ್ಬಂದಿಗಳೊಂದಿಗೆ ಈ ಕಾರ್ಯಕ್ಕೆ ಮುಂದಾಗಿದ್ದರೂ ಹಿಡಿಯಲು ಸಾಧ್ಯವಾಗಿಲ್ಲ. ಇಂದು ಕೂಡ ನಾಲ್ಕೈದು ಜನಕ್ಕೆ ಕಚ್ಚಿ ಹಾನಿ ಮಾಡಿದೆ ಎಂದರು.

ಬೆಳಿಗ್ಗೆ ಹತ್ತು ಗಂಟೆಗೆ ದುರ್ಗಿಗುಡಿ ಉತ್ತರ ಭಾಗದಲ್ಲಿ ಕಾಣಿಸಿಕೊಂಡು ಕ್ರಮೇಣ ಕಲ್ಕೇರಿ, ಸಿದ್ದಪ್ಪನಕೆರೆ, ಸೊಪ್ಪಿನಕೇರಿ ದೊಡ್ಡಪೇಟೆ ಹೀಗೆ ಅನೇಕ ಕಡೆಸಾಗಿ 6 ಗಂಟೆಯ ನಂತರ ಕತ್ತಲಾಗಿದ್ದರಿಂದ ಹಳೆ ಸರ್ಕಾರಿ ಆಸ್ಪತ್ರೆ ಕಡೆ ಹೋಗಿ ಕಣ್ಮರೆಯಾಗಿದೆ. ನಾಳೆಯೂ ಈ ಕಾರ್ಯ ಮುಂದುವರೆಸುವುದಾಗಿ ಅವರು ವಿವರಿಸಿದರು. ಮಂಗನಿಂದ ಹಾನಿಗೊಂಡಿರುವವರು ಕುಂಕೊದ್ ಚನ್ನೇಶ್, ಅಮಾನುಲ್ಲಾ, ತಲಾದ್, ಕುಳ್‌ಮಲ್ಲಿಕಣ್ಣ, ಆತಿಫ್ ಹೀಗೆ ಅನೇಕರು ಹಾನಿಗೊಂಡು ಚಿಕಿತ್ಸೆ ಪಡೆದಿರುವರು. ಎರಡು ದಿನಗಳಿಂದ ಕೆಲವರು ರಾತ್ರಿ ಕೈಯಲ್ಲಿ ಬೆತ್ತ ಹಿಡಿದು ಒಡಾಡುತ್ತಿರುವುದು ಕಂಡುಬರುತ್ತಿದೆ.

## ಪರಿಷ್ಕರಣಾ ಕರಡು ಮತದಾರರ ಪಟ್ಟಿ ಪ್ರಕಟ

ದಾವಣಗೆರೆ, ನ.19- ಮುಖ್ಯ ಚುನಾವಣಾಧಿಕಾರಿಗಳ ನಿರ್ದೇಶನದಂತೆ ಭಾವಚಿತ್ರವಿ ರುವ ಮತದಾರರ ಪಟ್ಟಿಗಳ ವಿಶೇಷ ಸಂಕ್ಷಿಪ್ತ ಪರಿಷ್ಕರಣೆಯ ಕರಡು ಮತದಾರರ ಪಟ್ಟಿ ಯನ್ನು ಜಿಲ್ಲೆಯ ಎಲ್ಲಾ ವಿಧಾನ ಸಭಾ ಕ್ಷೇತ್ರಗಳಲ್ಲಿ ಮತದಾರರ ನೋಂದಣಾಧಿಕಾರಿಗಳ ಕಚೇರಿ, ಸಹಾಯಕ ಮತದಾರರ ನೋಂದಣಾಧಿಕಾರಿಗಳ ಕಚೇರಿ ಹಾಗೂ ಗೊತ್ತುಪಡಿಸಿದ ಸ್ಥಳಗಳಲ್ಲಿ ಇಂದು ಪ್ರಚುರಪಡಿಸಲಾಗಿದೆ.

ಕರಡು ಮತದಾರರ ಪಟ್ಟಿಯಲ್ಲಿ ಮತದಾರರು ತಮ್ಮ ಹೆಸರುಗಳನ್ನು ವೆಬ್‌ಸೈಟ್‌ನಲ್ಲಿ ಹಾಗೂ ಸಂಬಂಧಪಟ್ಟ ಕಚೇರಿ ಗಳಲ್ಲಿ ಹಾಗೂ ಮತಗಟ್ಟೆಗಳಲ್ಲಿ ಪರಿಶೀಲಿಸಿಕೊಳ್ಳ ಬಹುದಾಗಿರುತ್ತದೆ ಎಂದು ಅಪರ ಜಿಲ್ಲಾಧಿಕಾರಿ ಪೂಜಾರ ವೀರಮಲ್ಲಪ್ಪ ತಿಳಿಸಿದ್ದಾರೆ.

## ಶಿಂಗ್ರಿಹಳ್ಳಿಯಲ್ಲಿ ಇಂದು ದೇವತಾ ಪ್ರತಿಷ್ಠಾಪನೆ

**ಹರಪನಹಳ್ಳಿ ತಾಲ್ಲೂಕು**

ಹರಪನಹಳ್ಳಿ ತಾಲ್ಲೂಕು ಶಿಂಗ್ರಿಹಳ್ಳಿಯಲ್ಲಿ ಇಂದು ದೇವತಾ ಪ್ರತಿಷ್ಠಾಪನೆ, ಕಳಸಾರೋಹಣ ಮತ್ತು ಸಾಮೂಹಿಕ ವಿವಾಹ ಹಾಗೂ ಧಾರ್ಮಿಕ ಸಮಾರಂಭ ಇಂದು ಬೆಳಿಗ್ಗೆ 9 ಗಂಟೆಗೆ ನಡೆಯಲಿದೆ.

ಸಾನ್ನಿಧ್ಯವನ್ನು ಆವರಗೊಳ್ಳದ ಶ್ರೀ ಓಂಕಾರ ಶಿವಾ ಚಾರ್ಯ ಸ್ವಾಮೀಜಿ ವಹಿಸುವರು. ಸಿಂಗ್ರಿಹಳ್ಳಿ ಶ್ರೀ ಗೌರ ವೇಶ್ವರ ಮಠದ ವೇ. ಕೊಟ್ರೇಶಯ್ಯ ಸ್ವಾಮಿ (ಸಿಂಗ್ರಿಹಳ್ಳಿ), ಕೂಲಹಳ್ಳಿ ಶ್ರೀ ಗೋಣಿ ಬಸವೇಶ್ವರ ಸಂಸ್ಥಾನ ಮಠದ ಶ್ರೀ ಚಿನ್ಮಯ ಸ್ವಾಮೀಜಿ, ನಿಚ್ಚವ್ವನ ಹಳ್ಳಿಯ ಹಾಲಸ್ವಾಮಿ ಮಠದ ಶ್ರೀ ಸದ್ಗುರು ಶಿವಯೋಗಿ ಹಾಲ ಸ್ವಾಮೀಜಿ ವಹಿ ಸುವರು. ಆವರಗೊಳ್ಳದ ಬಿ.ಎಂ.ವಿ. ಪ್ರಸನ್ನಸ್ವಾಮಿ ಶಾಸ್ತ್ರಿ ಗಳು ಮತ್ತು ಸಂಗಡಿಗರಿಂದ ಪೌರೋಹಿತ್ಯ ನಡೆಯಲಿದೆ.

ಕಾರ್ಯಕ್ರಮವನ್ನು ಜಿ. ಕರುಣಾಕರ ರೆಡ್ಡಿ ಉದ್ಘಾಟಿಸುವರು.

ಅಧ್ಯಕ್ಷತೆಯನ್ನು ಚನ್ನಾಪುರ ಬಸವರಾಜಪ್ಪ ವಹಿಸುವರು. ಮುಖ್ಯ ಅತಿಥಿಗಳಾಗಿ ವೈ. ದೇವೇಂದ್ರಪ್ಪ, ಜಿ.ಎಂ. ಸಿದ್ದೇಶ್ವರ, ಪಿ.ಟಿ. ಪರಮೇಶ್ವರ ನಾಯ್ಕ, ಶ್ರೀಮತಿ ಎಂ.ಪಿ. ಲತಾ ಮಲ್ಲಿಕಾರ್ಜುನ್, ಶ್ರೀಮತಿ ಎಂ.ಪಿ. ವೀಣಾ ಮಹಾಂತೇಶ್, ಶ್ರೀಮತಿ ರಶ್ಮಿ ರಾಜಪ್ಪ, ಟಿ. ನಾಗರಾ ಜಪ್ಪ, ತಾವರ್ಯಾನಾಯ್ಕ, ಎಂ.ಟಿ. ಬಸವನಗೌಡ, ಟಿ. ಶೇಖರಪ್ಪ, ಪಿ. ಮಹಾಬಲೇಶ್ವರಗೌಡ, ಎನ್. ಕೊಟ್ರೇಶ್ ಆಗಮಿಸುವರು.

ವಿಶೇಷ ಆಹ್ವಾನಿತರಾಗಿ ಈಡಿಗರ ರಾಮಚಂದ್ರಪ್ಪ, ಶ್ರೀಮತಿ ನಿಂಗಮ್ಮ ಚೌಟ್ಗಿ ಗೋಣಿಬಸಪ್ಪ, ಶ್ರೀಮತಿ ಬಸಮ್ಮ ಬಡಿವಾರದ ದೇವೇಂದ್ರಪ್ಪ, ಬಾವಿಕಟ್ಟಿ ದಾದಾಪೀರ್, ಶ್ರೀಮತಿ ಶಾಂತಮ್ಮ ತೆಲಿಗೇರ ಶಿವಪ್ಪ ಮತ್ತಿತರರು ಭಾಗವಹಿಸುವರು.

## ನಗರದಲ್ಲಿ ಇಂದು ರಾಜ್ಯ ರೈತ ಸಂಘದಿಂದ ಸಭೆ - ಬೈಕ್ ರ‍್ಯಾಲಿ

ದಾವಣಗೆರೆ, ನ.19- ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಜಿಲ್ಲಾ ಸಮಿತಿ ವತಿಯಿಂದ ನಾಳೆ ದಿನಾಂಕ 20ರ ಶುಕ್ರವಾರ ಬೆಳಿಗ್ಗೆ 11 ಗಂಟೆಗೆ ನಗರದ ಎಪಿಎಂಸಿ ಟೆಂಡರ್ ಹಾಲ್‌ನಲ್ಲಿ ರಾಜ್ಯ ಸಮಿತಿ ಸಭೆ ಹಾಗೂ ಬೈಕ್ ರ‍್ಯಾಲಿ ನಡೆಸುತ್ತಿರುವುದಾಗಿ ಜಿಲ್ಲಾಧ್ಯಕ್ಷ ಮಲ್ಲಶೆಟ್ಟಿಹಳ್ಳಿ ಚನ್ನಬಸಪ್ಪ ತಿಳಿಸಿದ್ದಾರೆ.

ಸಂಘಟನೆಯ ರಾಜ್ಯಾಧ್ಯಕ್ಷ ಕೋಡಿಹಳ್ಳಿ ಚಂದ್ರಶೇಖರ್ ಅಧ್ಯಕ್ಷತೆಯಲ್ಲಿ ಕರ್ನಾಟಕ ರಾಜ್ಯ ಸಮಿತಿ ಸಭೆ ನಡೆಯಲಿದೆ. ಅಂದು ಬೆಳಿಗ್ಗೆ 10 ಗಂಟೆಗೆ ಕೋಡಿಹಳ್ಳಿ ಚಂದ್ರಶೇಖರ್ ಅವರನ್ನು ರ‍್ಯಾಲಿ ಮೂಲಕ ಸ್ವಾಗತಿಸಲಾಗುವುದು.

ಭೂಸ್ವಾಧೀನ, ಎಪಿಎಂಸಿ ಕಾಯ್ದೆ, ರಾಜ್ಯದಲ್ಲಿ ಕೃಷಿ ಉತ್ಪನ್ನಗಳು ಮಾರುಕಟ್ಟೆಗೆ ಬರುತ್ತಿದ್ದು, ಸರ್ಕಾರ ಖರೀದಿ ಕೇಂದ್ರಗಳನ್ನು ತೆರೆಯದೇ ಇರುವುದರಿಂದ ಎಂಎಸ್‌ಪಿ ಬೆಲೆಗಿಂತ ಕಡಿಮೆಗೆ ಮಾರಾಟವಾಗುತ್ತಿ ರುವ ಬಗ್ಗೆ ಸಭೆಯಲ್ಲಿ ಚರ್ಚಿಸಲಾಗುವುದು ಎಂದು ಹೇಳಿದ್ದಾರೆ.

## ಮೇಘ ದೂತ

ಕಾಣುವ ಹೆಪ್ಪುಗಟ್ಟಿದ
ಮೋಡಗಳು ಆವಿಯೋ
ಮಂಜೋ ತರ್ಕಕ್ಕೀಡು
ಮಾಡಿದರು ಗಾಳಿಯಷ್ಟೇ
ನಿರ್ಮಲ ಉಸಿರಾಗಿದೆ..

ಬಿಳಿ ಮೋಡ ಕಪ್ಪು ಮೋಡ
ಕಾಣುವುದಾದರೆ
ನೀರೇಕೆ ಕಪ್ಪಿಲ್ಲ,ಸದಾ ತಿಳಿ
ಬಿಳಿಯಾಗಿರಲು ಮನಸೇಗೆ
ಬಣ್ಣವಿಲ್ಲದೆ ತುಂಬಿದ್ದೇಕೆ.

ಕಷ್ಟಗಳು ಸದಾ ಮೋಡದ
ಹಾಗೇ ಕರಗುತ್ತವೆ
ಎಂಬುದು
ಸೂರ್ಯಚಂದ್ರ
ದರ್ಶನದಷ್ಟೆ ನಿತ್ಯ ಸತ್ಯ..
ಎಂಬುದು ಲೋಕ ಸಾಕ್ಷಿ.

ಚಲಿಸುವ ಮೋಡಗಳು
ಚಲಿಸಲು ಮೋಡಗಳು
ಇರುವಿಕೆ ಕಾರಣವಲ್ಲದೆ
ಮತ್ತೇನು? ಅಲ್ಲವೇ ಮನ,
ತನುವಿನ ಮನುಜನೆ. ?!!

**ರೇವಣ್ಣ ಬಳ್ಳಾರಿ,**
ನ್ಯಾಯವಾದಿ, ದಾವಣಗೆರೆ.

## ದಿನದ ಚುಟುಕು

ಹೆಣ್ಣು, ಹೊನ್ನು,ಮಣ್ಣು
ಬೀಳದಿರಲದಕೆ ಕೆಟ್ಟ ಕಣ್ಣು
ಪಾಲಿಗೆ ಬಂದದ್ದನ್ನು ಉಣ್ಣು
ಬಾಳಾಗಲಿ ಮಾಗಿದ ಹಣ್ಣು !

- ವೀಕೆಎಂ.

## ಬೆಳವನೂರಿನ ಸಮುದಾಯ ಭವನ ಪ್ರಾರಂಭ

ಬೆಳವನೂರು ಗ್ರಾಮಸ್ಥರು ಹಾಗೂ ಶ್ರೀ ಬಸವೇಶ್ವರ ಸಮುದಾಯ ಭವನದ ಆಡಳಿತ ಮಂಡಳಿಯವರು ಸಭೆ ಸೇರಿ, ದಿನಾಂಕ : 21.11.2020 ರಿಂದ ಮದುವೆ ಹಾಗೂ ಇತರೆ ಸಮಾರಂಭಗಳನ್ನು ನಡೆಸಲು ತೀರ್ಮಾನಿಸಲಾಯಿತು.

ಹೆಚ್ಚಿನ ಮಾಹಿತಿಗಾಗಿ ಮೊ. ನಂ. **93807 38355** ಮತ್ತು **98807 19187** ಗೆ ಸಂಪರ್ಕಿಸಿರಿ.

**ಎಂ.ಎಸ್. ಸಿದ್ದಪ್ಪ** ಅಧ್ಯಕ್ಷರು | **ಬಿ.ವೈ. ಮಹೇಂದ್ರನಾಥ್** ಕಾರ್ಯದರ್ಶಿ

## ಕ್ರಯ ಪತ್ರ ಕಳೆದಿದೆ

**ದಾವಣಗೆರೆ** ವಿನೋಬನಗರ, 2ನೇ ಮೇನ್, 2ನೇ ಕ್ರಾಸ್ # 973/1 ರ ವಾಸಿ, **ಶ್ರೀಮತಿ ಜೆ.ಸ್ವಪ್ನ ಕೋಂ ಕೆ.ಜನಾರ್ದನ್** ಇವರ ಹೆಸರಿನ **ಬಸವೇಶ್ವರ ನಗರದ ಸೈಟ್ ನಂ. 191 ಅಳತೆ: 30x40, ಪತ್ರ ಸಂಖ್ಯೆ:** DVG -1-03335 2016-17, **25.05.2016 ರಂದು ನೋಂದಣಿಯಾಗಿರುವ ಮತ್ತು ಆಸ್ತಿ ಹಕ್ಕು ವರ್ಗಾವಣೆ ಮಾಡಿದ ಹಿಂಬರಹ 7.06.2016** ರಂದು ಖಾತೆಯಾಗಿರುವ ಸೈಟ್‌ನ ಕ್ರಯ ಪತ್ರವು ದಿನಾಂಕ: 19.11.2020 ರ ಗುರುವಾರ ರಾತ್ರಿ 8.30ಕ್ಕೆ ವಿನೋಬನಗರ 2ನೇ ಮೇನ್ ರೋಡ್‌ನಲ್ಲಿ ಜೆರಾಕ್ಸ್ ಮಾಡಿಕೊಂಡು ಬರುವಾಗ ಕಳೆದಿದೆ. ಈ ಪತ್ರವು ಯಾರಿಗಾದರೂ ಸಿಕ್ಕಲ್ಲಿ ಈ ಮೇಲಿನ ವಿಳಾಸಕ್ಕೆ ಅಥವಾ ಈ ಕೆಳಕಂಡ ದೂರವಾಣಿಗೆ ಸಂಪರ್ಕಿಸಿ ತಂದು ಕೊಟ್ಟವರಿಗೆ ಸೂಕ್ತ ಬಹುಮಾನ ಕೊಡುಲಾಗಿದೆ.

**63618 80401, 98443 35223**

## ಸಾರ್ವಜನಿಕ ಪ್ರಕಟಣೆ

ಹರಿಹರ ನಗರ 'ಎ' ವಿಭಾಗದಲ್ಲಿರುವ ಎ.ಎಂ. ಶಾದಿಮಹಲ್ ಹತ್ತಿರ ವಾಸವಾಗಿರುವ ಸುಮಾರು 32 ವರ್ಷ ವಯಸ್ಸಿನ **ನಸರುಲ್ಲಾ ತಂದೆ ಶೇಖ್ ಮಹಬೂಬ್** ಆದ ನಾನು ಈ ಮೂಲಕ ಸಾರ್ವಜನಿಕರಿಗೆ ಈ ಪ್ರಕಟಣೆಯ ಮೂಲಕ ತಿಳಿಸುವುದೇನೆಂದರೆ, **ದಿನಾಂಕ 7.5.2014** ರಂದು ನನ್ನ ತಂದೆ, ನಾನು ಮತ್ತು ನನ್ನ ಅಣ್ಣಂದಿರು ಹಾಗೂ ನನ್ನ ಅಜ್ಜನವರ ಮಧ್ಯೆ ಆದ ನೋಂದಣಿ ಪಾಲು **ವಿಭಾಗ ಸಂಖ್ಯೆ 418/2014-15** ರಲ್ಲಿ ನನಗೆ **ಹರಿಹರ ನಗರ ' ವಿಭಾಗ ಬಾಹರ್ ಮಕಾನ್ ಏರಿಯಾದಲ್ಲಿರುವ ಸೈಟ್ ನಂ 61/2, ಆಸ್ತಿ ನಂ 43-43-43 ರಲ್ಲಿರುವ 30x40** ಅಡಿ ಖಾಲಿ ಜಾಗ ನನಗೆ ಹಿಸ್ಸೆಯಲ್ಲಿ ಬಂದಿದ್ದು, ಸದರಿ ಅಸಲು ನೋಂದಣಿ ವಿಭಾಗ ಪತ್ರವು ನಾವು ನಮ್ಮ ಮನೆಯನ್ನು 2019 ನೇ ಇಸವಿ, ನವೆಂಬರ್ ಮೊದಲ ವಾರದಲ್ಲಿ ಪೇಂಟ್ ಮಾಡಿಸುವಾಗ ಮನೆಯನ್ನು ಸ್ವಚ್ಛ ಮಾಡಿಸಿದ್ದು ಹಾಗೂ ಸದರಿ ವಿಭಾಗ ಪತ್ರದ ಮೂಲ ದಾಖಲೆ ಕಳೆದು ಹೋಗಿದ್ದು, ಸದರಿ ಮೂಲ ದಾಖಲೆಯನ್ನು ನಾನು ಯಾವುದೇ ಬ್ಯಾಂಕ್‌ನಲ್ಲಿ ಅಡವಿಟ್ಟು ಸಾಲ ಪಡೆದಿರುವುದಿಲ್ಲ. ಈ ಮೇಲೆ ಹೇಳಿದ ಜಾಗೆಯನ್ನು ನಾನು ಹರಿಹರ ನಗರದಲ್ಲಿರುವ **ಬ್ಯಾಂಕ್ ಆಫ್ ಬರೋಡ ಹರಿಹರ** ಶಾಖೆಯಲ್ಲಿ ಅಡವಿಟ್ಟು ಸಾಲವನ್ನು ಪಡೆಯ ಬೇಕಾಗಿದ್ದು, ಆ ಕಾರಣ ಸದರಿ ಮೂಲ ವಿಭಾಗ ಪತ್ರವು ಯಾರಿಗಾದರೂ ಸಿಕ್ಕಲ್ಲಿ, ಅದನ್ನು ಈ ಮೇಲೆ ಹೇಳಿದ ಬ್ಯಾಂಕಿಗೆ ತಲುಪಿಸಬೇಕಾಗಿಯೂ ಹಾಗೂ ನಾನು ಸಾಲ ಪಡೆಯಲು ಯಾರದಾದರೂ ತಂಟೆ ತಕರಾರು ಇದ್ದರೆ ಪ್ರಕಟಣೆ ಹೊರಡಿಸಿದ 10 ದಿನಗಳೊಳಗಾಗಿ ಸಲ್ಲಿಸಬೇಕಾಗಿ ಕೋರುತ್ತೇನೆ.

ಸ್ಥಳ: ಹರಿಹರ
ದಿನಾಂಕ: 20.11.2020

ಸಹಿ/-
**ನಸರುಲ್ಲಾ**

Repco Home Finance We Value Your Dream
ರೆಪ್ಕೋ ಹೋಮ್ ಫೈನಾನ್ಸ್ ಲಿಮಿಟೆಡ್
CIN No. L65922TN2000TLC044655
ಫೋ : 08192-232836, ಮೊ: 9342440967, 9008090228, 7676823234, 9986297913
ಗೃಹ ಸಾಲ ಮೇಳ
ಸರಳ ವಿಧಾನದಲ್ಲಿ ಸಾಲ ಮಂಜೂರಾತಿ
ದಿ : 21-11-2020 ಶನಿವಾರ ಬೆಳಿಗ್ಗೆ 10 ರಿಂದ ಸಂಜೆ 5 ರ ವರೆಗೆ
ಸ್ಥಳ : ನಂ. 78-7ಎ, ಮೊದಲನೇ ಮಹಡಿ, ನೀಲ್‌ಕಮಲ್ ಫರ್ನಿಚರ್ ಶೋ ರೂಂ ಪಕ್ಕ ರೈತರಬೀದಿ, ಪಿ.ಜೆ. ಬಡಾವಣೆ, ಎ.ವಿ.ಕೆ. ಕಾಲೇಜ್ ರಸ್ತೆ, ದಾವಣಗೆರೆ - 577 002.
ಈ ಕೆಳಕಂಡ ಸಾಲಗಳಿಗೆ ಮಂಜೂರಾತಿ ನೀಡಲಾಗುವುದು :
★ ಖಾಲಿ ನಿವೇಶನ /ಮನೆ/ಫ್ಲಾಟ್ ಖರೀದಿಸಲು
★ ಮನೆ / ವಾಣಿಜ್ಯ ಕಟ್ಟಡ ಕಟ್ಟಲು
★ ಮನೆ ನವೀಕರಣಕ್ಕೆ
★ ಹೆಚ್ಚಿನ ಬಡ್ಡಿದರದ ಅಸ್ತಿತ್ವದಲ್ಲಿರುವ ಸಾಲವನ್ನು ಕಡಿಮೆ ಬಡ್ಡಿಗೆ ವರ್ಗಾಯಿಸಲು ಹಾಗೂ ಹೆಚ್ಚುವರಿ ಸಾಲ ಪಡೆಯಲು
★ ಅಡಮಾನ ಸಾಲ
ಹಬ್ಬದ ಪ್ರಯುಕ್ತ ವಿಶೇಷ ರಿಯಾಯಿತಿ
ಗೃಹ ಸಾಲ 7.75%* ರಿಂದ ಪ್ರಾರಂಭ
ಆಡಳಿತಾತ್ಮಕ ಶುಲ್ಕದಲ್ಲಿ ಸಂಪೂರ್ಣ ಮನ್ನಾ
ಸಂಸ್ಕರಣ ಶುಲ್ಕದಲ್ಲಿ ಶೇ. 0.25 % ವಿಶೇಷ ರಿಯಾಯಿತಿ
ಆದಾಯ ಪತ್ರ ಹಾಗೂ ಆಸ್ತಿಯ ವಿವರಗಳೊಂದಿಗೆ ಭೇಟಿ ನೀಡಿ.

## ಬಾಪೂಜಿ ಕೋ-ಆಪರೇಟಿವ್ ಬ್ಯಾಂಕ್ ಲಿ.

ಆಡಳಿತ ಕಛೇರಿ, ನಂ.120,ಹರ್ಡೇಕರ್ ಮಂಜಪ್ಪ ರಸ್ತೆ, ದಾವಣಗೆರೆ-577001

### ಮಾನ್ಯ ಸದಸ್ಯರ ಗಮನಕ್ಕೆ


ಈ ಮೂಲಕ ತಮಗೆ ತಿಳಿಯಪಡಿಸುವುದೇನೆಂದರೆ, ಕೋವಿಡ್-19 ವೈರಸ್ ಮಹಾಮಾರಿ ತೀವ್ರಗತಿಯಲ್ಲಿ ಹರಡುತ್ತಿರುವ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರದ ಮಾರ್ಗಸೂಚಿಯನ್ವಯ ಹೆಚ್ಚಿಗೆ ಜನ ಒಂದೇ ಕಡೆ ಗುಂಪಾಗಿ ಸೇರುವಂತಿಲ್ಲದ ಪ್ರಯುಕ್ತ ಬ್ಯಾಂಕಿನ 2019-20ನೇ ಸಾಲಿನ 51ನೇ ವಾರ್ಷಿಕ ಮಹಾಸಭೆಯನ್ನು ಸರ್ವ ಸದಸ್ಯರ ಸುರಕ್ಷತೆಯನ್ನು ಗಮನದಲ್ಲಿಟ್ಟುಕೊಂಡು ವಿಡಿಯೋ ಕಾನ್ಫರೆನ್ಸ್/ವರ್ಚ್ಯುಯಲ್ ಮೀಟಿಂಗ್ ಮೂಲಕ ನಡೆಸಲು ಆಡಳಿತ ಮಂಡಲಿ ಸಭೆಯಲ್ಲಿ ತೀರ್ಮಾನಿಸಲಾಗಿದೆ.

ಈ ಮಧ್ಯೆ ರಾಜ್ಯ ಸರ್ಕಾರಕ್ಕೆ ದತ್ತವಾದ ಅಧಿಕಾರದ ಮೂಲಕ ವಿಪತ್ತು ನಿರ್ವಹಣೆ ಅಧಿನಿಯಮ 2005 ರಡಿಯಲ್ಲಿ ಹೊರಡಿಸಿದ ಆದೇಶ ಸಂಖ್ಯೆ ಆರ್.ಡಿ. 158. ಟಿ.ಎನ್.ಆರ್. 2020., ದಿನಾಂಕ 01-10-2020ರ ಮಾರ್ಗಸೂಚಿಗೆ ಒಳಪಟ್ಟು ವಿಶೇಷ ಪ್ರಕರಣವೆಂದು ಪರಿಗಣಿಸಿ ಸಹಕಾರ ಸಂಘಗಳ ಸರ್ವ ಸದಸ್ಯರ ಸಭೆಯನ್ನು ದಿನಾಂಕ 13-12-2020 ರಂದು ನಡೆಸಲು ತೀರ್ಮಾನಿಸಿದೆ. ಆದ್ದರಿಂದ ಮಾನ್ಯ ಸದಸ್ಯ ಬಾಂಧವರು ತಮ್ಮ ದೂರವಾಣಿ ಸಂಖ್ಯೆಯನ್ನು ಬ್ಯಾಂಕಿನ ಉಳಿತಾಯ/ಚಾಲ್ತಿ ಖಾತೆಗಳಲ್ಲಿ ನೊಂದಾಯಿಸಿಕೊಳ್ಳಲು ವಿನಂತಿ. ಬ್ಯಾಂಕ್ ವಾರ್ಷಿಕ ಮಹಾಸಭೆಯ ಪೂರ್ವದಲ್ಲಿ ಎಸ್.ಎಂ.ಎಸ್. ಮೂಲಕ ನೀಡುವ ಸಾಂಕೇತಿಕ ಸಂಖ್ಯೆಯ ಮೂಲಕ ತಾವುಗಳು ಅಂತರ್ಜಾಲದಲ್ಲಿ ವಾರ್ಷಿಕ ಮಹಾಸಭೆಯಲ್ಲಿ ಪಾಲ್ಗೊಳ್ಳಲು ವಿನಂತಿಸಲಾಗಿದೆ. ಈ ಸಂಬಂಧ ಹೆಚ್ಚಿನ ವಿವರಗಳಿಗೆ ನಿಮ್ಮ ಶಾಖಾ ವ್ಯವಸ್ಥಾಪಕರನ್ನು ಸಂಪರ್ಕಿಸಿ.

ಸಹಿ/-
**ಜಿ.ವಿ. ಶಿವಶಂಕರ್**
ಪ್ರಧಾನ ವ್ಯವಸ್ಥಾಪಕರು

ಸಹಿ/-
**ಡಾ. ಶಾಮನೂರು ಶಿವಶಂಕರಪ್ಪ**
ಅಧ್ಯಕ್ಷರು

## ಕಂಪನ



ಭುವಿಯ ಸ್ತಂಬನ
ಬದುಕಿದೂ ಕಂಪನ

ಆಸೆ ನಿರಾಸೆಯ ಅಲೆ
ಬದುಕು ಕಾಮನಬಿಲ್ಲ ಬಲೆ

ನಾಳೆಯ ಮರೀಚಿಕೆಯ
ಕನಸಿನಲಿ
ಇಂದಿನ ಬೆಂಕಿ ಬಿಸಿಲ ದಾರಿ
ಸವೆಸುತಲಿ

ಭುವಿ ಕಂಪಿಸಿ
ಬಾಯ್ತೆರೆದು ಕಬಳಿಸಿ

ಮತ್ತೆ ಶಾಂತ ಪ್ರಶಾಂತತೆಯ
ತುತ್ತ ತುದಿ
ಎಲ್ಲೆಲ್ಲೂ ನೀರವತೆ
ಸ್ವಾರ್ಥಿಗಳಿಲ್ಲದ ಪ್ರಶಾಂತತೆ

ಅದುವೆ ಕಂಪನ
ಭುವಿಯ ಸ್ಪಂದನ

ಭುವಿಯ ಒಂದು ಕಂಪನ
ಜೀವ ರಾಶಿಯ ತಲ್ಲಣ

ಅಂದುಕೊ ಬಹುದೇನೋ
ಅದುವೇ ಪ್ರಳಯ ಕಂಪನ

ಸ್ವಾರ್ಥಿ ಮಾನವನ ಜಾತಿಯ
ಅಂತ್ಯದ ಧಾರುಣ
ನೀವೇ ತಾನೇ ಇದಕ್ಕೆಲ್ಲಾ ಕಾರಣ

- ಸುಕನ್ಯಾ ತ್ಯಾವಣಿಗೆ

# ರುದ್ರಭೂಮಿ ಜಾಗದ ಸಮಸ್ಯೆಗೆ ವಿದ್ಯುತ್ ಚಿತಾಗಾರವೇ ಪರ್ಯಾಯ



### ತಾಲ್ಲೂಕು ಪಂಚಾಯಿತಿ ಕೆಡಿಪಿ ಸಭೆಯ ಅಭಿಪ್ರಾಯ

ದಾವಣಗೆರೆ, ನ.19- ಇಲ್ಲಿನ ತಾಲ್ಲೂಕು ಪಂಚಾಯಿತಿ ಅಧ್ಯಕ್ಷೆ ಮಮತಾ ಮಲ್ಲೇಶಪ್ಪ ಅವರ ಅಧ್ಯಕ್ಷತೆಯಲ್ಲಿ ಇಂದು ತಾಲ್ಲೂಕು ಪಂಚಾಯಿತಿಯಲ್ಲಿ ನಡೆದ ಕೆಡಿಪಿ ಸಭೆಯಲ್ಲಿ ತಾಲ್ಲೂಕಿನಲ್ಲಿ ರುದ್ರಭೂಮಿಗೆ ಜಾಗ ಸಿಗದ ಸಮಸ್ಯೆಯ ಬಗ್ಗೆ ಚರ್ಚಿಸಲಾಯಿತಲ್ಲದೇ, ಸಮಸ್ಯೆಗೆ ಪರಿಹಾರವಾಗಿ ವಿದ್ಯುತ್ ಚಿತಾಗಾರ ಮಾಡುವುದು ಸೂಕ್ತ ಎಂಬ ಅಭಿಪ್ರಾಯವೂ ವ್ಯಕ್ತವಾಯಿತು.

ತಹಸೀಲ್ದಾರ್ ಕಚೇರಿ ಶಿರಸ್ತೇದಾರ್ ಜಗನ್ನಾಥ್ ಮಾತನಾಡಿ, ಉಪ ನೋಂದಣಾಧಿಕಾರಿ ಕಚೇರಿ ನಿಗದಿಪಡಿಸಿದ ದರಕ್ಕಿಂತ ಮೂರು ಪಟ್ಟು ಹಣ ನೀಡಲು ಅವಕಾಶವಿದ್ದರೂ ಕೆಲ ರೈತರು ಜಾಗ ನೀಡಲು ಮುಂದಾಗುತ್ತಿಲ್ಲ. ಇದರಿಂದ ತಾಲ್ಲೂಕಿನ 12 ಹಳ್ಳಿಗಳಲ್ಲಿ ರುದ್ರಭೂಮಿ ಸಮಸ್ಯೆ ಬಗೆಹರಿಯದಂತಾಗಿದೆ ಎಂದು ತಿಳಿಸಿದರು.

ಸಾಮಾಜಿಕ ನ್ಯಾಯ ಸಮಿತಿ ಅಧ್ಯಕ್ಷೆ ಮಂಜುಳಾ ಅಣಬೇರು ಶಿವಮೂರ್ತಿ ಮಾತನಾಡಿ, ರುದ್ರಭೂಮಿಗೆ ಜಾಗದ ಸಮಸ್ಯೆ ಇದ್ದರೆ ವಿದ್ಯುತ್ ಚಿತಾಗಾರ ಮಾಡಬಹುದೆಂದು ಸಲಹೆ ನೀಡಿದರು. ಆಗ ಅಧ್ಯಕ್ಷೆ ಮಮತಾ ಮಲ್ಲೇಶಪ್ಪ ಮಾತನಾಡುತ್ತಾ, ರುದ್ರಭೂಮಿಯ ಜಾಗದ ಸಮಸ್ಯೆಯಿಂದಾಗಿ ತಾಲ್ಲೂಕಿನ ಪುಟಗನಾಳ್ ಗ್ರಾಮಸ್ಥರು ರಸ್ತೆಗಳಲ್ಲಿ ಶವ ಸಂಸ್ಕಾರ ಮಾಡುತ್ತಿದ್ದು, ಇದಕ್ಕೆ ಪರ್ಯಾಯವಾಗಿ ಚಿತಾಗಾರ ಮಾಡುವುದೇ ಸೂಕ್ತ ಎಂದು ಹೇಳಿದರು.

ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿ ಬಿ.ಎಂ. ದಾರುಕೇಶ್ ಮಾತನಾಡಿ, ಮುಂದಿನ ಸಭೆಗೆ ವಿದ್ಯುತ್ ಚಿತಾಗಾರ ಘಟಕ ವೆಚ್ಚ, ಸೌಲಭ್ಯಗಳ ಕುರಿತಂತೆ ವರದಿ ನೀಡುವಂತೆ ಸೂಚಿಸಿದರು.

ಪ್ರಾದೇಶಿಕ ಅರಣ್ಯ ಇಲಾಖೆ ಉಪ ಅರಣ್ಯಾಧಿಕಾರಿ ಚಂದ್ರಶೇಖರ್ ಮಾತನಾಡುತ್ತಾ, ಗ್ಯಾಸ್ ಏಜೆನ್ಸಿಯವರ ಸಮಸ್ಯೆ ಕಾರಣದಿಂದ ತಾಲ್ಲೂಕಿನ 700 ಬಡ ಫಲಾನುಭವಿಗಳಿಗೆ ಕಳೆದ ವರ್ಷದ ಎಲ್‌ಪಿಜಿ ಸಿಲಿಂಡರ್ ವಿತರಣೆ ಆಗಿಲ್ಲ ಎಂದರು.

ಇದಕ್ಕೆ ಇಒ ದಾರುಕೇಶ್ ಮಾತನಾಡಿ, ದಾಖಲೆಗಳಿಲ್ಲದಿದ್ದರೂ ಸಿಲಿಂಡರ್ ವಿತರಣೆಗೆ ಸಭೆ ನಿಲುವಳಿ ಕೈಗೊಂಡಿದ್ದು, 3 ದಿನಗಳಲ್ಲಿ ಫಲಾನುಭವಿಗಳಿಗೆ ಸಿಲಿಂಡರ್ ವಿತರಣೆಗೆ ಕ್ರಮ ವಹಿಸುವಂತೆ ಸೂಚಿಸಿದರು.

ಅಧಿಕಾರಿ ನಾಗಭೂಷಣ್ ಮಾತನಾಡಿ, ತಾಲ್ಲೂಕಿನಲ್ಲಿ 4122 ಸರ್ವೇ ಪ್ರಕರಣಗಳಲ್ಲಿ 1386 ಇತ್ಯರ್ಥವಾಗಿವೆ. ಒಬ್ಬ ಸರ್ವೇಯರ್ ಮಾಸಿಕ 23 ಕಡತ ವಿಲೇ ಮಾಡಬೇಕಿದೆ. ಸಿಬ್ಬಂದಿ ಕೊರತೆ ನಡುವೆಯೂ ಜೂನ್- ಜುಲೈ ತಿಂಗಳ ಸರ್ವೇ ನಡೆಯುತ್ತಿದೆ ಎಂದರು.

ತಾಲ್ಲೂಕು ವೈದ್ಯಾಧಿಕಾರಿ ಡಾ. ಎಲ್.ಡಿ. ವೆಂಕಟೇಶ ಮಾತನಾಡಿ, ಪದವಿ, ಸ್ನಾತಕೋತ್ತರ ಪದವಿ ಕಾಲೇಜುಗಳು ಆರಂಭವಾಗಿದ್ದು, ಗ್ರಾಮಾಂತರ ಪ್ರದೇಶದಲ್ಲಿ ಪಿಎಚ್‌ಸಿಯಲ್ಲಿ, ನಗರ ಪ್ರದೇಶಗಳಲ್ಲಿ ಬೇಡಿಕೆ ಬಂದ ಕಾಲೇಜುಗಳಲ್ಲೇ ನಮ್ಮ ತಂಡಗಳು ಪರೀಕ್ಷೆ ನಡೆಸುತ್ತಿವೆ. ತಾಯಿ ಮರಣ ಪ್ರಮಾಣ ತಗ್ಗಿಸಲು ಆರ್.ಜಿ. ಹಳ್ಳಿ, ಆಲೂರು ಗ್ರಾಮದ ಪಿಎಚ್‌ಸಿಗಳಲ್ಲಿ ನ.21ರಿಂದ ಡಿ.4ರವರೆಗೆ ಪುರುಷರ ಸಂತಾನಹರಣ ಶಸ್ತ್ರಚಿಕಿತ್ಸಾ ಶಿಬಿರ ನಡೆಸಲಾಗುತ್ತಿದೆ. 1100 ರೂ.ಗಳ ಪ್ರೋತ್ಸಾಹ ಧನವಿದೆ ಎಂದರು.

ಹಾಸ್ಟೆಲ್ ವಿದ್ಯಾರ್ಥಿಗಳು ಕೋವಿಡ್ ನೆಗೆಟಿವ್ ವರದಿಯೊಂದಿಗೆ ಪಾಲಕರ ಒಪ್ಪಿಗೆ ಪತ್ರ ಪಡೆದು ವಿದ್ಯಾರ್ಥಿ ನಿಲಯಗಳಿಗೆ ಬರಬೇಕಿದೆ. ಪ್ರವೇಶಾತಿ ಪ್ರಮಾಣ ಕಡಿಮೆ ಇದೆ ಎಂದು ಸಂಬಂಧಪಟ್ಟ ಅಧಿಕಾರಿಗಳು ಹೇಳಿದರು.

ಸಭೆಯಲ್ಲಿ ತಾಲ್ಲೂಕು ಪಂಚಾಯಿತಿ ಉಪಾಧ್ಯಕ್ಷರಾದ ಮೀನಾ ಶ್ರೀನಿವಾಸ್ ಸೇರಿದಂತೆ ಇತರರಿದ್ದರು.

# ಮಹಾರಾಷ್ಟ್ರ ಡಿಸಿಎಂಗೆ ಎಚ್ಚರಿಕೆ ನೀಡುವ ತಾಕತ್ತು ರಾಜ್ಯದ ಸಿಎಂಗಿಲ್ಲ

### ರಾಜ್ಯ ಕರ್ನಾಟಕ ರಕ್ಷಣಾ ವೇದಿಕೆ ಅಧ್ಯಕ್ಷ ಪ್ರವೀಣ್ ಶೆಟ್ಟಿ ಆಕ್ರೋಶ

ದಾವಣಗೆರೆ, ನ.19- ಬೆಳಗಾವಿ, ಕಾರವಾರ ತಮ್ಮ ರಾಜ್ಯದ್ದು ಎಂಬುದಾಗಿ ಮಹಾರಾಷ್ಟ್ರ ಉಪ ಮುಖ್ಯಮಂತ್ರಿ ಹೇಳಿಕೆ ನೀಡಿದರೂ ಎಚ್ಚರಿಕೆ ನೀಡುವ ತಾಕತ್ತು ನಮ್ಮ ರಾಜ್ಯದ ಮುಖ್ಯಮಂತ್ರಿಗೆ ಇಲ್ಲವಾಗಿದೆ ಎಂದು ಕರ್ನಾಟಕ ರಕ್ಷಣಾ ವೇದಿಕೆ ರಾಜ್ಯಾಧ್ಯಕ್ಷ ಪ್ರವೀಣ್ ಶೆಟ್ಟಿ ಆಕ್ರೋಶ ವ್ಯಕ್ತಪಡಿಸಿದರು.

ನಗರದಲ್ಲಿಬುಧವಾರಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬೆಳಗಾವಿ, ಕಾರವಾರ ಮಹಾರಾಷ್ಟ್ರದ್ದು ಎಂಬ ಉದ್ಧಟತನದ ಹೇಳಿಕೆ ನೀಡಿದ ಮಹಾರಾಷ್ಟ್ರದ ಉಪ ಮುಖ್ಯಮಂತ್ರಿಗೆ ಎಚ್ಚರಿಕೆ ನೀಡುವ ಬದಲಿಗೆ ನಮ್ಮ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಸಮಜಾಯಿಷಿ ನೀಡುತ್ತಾರೆ. ಇನ್ನಾದರೂ ರಾಷ್ಟ್ರೀಯ ಪಕ್ಷಗಳನ್ನು ಬಹಿಷ್ಕರಿಸುವ ಕೆಲಸ ರಾಜ್ಯದಲ್ಲಿ ಆಗಬೇಕು ಎಂದು ತಿಳಿಸಿದರು.

ಮಹಾರಾಷ್ಟ್ರ ಉಪ ಮುಖ್ಯಮಂತ್ರಿಗೆ ಎಚ್ಚರಿಕೆ ಕೊಡುವುದನ್ನು ಬಿಟ್ಟು, ಕನ್ನಡ ಪರ ಹೋರಾಟಗಾರರಿಗೆ ಸಿಎಂ ಯಡಿಯೂರಪ್ಪ ಎಚ್ಚರಿಕೆ ನೀಡುವುದು ಸರಿಯಲ್ಲ. ಸರ್ಕಾರದ ಇಂತಹ ದಬ್ಬಾಳಿಕೆ, ಬೆದರಿಕೆಗೆ ನಾವ್ಯಾರೂ ಬಗ್ಗುವುದಿಲ್ಲ. ನಮ್ಮ ಹೋರಾಟ ಮತ್ತಷ್ಟು ತೀವ್ರಗೊಳ್ಳಲಿದೆ. ಯಾವುದೇ ಕಾರಣಕ್ಕೂ ಹೋರಾಟದಿಂದ ಹಿಂದೆ ಸರಿಯುವ ಪ್ರಶ್ನೆ ಇಲ್ಲ ಎಂದು ಹೇಳಿದರು.

ಜಾತಿ ಮತಗಳಿಗಾಗಿ ಪ್ರಾಧಿಕಾರ, ನಿಗಮ, ಮಂಡಳಿ ಸ್ಥಾಪಿಸಿ ನಮ್ಮ ನಮ್ಮಲ್ಲೇ ಬೆಂಕಿ ಹಚ್ಚುವ ಕೆಲಸವನ್ನು ರಾಜ್ಯ ಸರ್ಕಾರ ಮಾಡುತ್ತಿದೆ. ಅತ್ತ ಕೇಂದ್ರ ಸರ್ಕಾರವು ಮೀಸಲಾತಿ ತೆಗೆಯುವ ಚಿಂತನೆಯಲ್ಲಿದೆ. ಓಟಿಗಾಗಿ ಮುಂದಿನ ದಿನಗಳಲ್ಲಿ ಮಾರ್ವಾಡಿಗಳಿಗೆ, ತಮಿಳಿಗರಿಗೆ, ಗುಜರಾತಿಗಳಿಗೆ ಅಭಿವೃದ್ಧಿ ನಿಗಮವನ್ನು ತಂದರೂ ತರಬಹುದು. ತಕ್ಷಣವೇ ರಾಜ್ಯ ಸರ್ಕಾರವು ಮರಾಠ ಅಭಿವೃದ್ಧಿ ನಿಗಮ ಸ್ಥಾಪಿಸುವ ಆದೇಶ ಹಿಂಪಡೆಯಬೇಕು ಎಂದು ತಾಕೀತು ಮಾಡಿದರು.

> ಚುನಾವಣೆ ಹಿನ್ನೆಲೆಯಲ್ಲಿ ಸರ್ಕಾರ ಮರಾಠ ಅಭಿವೃದ್ಧಿ ನಿಗಮ ಸ್ಥಾಪಿಸಿ, 50 ಕೋಟಿ ರೂ. ಅನುದಾನ ಸಹ ನೀಡಿದೆ. ಆದರೆ, ಕನ್ನಡ ಅಭಿವೃದ್ಧಿ ಪ್ರಾಧಿಕಾರಕ್ಕೆ ಸರ್ಕಾರ ಕೊಟ್ಟಿರುವುದು ಕೇವಲ 5 ಕೋಟಿ ಮಾತ್ರ. ನವೆಂಬರ್‌ನಲ್ಲಿ ಎಂಇಎಸ್ ಕರಾಳ ದಿನ ಮಾಡುತ್ತದೆ. ಕ್ರಾಂತಿ ವೀರ ಸಂಗೊಳ್ಳಿ ರಾಯಣ್ಣನಿಗೆ ವಿರೋಧಿಸುತ್ತದೆ. ಇಂತಹವರಿಗೆ ಮರಾಠ ಅಭಿವೃದ್ಧಿ ನಿಗಮ ಸ್ಥಾಪಿಸುವ ಅಗತ್ಯತೆ ಏನಿತ್ತು. ಮರಾಠಿ ಭಾಷಿಕರ ಮತಕ್ಕಾಗಿ ರಾಜ್ಯ ಸರ್ಕಾರವು ಇಂತಹ ರಾಜಕಾರಣ ಮಾಡಲು ಹೊರಟಿದೆ.

ಕನ್ನಡ ಪರ ಸಂಘಟನೆಗಳು ಬರುವ ಡಿಸೆಂಬರ್ 5ರಂದು ಕರೆ ನೀಡಿರುವ ಕರ್ನಾಟಕ ಬಂದ್‌ಗೆ ಸಂಘಟನೆಗಳಲ್ಲಿ ಒಂದಿಷ್ಟು ಗೊಂದಲವಿದೆ. ಕೊರೊನಾ ವೈರಸ್‌ನಿಯಂತ್ರಣಕ್ಕೆತಿಂಗಳಾನುಗಟ್ಟಲೇ ಎಲ್ಲವೂ ಸ್ಥಗಿತಗೊಂಡಿದ್ದರಿಂದ ಬಂದ್ ಮಾಡಿದರೆ ಜನರಿಗೆ ಕಷ್ಟವಾಗುವ ಹಿನ್ನೆಲೆಯಲ್ಲಿ ಎಲ್ಲಾ ಸಂಘಟನೆಗಳು ಬಂದ್ ಕುರಿತಂತೆ ಚರ್ಚಿಸಿ ಸೂಕ್ತ ನಿರ್ಧಾರ ಕೈಗೊಳ್ಳುತ್ತೇವೆಂದರು.

ನಮ್ಮ ಊರು ದಾವಣಗೆರೆ.
ನಮಗೆ ಜೀವನದಿ ತುಂಗಭದ್ರೆ

## ತುಂಗಭದ್ರೆ

ಹರಿವಳು ಹರಿವಳು ತುಂಗಭದ್ರೆಯು
ಪರಮ ಪಾವನೆ ಜೀವನದಿಯು

ತುಂಗೆಯಾಗಿ ಬಂದಿಹ ಶ್ರೇಷ್ಠ
ಇವಳು
ಶೃಂಗೇರಿ ಶಾರದೆಗೆ ನಮಿಪಳಿವಳು
ಸಂಗಮವಾಗುವಳು ಕೂಡಲಿಯಲಿ
ತುಂಗಭದ್ರಾ ಎನಿಸಿ ಮುನ್ನಡೆವಳು

ಭದ್ರಾವತಿಯಿಂಬರುವ ಭದ್ರೆ ಕೂಡಿ
ಭದ್ರ ಜಲರಾಶಿಯನು ನಮಗೆ ನೀಡಿ
ಸದಾ ಪಾವನೆ ಹರಿಹರೇಶ್ವರಗೆ
ನಮಿಸಿ
ಮುದದಿ ಎಲ್ಲೆಡೆ ಫಲವತ್ತು ಮಾಡಿ

ಪಂಪ ಎಂದಿವಳ್ಹೆಸರು ಪೂರ್ವದಲ್ಲಿ
ಪಂಪಾ ಸರೋವರ ರಾಮ
ಬಂದನಲ್ಲಿ
ತಂಪಾದ ಹಣ್ಣು ಶಬರಿ ಕೊಟ್ಟಳಲ್ಲಿ
ಸಂಪೂರ್ಣ ರಾಮಕೃಪೆ ಪಡೆದಳಲ್ಲಿ

ಹಂಪಿ ವಿರೂಪಾಕ್ಷನನು ದರ್ಶಿಸಿ
ತಂಪಾದ ಆನಂದ ತಾ ಪಸರಿಸಿ
ಮಂತ್ರಾಲಯದಿ ರಾಯರ ಸೇವಿಸಿ
ಸಂತತ ಸಿಹಿ ಜಲವನು ಅರ್ಪಿಸಿ

ಚೆಂದದಿ ಮುಂದೆ ಗುಂಡಿಮಲ್ಲದಲ್ಲಿ
ತುಂಗಭದ್ರೆ ಸೇರ್ವಳು ಕೃಷ್ಣೆಯನ್ನು
ಗಂಗೆ ಸೋದರಿಯು ತಾಯಿ ಇವಳು
ಮಂಗಳ ಸಿರಿಹರಿ ಕೃಪಾಪಾತ್ರಳು

- ಶ್ರೀ ಕೃಷ್ಣಾರ್ಪಣಮಸ್ತು
ರೂಪಶ್ರೀ ಶಶಿಕಾಂತ್

## ಸೊಬಲಕ್ಕನವರ್ ಅವರಿಗೆ ಬಯಲಾಟ ಅಕಾಡೆಮಿ ಸದಸ್ಯ ರಾಜು ಶ್ರದ್ಧಾಂಜಲಿ

ದಾವಣಗೆರೆ, ನ.19- ಕರ್ನಾಟಕ ಬಯಲಾಟ ಅಕಾಡೆಮಿ ಅಧ್ಯಕ್ಷರಾದ ಡಾ. ಟಿ.ಬಿ. ಸೊಬಲಕ್ಕನವರ್ ಲಿಂಗೈಕ್ಯರಾದ ಪ್ರಯುಕ್ತ ಹವ್ಯಾಸಿ ಗ್ರಾಮೀಣ ವಿವಿಧ ಕಲಾವಿದರ ಒಕ್ಕೂಟ ಜಿಲ್ಲಾ ಘಟಕದ ಕಛೇರಿಯಲ್ಲಿ ಕರ್ನಾಟಕ ಬಯಲಾಟ ಅಕಾಡೆಮಿ ಸದಸ್ಯ ಎನ್.ಎಸ್. ರಾಜು ಅವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಎನ್.ಎಸ್. ರಾಜು ಮಾತನಾಡಿ, ಬಯಲಾಟ ಅಕಾಡೆಮಿ ಅಧ್ಯಕ್ಷರ ನಿಧನದಿಂದ ನಾಡಿನ ಬಯಲಾಟ ಕಲಾವಿದರಿಗೆ ನೋವಾಗಿದೆ. ಸೊಬಲಕ್ಕನವರ್ ಕರ್ನಾಟಕ ಬಯಲಾಟ ಅಕಾಡೆಮಿ ಅಧ್ಯಕ್ಷರಾದ ಮೇಲೆ ಅನೇಕ ಯೋಜನೆಗಳನ್ನು ಹಾಕಿಕೊಂಡು ಕಾರ್ಯ ನಿರ್ವಹಿಸುತ್ತಿದ್ದು, ಇನ್ನು ಮುಂದೆಯೂ ಕೂಡ ಕಲೆ ಮತ್ತು ಕಲಾವಿದರ ಹಿತಕ್ಕಾಗಿ ಅನೇಕ ಕಾರ್ಯಗಳನ್ನು ಮಾಡಲು ಯೋಜನೆ ರೂಪಿಸುವ ಮುತ್ಸದ್ಧಿಯಾಗಿದ್ದರು. ಇಂತಹ ವ್ಯಕ್ತಿಯ ಅಗಲಿಕೆಯಿಂದ ತುಂಬಾ ನೋವು ಉಂಟಾಗಿದೆ ಎಂದು ಕಂಬನಿ ಮಿಡಿದರು.

ಕಲಾವಿದರುಗಳಾದ ಎನ್. ರಂಗನಾಥ್, ಬಯಲಾಟ ಅಕಾಡೆಮಿ ಪುರಸ್ಕೃತರಾದ ಸಣ್ಣಬೋರಯ್ಯ, ಐರಣಿ ಬಸವರಾಜ್, ಹೆಚ್. ಮೆಹಬೂಬ್ ಅಲಿ, ಬಿ.ಇ. ತಿಪ್ಪೇಸ್ವಾಮಿ, ಬಿ. ಹನುಮಂತಚಾರಿ, ಬಲ್ಲೂರು ಮಂಜಪ್ಪ, ಹೆಚ್. ಬಿ. ಬಸವರಾಜ್, ಎಂ. ಮಾರ್ತಾಂಡಪ್ಪ, ಜಿ.ಎಂ. ರಾಜಪ್ಪ ಸಭೆಯಲ್ಲಿ ಉಪಸ್ಥಿತರಿದ್ದರು.

## ಸೊಲಬಕ್ಕನವರ್ ನಿಧನಕ್ಕೆ ಹೆಚ್ ಬಿಎಂ, ಬಾವಿ ಸಂತಾಪ

ದಾವಣಗೆರೆ,ನ.19- ಕರ್ನಾಟಕ ಬಯಲಾಟ ಅಕಾಡೆಮಿ ಅಧ್ಯಕ್ಷ ಡಾ. ಟಿ.ಬಿ. ಸೊಲಬಕ್ಕನವರ್ ಅವರ ನಿಧನಕ್ಕೆ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ವೀರಪ್ಪ ಎಂ.ಬಾವಿ, ಹಿರಿಯ ವ್ಯಂಗ್ಯ ಚಿತ್ರಕಾರ ಹೆಚ್.ಬಿ. ಮಂಜುನಾಥ್ ಅವರುಗಳು ಸಂತಾಪ ವ್ಯಕ್ತಪಡಿಸಿದ್ದಾರೆ.


ಸೊಲಬಕ್ಕನವರ ನಿಧನದಿಂದಾಗಿ ಒಬ್ಬ ಅತ್ಯುತ್ತಮ ಕಲಾಪ್ರತಿಭೆಯನ್ನು ಕಳೆದುಕೊಂಡಂತಾಗಿದೆ ಎಂದು ಅವರು ತಿಳಿಸಿದ್ದಾರೆ.

## ಹರ ವಿವಿಧೋದ್ದೇಶ ಸಂಘಕ್ಕೆ ಚುನಾವಣೆ

**ಹರಿಹರ**

ಹರಿಹರ, ನ.18- ನಗರದ ಶ್ರೀ ಹರ ವಿವಿಧೋದ್ದೇಶ ಸಹಕಾರ ಸಂಘದ ಮಂಡಳಿ ನಿರ್ದೇಶಕರ ಚುನಾವಣೆಯು ಇದೇ ದಿನಾಂಕ 30 ರ ಸೋಮವಾರ ಸಂಘದ ಕಚೇರಿ ಆವರಣದಲ್ಲಿ ನಡೆಯಲಿದೆ ಎಂದು ಚುನಾವಣಾಧಿಕಾರಿ ಎನ್.ಜಿ. ರುದ್ರಪ್ಪ ತಿಳಿಸಿದ್ದಾರೆ. ದಿನಾಂಕ 22ರಂದು ನಾಮ ಪತ್ರ ಸ್ವೀಕರಿಸಲಾಗುವುದು. ಪರಿಶೀಲನೆ ನಂತರ ಅಭ್ಯರ್ಥಿಗಳ ಪಟ್ಟಿ ಪ್ರಕಟವಾಗಲಿದೆ. ದಿನಾಂಕ 24 ರ ಮಧ್ಯಾಹ್ನ 3 ಗಂಟೆಯೊಳಗೆ ನಾಮಪತ್ರ ವಾಪಸ್ ಪಡೆಯಲು ಅವಕಾಶವಿದೆ.

## ಮೆಳ್ಳೇಕಟ್ಟೆಯಲ್ಲಿ ಮರುಳಸಿದ್ದೇಶ್ವರ ದೇವಸ್ಥಾನದ ಉದ್ಘಾಟನೆ ಇಂದು



ದಾವಣಗೆರೆ ತಾಲ್ಲೂಕಿನ ಮೆಳ್ಳೇಕಟ್ಟೆ ಗ್ರಾಮದಲ್ಲಿ ನೂತನವಾಗಿ ನಿರ್ಮಿಸಿರುವ ಶ್ರೀ ಮರುಳಸಿದ್ದೇಶ್ವರ, ಶ್ರೀ ಮಹಾಮಾಯಿ ದ್ಯಾಮಲಾಂಬ ಹಾಗೂ ಶ್ರೀ ಮಾರ್ಗದ ಬಸವೇಶ್ವರ ದೇವಸ್ಥಾನದ ಉದ್ಘಾಟನೆ, ಮೂರ್ತಿ ಪ್ರತಿಷ್ಠಾಪನೆ ಮತ್ತು ಕಳಸಾರೋಹಣ ಸಮಾರಂಭ ಇಂದು ನಡೆಯಲಿದೆ. ಈ ಪ್ರಯುಕ್ತ ಇಂದು ಬೆಳಿಗ್ಗೆ 6 ರಿಂದ ಆದಿವಾಸಾದಿ ಪೂಜೆ, ಇತ್ಯಾದಿ ಧಾರ್ಮಿಕ ಕಾರ್ಯಕ್ರಮಗಳು ನಡೆಯಲಿವೆ.

## ನಗರದಲ್ಲಿ ಇಂದು ಐಕ್ಯತಾ ಸಪ್ತಾಹ

ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ, ಜಿಲ್ಲಾ ವಕೀಲರ ಸಂಘ, ರಾಬ್ತಾಯೆ ಮಿಲ್ಲತ್ ಸಂಘಟನೆ ಇವರ ಸಂಯುಕ್ತಾಶ್ರಯದಲ್ಲಿ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಕಚೇರಿಯಲ್ಲಿ 'ರಾಷ್ಟ್ರೀಯ ಐಕ್ಯತಾ ಸಪ್ತಾಹದ ಅಂಗವಾಗಿ ಅಲ್ಪ ಸಂಖ್ಯಾತರ ಕಲ್ಯಾಣ ದಿನ' ಕಾರ್ಯಕ್ರಮವು ಇಂದು ಬೆಳಿಗ್ಗೆ 11.30 ಕ್ಕೆ ನಡೆಯಲಿದೆ.

ಕಾರ್ಯಕ್ರಮವನ್ನು ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಸಾಬಪ್ಪ ಉದ್ಘಾಟಿಸುವರು. ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಎನ್.ಟಿ.ಮಂಜುನಾಥ ಅಧ್ಯಕ್ಷತೆ ವಹಿಸುವರು.

ಮುಖ್ಯ ಅತಿಥಿಗಳಾಗಿ ರಾಬ್ತಾಯೆ ಮಿಲ್ಲತ್ ಸಂಘಟನೆಯ ಅಧ್ಯಕ್ಷ ಗೌಸ್ ಖಾನ್, ಕರ್ನಾಟಕ ರಾಜ್ಯ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಅರುಣ್ ಕುಮಾರ್ ಎಲ್.ಹೆಚ್, ವಕೀಲ ಅಬ್ದುಲ್ ಸಮದ್ ಪಾಲ್ಗೊಳ್ಳುವರು. ವಕೀಲ ಅನೀಸ್ ಪಾಷಾ ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸುವರು.

## ಸೊಲಬಕ್ಕನವರ್ ನಿಧನಕ್ಕೆ ಸುಲೋಚನಾ ಗೋಪಾಲ್ ಶೋಕ

ದಾವಣಗೆರೆ,ನ.19- ಹಿರಿಯ ಚಿತ್ರ ಕಲಾವಿದ ಡಾ. ಟಿ.ಬಿ. ಸೊಲಬಕ್ಕನವರ್ ಅವರ ನಿಧನಕ್ಕೆ ದಾವಣಗೆರೆ ಮೂಲದವರಾದ ಉಡುಪಿಯ ಚಿತ್ರ ಕಲಾವಿದರಾದ ಶ್ರೀಮತಿ ಸುಲೋಚನಾ ವೇಣುಗೋಪಾಲ್ ಸಂತಾಪ ವ್ಯಕ್ತಪಡಿಸಿದ್ದಾರೆ.

## 22ರಂದು ನಗರದಲ್ಲಿ ಜಿಲ್ಲಾ ವನಿತಾ ಸಾಹಿತ್ಯ ವೇದಿಕೆಯ ವಾರ್ಷಿಕೋತ್ಸವ

ದಾವಣಗೆರೆ,ನ.19- ನಗರದ ವನಿತಾ ಸಮಾಜದ ಅಂಗ ಸಂಸ್ಥೆ ಜಿಲ್ಲಾ ವನಿತಾ ಸಾಹಿತ್ಯ ವೇದಿಕೆಯ 26ನೇ ವರ್ಷದ ವಾರ್ಷಿಕೋತ್ಸವ ಮತ್ತು ಕರ್ನಾಟಕ ರಾಜ್ಯೋತ್ಸವ ಕಾರ್ಯಕ್ರಮವನ್ನು ಇದೇ ದಿನಾಂಕ 22ರ ಭಾನುವಾರ ಸಂಜೆ 4 ಗಂಟೆಗೆ ಆನ್ ಲೈನ್ ಮೂಲಕ ಆಚರಿಸಲಾಗುವುದು.

ಜಾನಪದ ತಜ್ಞರೂ ಆಗಿರುವ ಹಿರಿಯ ಲೇಖಕಿ ಡಾ. ಸಂಧ್ಯಾ ರೆಡ್ಡಿ, ಕರ್ನಾಟಕ ಲೇಖಕಿಯರ ಸಂಘದ ಅಧ್ಯಕ್ಷರಾದ ಶ್ರೀಮತಿ ವನಮಾಲ ಸಂಪನ್ನ ಕುಮಾರ್, 'ಜನತಾವಾಣಿ' ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ ಅವರುಗಳು ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳುವರು.

ಜಿಲ್ಲಾ ವನಿತಾ ಸಾಹಿತ್ಯ ವೇದಿಕೆಯ ಅಧ್ಯಕ್ಷರಾದ ಶ್ರೀಮತಿ ಎಸ್.ಎಂ. ಮಲ್ಲಮ್ಮ ನಾಗರಾಜ್ ಅವರ ಅಧ್ಯಕ್ಷತೆಯಲ್ಲಿ ಮಾಜಿ ಸಚಿವರೂ, ವನಿತಾ ಸಮಾಜದ ಸಂಸ್ಥಾಪಕರೂ ಆದ ಶ್ರೀಮತಿ ನಾಗಮ್ಮ ಕೇಶವಮೂರ್ತಿ ಅವರು ಕಾರ್ಯಕ್ರಮದ ಉದ್ಘಾಟನೆಯನ್ನು ನೆರವೇರಿಸಲಿದ್ದಾರೆ.

ಇದೇ ಸಂದರ್ಭದಲ್ಲಿ ಸ್ವರಚಿತ ಕವನಗಳ ಗಾಯನ ಕಾರ್ಯಕ್ರಮವೂ ಏರ್ಪಾಡಾಗಿದೆ. ಕವನಗಳು ಮತ್ತು ಗಾದೆಯ ಕುರಿತಂತೆ ಹಿರಿಯ ಸಾಹಿತಿ ಶ್ರೀಮತಿ ಅರುಂಧತಿ ರಮೇಶ್ ಅವರು ಮಾತನಾಡುವರು ಎಂದು ಜಿಲ್ಲಾ ವನಿತಾ ಸಾಹಿತ್ಯ ವೇದಿಕೆಯ ಕಾರ್ಯದರ್ಶಿ ಶ್ರೀಮತಿ ಹೆಚ್.ಕೆ. ಸತ್ಯಭಾಮ ಮಂಜುನಾಥ್ ತಿಳಿಸಿದ್ದಾರೆ.

## ನಗರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ಹೆಚ್.ಕೆ. ಆರ್. ಸರ್ಕಲ್, ಕೆ.ಇ.ಬಿ. ಕಾಲೋನಿ, ನಿಟುವಳ್ಳಿ, ನಿಟುವಳ್ಳಿ ಹೊಸಬಡಾವಣೆ, ಮೌನೇಶ್ವರ ಬಡಾವಣೆ, ಸೈಯದ್ ಪೀರ್ ಬಡಾವಣೆ, ಐ.ಟಿ.ಐ. ರಿಂಗ್ ರಸ್ತೆ ಹಾಗೂ ಸುತ್ತ ಮುತ್ತಲಿನ ಪ್ರದೇಶಗಳು, ಜಯನಗರ, ದುರ್ಗಾಂಬಿಕ ದೇವಸ್ಥಾನ ಸುತ್ತಮುತ್ತ, ಎಸ್.ಎಸ್. ಹೈಟೆಕ್ ಆಸ್ಪತ್ರೆ ರಸ್ತೆ, ಭಗೀರಥ ಸರ್ಕಲ್, ಕಾಳಿಕಾಂಬ ದೇವಸ್ಥಾನ, ಶಕ್ತಿನಗರ ಹಾಗು ಸುತ್ತ ಮುತ್ತಲಿನ ಪ್ರದೇಶಗಳು, ಇ.ಎಸ್.ಐ. ಆಸ್ಪತ್ರೆ ಹಾಗೂ ಸುತ್ತ ಮುತ್ತಲಿನ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 4 ರವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಲಿದೆ ಎಂದು ಬೆಸ್ಕಾಂ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಜಿ. ರಾಮಚಂದ್ರಪ್ಪ ತಿಳಿಸಿದ್ದಾರೆ.

## ಸಿದ್ದಿಹಳ್ಳಿಯಲ್ಲಿ ಸಹಕಾರ ಸಪ್ತಾಹ

'ಸಹಕಾರ ಸಂಸ್ಥೆಗಳ ಮೂಲಕ ಆರ್ಥಿಕ ಸೇರ್ಪಡೆ, ಡಿಜಿಟಲೈಜೇಷನ್ ಮತ್ತು ಸಾಮಾಜಿಕ ಜಾಲತಾಣ' ಧ್ಯೇಯದಡಿಯಲ್ಲಿ 67ನೇ ಅಖಿಲ ಭಾರತ ಸಹಕಾರ ಸಪ್ತಾಹ ಕಾರ್ಯಕ್ರಮವು ಜಗಳೂರು ತಾಲ್ಲೂಕು ಸಿದ್ದಿಹಳ್ಳಿಯ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಆವರಣದಲ್ಲಿ ನಡೆಯಲಿದೆ.

## ಇಂದು ನುಡಿ ಹಬ್ಬ

ದಾವಣಗೆರೆ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ಆಂತರ್ಜಾಲದ ಮೂಲಕ ನಡೆಯುತ್ತಿರುವ ಕನ್ನಡ ನುಡಿ ಹಬ್ಬದಲ್ಲಿ ಇಂದು ಸಂಜೆ 6 ರಿಂದ 7ರವರೆಗೆ 'ಸುಸ್ಥಿರ ಕೃಷಿ ಅವಕಾಶಗಳು ಮತ್ತು ಸವಾಲುಗಳು' ವಿಷಯದ ಬಗ್ಗೆ ತರಳಬಾಳು ಕೃಷಿ ವಿಜ್ಞಾನ ಕೇಂದ್ರದ ತೋಟಗಾರಿಕೆ ವಿಜ್ಞಾನಿ ಡಾ. ಎಂ.ಜಿ. ಬಸವನಗೌಡ ಅವರು ಮಾತನಾಡಲಿದ್ದಾರೆ.

ಆಸಕ್ತರು youtube channel links : Davanagere Taluk ka.sa.pa kannada Nudi_habba2020, web site : http://www.youtube.com/channel/ucjWzFm4YFnhAxce4UwjPsYg ಮುಖಾಂತರ ಕಾರ್ಯಕ್ರಮ ವೀಕ್ಷಿಸಬಹುದು.

## ಕಬಡ್ಡಿ : ಮಾಸಾಶನಕ್ಕೆ ಅರ್ಜಿ ಆಹ್ವಾನ

ದಾವಣಗೆರೆ, ನ.19- ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ವತಿಯಿಂದ ಆರ್ಥಿಕವಾಗಿ ಸಂಕಷ್ಟದಲ್ಲಿರುವ 50 ವರ್ಷ ವಯೋಮಿತಿ ಮೀರಿರುವ ಹಿರಿಯ/ಕುಸ್ತಿ ಕ್ರೀಡಾಪಟುಗಳಿಗೆ ಮಾಸಾಶನ ಮಂಜೂರು ಮಾಡಲು ಅರ್ಜಿ ಆಹ್ವಾನಿಸಲಾಗಿದೆ ಎಂದು ಜಿಲ್ಲಾ ಅಮೆಚೂರ್ ಕಬಡ್ಡಿ ಸಂಸ್ಥೆ ಪ್ರಧಾನ ಕಾರ್ಯದರ್ಶಿ ಎಂ. ನಾರಾಯಣಸ್ವಾಮಿ, ಅಧ್ಯಕ್ಷ ಎಂ. ನಾಗರಾಜ್ ತಿಳಿಸಿದ್ದಾರೆ. ವಿವರಕ್ಕೆ ಸಂಪರ್ಕಿಸಿ : 78998 17608, 6363118501.

## ಸಿಬಿಐ ತನಿಖೆಗೆ ರಾಜ್ಯಗಳ ಅನುಮತಿ ಕಡ್ಡಾಯ : ಸುಪ್ರೀಂ

ನವದೆಹಲಿ, ನ. 19 – ರಾಜ್ಯಗಳ ವ್ಯಾಪ್ತಿಯಲ್ಲಿ ಸಿಬಿಐ ತನಿಖೆ ನಡೆಸಲು ಆಯಾ ರಾಜ್ಯಗಳ ಒಪ್ಪಿಗೆ ಪಡೆಯುವುದು ಕಡ್ಡಾಯ. ಅನುಮತಿ ಇಲ್ಲದೇ ತನಿಖೆ ನಡೆಸುವಂತಿಲ್ಲ ಎಂದು ಸುಪ್ರೀಂ ಕೋರ್ಟ್ ತಿಳಿಸಿದೆ.

ನ್ಯಾಯಮೂರ್ತಿಗಳಾದ ಎ.ಎಂ. ಖಾನ್ವಿಲ್ಕರ್ ಹಾಗೂ ಬಿ.ಆರ್. ಗವಾಯಿ ಅವರನ್ನು ಒಳಗೊಂಡ ಪೀಠ ಈ ತೀರ್ಪು ನೀಡಿದೆ.

ಭ್ರಷ್ಟಾಚಾರ ಪ್ರಕರಣಕ್ಕೆ ಸಂಬಂಧಿಸಿದಂತೆ ತಮ್ಮ ವಿರುದ್ಧ ಸಿಬಿಐ ತನಿಖೆ ನಡೆಸುತ್ತಿರುವುದನ್ನು ಪ್ರಶ್ನಿಸಿ ಸರ್ಕಾರಿ ಹಾಗೂ ಖಾಸಗಿಯ ಕೆಲ ನೌಕರರು ದಾಖಲಿಸಿದ್ದ ಅರ್ಜಿಯ ವಿಚಾರಣೆ ನಡೆಸುವಾಗ ನ್ಯಾಯಾಲಯ ಈ ತೀರ್ಪು ನೀಡಿದೆ.

ಪಂಜಾಬ್, ಪಶ್ಚಿಮ ಬಂಗಾಳ, ರಾಜಸ್ಥಾನ, ಮಹಾರಾಷ್ಟ್ರ, ಜಾರ್ಖಂಡ್ ಹಾಗೂ ಛತ್ತೀಸ್‌ಘಡಗಳು ಇತ್ತೀಚೆಗೆ ಸಿ.ಬಿ.ಐ. ತನಿಖೆಗೆ ನೀಡಿದ್ದ ಸಾಮಾನ್ಯ ಅನುಮತಿಯನ್ನು ವಾಪಸ್ ಪಡೆದಿವೆ.

# ಇಂದಿನಿಂದ 'ಮಕರ ರಾಶಿಯಲ್ಲಿ ಗುರು ಸಂಚಾರ'

**(3ನೇ ಪುಟದಿಂದ)** ಮತ್ತು ಆಶೀರ್ವಾದ ವಿಶೇಷವಾಗಿ ದೊರೆಯಲಿದೆ. ವೈರಿಗಳು ಇವರ ವಿರುದ್ಧ ಸೆಣೆಸದೆ, ಸ್ನೇಹ ಹಸ್ತಕ್ಕೆ, ತಾವಾಗಿಯೇ ಮುಂದೆ ಬರುವರು. ನಿರಂತರ ಮಾನ-ಸನ್ಮಾನಗಳು ನಡೆಯುತ್ತಲೇ ಇರುತ್ತವೆ. ಸಮಾಜದಲ್ಲಿ ಉನ್ನತ ವ್ಯಕ್ತಿಗಳೊಂದಿಗೆ ನಿರಂತರ ಒಡನಾಟವಿರುತ್ತದೆ. ಅನೇಕ ಸಾಕು ಪ್ರಾಣಿಗಳಿಗೆ ಆಶ್ರಯ ನೀಡುವರು. ಸರ್ಕಾರದಿಂದ ಆಗಬೇಕಾದ ಕೆಲಸಗಳನ್ನು, ರಾಜಕಾರಣಿಗಳು ತಾವೇ ಅತಿ ಮುತುವರ್ಜಿಯಿಂದ ಮಾಡಿಕೊಡುವರು. ಸೋದರನ ನೆರವು, ಸಕಾಲದಲ್ಲಿ ದೊರೆಯಲಿದೆ. ಕುಟುಂಬದಲ್ಲಿ ನೆಮ್ಮದಿ, ಸುಖ, ಶಾಂತಿ ನೆಲೆಸಲಿದೆ. ಇಷ್ಟೆಲ್ಲಾ ಗುರುವಿನಾನುಗ್ರಹವಿದ್ದರೂ, ಮಾನಸಿಕ ಕೊರಗು ನಿಮ್ಮನ್ನು ಬಾಧಿಸದೇ ಇರದು. ಏನೋ ಅತೃಪ್ತಿ, ಅಸಮಾಧಾನ ಇದ್ದೇ ಇರುತ್ತದೆ. ಯೋಗ, ಧ್ಯಾನಗಳ ಮೊರೆ ಹೋಗುವುದು ಉತ್ತಮ.

**ವೃಶ್ಚಿಕ ರಾಶಿ :** ಈ ರಾಶಿಯವರಿಗೆ ಗುರುವು ತೃತೀಯ ಸ್ಥಾನ ಅಂದರೆ, ವಾಕ್ ಸ್ಥಾನದಲ್ಲಿರುವುದರಿಂದ ಮತ್ತೊಬ್ಬರ ಬಗ್ಗೆ ಸದಾ ಕೆಟ್ಟಮಾತನ್ನೇ ಆಡುತ್ತಾ, ಪರಿಹಾಸ್ಯ ಮಾಡುವರು. ಆದರೆ ಆ ಮಾತುಗಳು ಅವರಿಗೇ ತಿರುಗುಬಾಣವಾಗಿ, ಅಪಮಾನದಿಂದ ತಲೆತಗ್ಗಿಸುವಂತೆ ಮಾಡಬಹುದು. ಇವರ ಜಿಪುಣತನದಿಂದಾಗಿ ಮಡದಿ, ಮಕ್ಕಳು ಕಷ್ಟಪಡುವರು. ನಿತ್ಯಾನುಷ್ಠಾನದಲ್ಲಿ ವಿಪರೀತ ಲೋಪವಾಗಲಿದೆ. ಬಂಧು ಜನರೊಂದಿಗೆ ದ್ವೇಷ, ನಿಷ್ಠೂರತೆ ಕಟ್ಟಿಕೊಳ್ಳುವರು. ಪರ ಸ್ತ್ರೀಯರೊಂದಿಗೆ ಗುಪ್ತ ವ್ಯವಹಾರ ಆರ್ಥಿಕ ನಷ್ಟವನ್ನುಂಟು ಮಾಡಲಿದೆ. ಅಗ್ನಿಮಾಂದ್ಯ ಸಮಸ್ಯೆಯಿಂದಾಗಿ, ಹಳೆಯ ರೋಗಗಳು ಮತ್ತೆ ಮರುಕಳಿಸ ಬಹುದು. ವಿನಾಕಾರಣ ಮಿತ್ರರೊಂದಿಗೆ ವಿರೋಧ ಕಟ್ಟಿಕೊಳ್ಳಬೇಕಾದೀತು. ಆರ್ಥಿಕ ಮೂಲದಲ್ಲಿ ಹೆಚ್ಚಳ ಕಂಡುಕೊಳ್ಳಲು, ಉತ್ತಮ ಅವಕಾಶ ಬಂದರೂ, ಮನೋಚಾಂಚಲ್ಯದಿಂದಾಗಿ ಕಳೆದುಕೊಳ್ಳ ಬಹುದು. ಇಷ್ಟೆಲ್ಲಾ ಇದ್ದರೂ, ಪೂರ್ವಪುಣ್ಯವೆಂಬಂತೆ ಸಾಮಾಜಿಕ ಗೌರವ ಹೆಚ್ಚಿ, ಸಂಘ ಸಂಸ್ಥೆಗಳಲ್ಲಿ ಉನ್ನತ ಪದವಿ ಗಳಿಸುವರು. ಹೋದಲ್ಲೆಲ್ಲಾ ರಾಜ ಮರ್ಯಾದೆ ಸಿಗುವುದು.

**ಧನು ರಾಶಿ :** ಈ ರಾಶಿಯವರಿಗೆ ಗುರುಗ್ರಹವು ದ್ವಿತೀಯ ಸ್ಥಾನದಲ್ಲಿದ್ದು, ಅಂದರೆ, ಧನ ಸ್ಥಾನದಲ್ಲಿದ್ದು, ಈ ರಾಶಿಯವರು, ಕಾವ್ಯ ಶಾಸ್ತ್ರ ರಚನೆಗಳಲ್ಲಿ ತೊಡಗಿಕೊಳ್ಳುವರು. ನ್ಯಾಯವಾದಿಗಳಿಗೆ ಕೋರ್ಟು-ಕಛೇರಿಗಳಲ್ಲಿ ಅವರ ವಾದಕ್ಕೆ ಮನ್ನಣೆ ಸಿಗಲಿದೆ, ಅತಿಯಾದ ಸುಖಭೋಗಗಳು ಆಕರ್ಷಿಸಲಿವೆ. ಅದರಿಂದಾಗಿ, ಅನೇಕ ಅನಾರೋಗ್ಯ ಸಮಸ್ಯೆಗಳು ಬಾಧಿಸಲಿವೆ. ಹಣ ಸಂಪಾದನೆಗೆ ಅತೀವ ತಿರುಗಾಟ ಅನಿವಾರ್ಯವಾಗಲಿದೆ. ಆದರೂ ಧನಾದಾಯ ಕಡಿಮೆ. ಸಕಾಲದಲ್ಲಿ ಸ್ನೇಹಿತರ ನೆರವು, ಎಲ್ಲಾ ಸಮಸ್ಯೆಗಳನ್ನು ಬಗೆಹರಿಸುವುದು. ಕೈಗಾರಿಕೋದ್ಯಮಿಗಳು ಸರ್ಕಾರದಿಂದ ಸಿಗಬಹುದಾದ ಸೌಲಭ್ಯಗಳನ್ನು ಸದುಪಯೋಗಪಡಿಸಿಕೊಳ್ಳುವುದು ಲೇಸು. ಪರಸ್ತ್ರೀಯರ ವೈಯಕ್ತಿಕ ವಿಚಾರಗಳಲ್ಲಿ ಕುತೂಹಲ ತೋರದಿರುವುದು ಉತ್ತಮ. ಬಂಧು ದ್ವೇಷ ದೂರವಾಗಲಿದೆ. ಆಕಸ್ಮಿಕ ಧನಾಗಮ, ಕೆಲವು ಆರ್ಥಿಕ ಸಮಸ್ಯೆಗಳನ್ನು ಬಗೆ ಹರಿಸಲಿದೆ. ಗುರು-ಹಿರಿಯರ ಆಶೀರ್ವಾದ ಸದಾ ದೊರೆಯಲಿದೆ.

**ಮಕರ ರಾಶಿ :** ಈ ರಾಶಿಯವರಿಗೆ, ಗುರುಗ್ರಹವು ಜನ್ಮಸ್ಥ ಅಂದರೆ ತನುಭಾವದಲ್ಲಿದ್ದು, ಹಿರಿಯರ ಆಂತರ್ಯವನ್ನು ತಿಳಿದು ನಡೆಯುವರು. ಪರೋಪಕಾರವನ್ನು ಸಾಧ್ಯವಾದಷ್ಟು ಮಾಡಲು ಯತ್ನಿಸುವರು.ದ್ವೇಷಿಸುವವರನ್ನೂ ಕೂಡ ಪ್ರೀತಿಸುವ ಗುಣ ಇವರಲ್ಲಿ ಕಂಡು ಬರುವುದು. ಜನಪ್ರಿಯತೆ ಹೆಚ್ಚಲಿದ್ದು, ಮಾನ-ಸನ್ಮಾನಗಳು ನಡೆಯಲಿವೆ. ಸುಖ-ದುಃಖಗಳನ್ನು ಸಮವಾಗಿ ಸ್ವೀಕರಿಸುವ ಮನೋಭಾವ ಬೆಳೆಯುವುದು. ಧಾರ್ಮಿಕ ಕಾರ್ಯಗಳಿಗೆ ಮುಕ್ತ ಹಸ್ತದಿಂದ ದಾನ ಮಾಡುವರು. ಲೌಕಿಕ ವಿಷಯಗಳಲ್ಲಿ ಅನಾಸಕ್ತಿ ಮೂಡಲಿದೆ. ಅರ್ಧಕ್ಕೆ ನಿಂತಿದ್ದ ವಿದ್ಯಾಭ್ಯಾಸ ಮತ್ತೆ ಮುಂದುವರೆಯಲಿದೆ. ಆದಾಯದ ಮೂಲದಲ್ಲಿ ತುಸು ಕಡಿಮೆ ಎನಿಸಿದರೂ, ದೈನಂದಿನ ಜೀವನಕ್ಕೇನೂ ತೊಂದರೆಯಿಲ್ಲ. ತೀರ್ಥಯಾತ್ರೆ ಮಾಡುವ ಹಂಬಲ ಹೆಚ್ಚಲಿದೆ. ಜಪಾನುಷ್ಠಾನಗಳು ಸಿದ್ಧಿಸಲಿವೆ. ಮಕ್ಕಳ ವಿದ್ಯಾಭ್ಯಾಸದಲ್ಲಿ ಪ್ರಗತಿ ಕಂಡು ಸಂತುಷ್ಟರಾಗುವರು. ಒಟ್ಟಿನಲ್ಲಿ ಹೇಳಬೇಕೆಂದರೆ, ಇವರದು ನಿಶ್ಚಿಂತ ಜೀವನ.

**ಕುಂಭ ರಾಶಿ :** ವ್ಯಯ ಅಂದರೆ ಹನ್ನೆರಡನೇ ಸ್ಥಾನದಲ್ಲಿ, ಈ ರಾಶಿಯವರಿಗೆ ಗುರುಗ್ರಹದ ಸಂಚಾರವಿರುವುದರಿಂದ ಅನೇಕ ಬಾರಿ ಪ್ರಯಾಣ ಮಾಡಬೇಕಾಗಿ ಬಂದರೂ, ಹೋದ ಕೆಲಸವು ಪೂರ್ಣವಾಗದೆ ಮತ್ತೆ ಮತ್ತೆ ಹೋದಲ್ಲಿಗೇ ಹೋಗಬೇಕಾಗಬಹುದು. ಅನೇಕ ಕೆಟ್ಟ ಆಲೋಚನೆಗಳು ಮನದಲ್ಲಿ ಸುಳಿದಾಡಬಹುದು. ವಿವೇಚನೆ ಇಲ್ಲದೆ ಮತ್ತೊಬ್ಬರೊಂದಿಗೆ ವ್ಯವಹರಿಸುವರು. ನಿರ್ಲಜ್ಜೆಯಿಂದ ತಮ್ಮ ಬೇಕು, ಬೇಡಗಳನ್ನು ಮತ್ತೊಬ್ಬರಿಗೆ ಹೇಳುವರು.ಇವರ ಅವಿವೇಕತನದಿಂದ, ಮನೆ, ಮಠ ಕಳೆದುಕೊಂಡರೂ ಆಶ್ಚರ್ಯವಿಲ್ಲ. ಸಂಪಾದನೆ ಎಲ್ಲವೂ ದುರ್ವ್ಯಸನಗಳಿಗೇ ಮೀಸಲು. ನೀಚಜನರ ಸಹವಾಸ ಸಾಂಸಾರಿಕ ನೆಮ್ಮದಿಯನ್ನು ಹಾಳು ಮಾಡುವುದು. ಕೃತಜ್ಞತೆ ಇವರ ಮೂಲಮಂತ್ರವಾಗಲಿದೆ. ಆದಾಯದಲ್ಲಿ ಏನೇ ಏರುಪೇರಾದರೂ ಇವರು ನಿಶ್ಚಿಂತರು. ಶನಿ ಮತ್ತು ಗುರುಗ್ರಹಗಳ ವಿಶೇಷ ಜಪಾನುಷ್ಠಾನ ಮಾಡದೇ ವಿಧಿಯಿಲ್ಲ. ಗುರು ಚರಿತ್ರೆ ಹೆಚ್ಚು ಪಾರಾಯಣ ಮಾಡಿ.

**ಮೀನ ರಾಶಿ :** ಈ ರಾಶಿಯವರಿಗೆ, ಗುರುಗ್ರಹವು ಲಾಭ ಸ್ಥಾನದಲ್ಲಿ ಅಂದರೆ, ಹನ್ನೊಂದನೇ ಮನೆಗೆ ಬರುವವನಿದ್ದು, ರಾಶಿಯವರು, ಸ್ವಸಾಮರ್ಥ್ಯದಿಂದಲೇ, ಹಿಡಿದ ಕೆಲಸ ಸಾಧಿಸುವರು. ಕುಟುಂಬದಲ್ಲಿ ಇವರ ಮಾತಿಗೆ ವಿಶೇಷ ಮಾನ್ಯತೆ ದೊರೆಯುವುದು. ಭೂ, ವಾಹನಾದಿಗಳನ್ನು ಇಚ್ಛಾ ಮಾತ್ರದಿಂದಲೇ ಪಡೆಯುವರು. ಚಾಟಿ ಇಲ್ಲದೆ ಬುಗುರಿಯಾಡಿಸುವ ಕಲೆ ಇವರಿಗೆ ಕರಗತವಾಗಲಿದೆ. ಅವಿವಾಹಿತರಿಗೆ ಕಂಕಣಬಲ ಕೂಡಿ ಬರಲಿದೆ. ಮನೆಯಲ್ಲಿ ಹಿರಿಯರ ಬಗ್ಗೆ ವಿಶೇಷ ಕಾಳಜಿ ವಹಿಸುವರು. ಖಾಸಗಿ ಕಂಪನಿ ನೌಕರರಿಗೆ, ಮೇಲಾಧಿಕಾರಿಗಳಿಂದ ಮಾನ್ಯತೆ ಸಿಗಲಿದೆ. ಬ್ಯಾಂಕ್ ನೌಕರರಿಗೆ ಅವರು ಇಷ್ಟಪಟ್ಟ ಸ್ಥಳಗಳಿಗೆ ವರ್ಗಾವಣೆಯಾಗಲಿದೆ. ನವವಿವಾಹಿತ ದಂಪತಿಗಳಿಗೆ ಸಂತಾನ ಭಾಗ್ಯ ಒದಗಿಬರಲಿದೆ. ಆದಾಯದಲ್ಲಿ ಹೆಚ್ಚಳವಾಗಲಿದ್ದು, ಸಾಕಷ್ಟು ಉಳಿತಾಯವೂ ಆಗಲಿದೆ. ಆರೋಗ್ಯದಲ್ಲಿ ಸಾಕಷ್ಟು ಸುಧಾರಣೆ, ವ್ಯವಹಾರದಲ್ಲಿ ನೈಪುಣ್ಯ ಸಾಧಿಸುವಿರಿ. ಮನೆಯಲ್ಲಿ ಮಂಗಳಕಾರ್ಯಗಳು ನಿಮ್ಮ ನೇತೃತ್ವದಲ್ಲಿ ನಡೆಯುವವು. ಬಡ ವಿದ್ಯಾರ್ಥಿಗಳಿಗೆ ಸಾಧ್ಯವಾದಷ್ಟು ನೆರವಾಗಿ.

**(ವಿಶೇಷ ಸೂಚನೆ : ಮೇಲ್ಕಂಡ ವಿಚಾರ-ವಿಮರ್ಶೆಗಳು ಸರ್ವೇಸಾಮಾನ್ಯವಾಗಿದ್ದು, ಅವರವರ ಜಾತಕ ಕುಂಡಲಿ ಹಾಗೂ ದಶಾ-ಭುಕ್ತಿ, ಅಂತರಾಂತರ ಭುಕ್ತಿಗಳಿಗನುಸಾರವಾಗಿ ವ್ಯತ್ಯಾಸವಾಗುವ ಸಂಭವ ಇದೆ. ಆದ್ದರಿಂದ, ಹೆಚ್ಚಿನ ವಿವರಗಳಿಗೆ, ನಿಮ್ಮ ವಿಶ್ವಸನೀಯ ಜ್ಯೋತಿಷ್ಯರಲ್ಲಿ ಫಲಭಾಗಗಳನ್ನು ತಿಳಿಯಬಹುದು.)**


**ದಾವಣಗೆರೆ–ಹರಿಹರ ನಗರಾಭಿವೃದ್ಧಿ ಪ್ರಾಧಿಕಾರ**
ಶ್ರೀ ಡಿ.ದೇವರಾಜ ಅರಸು ಬಡಾವಣೆ, 'ಎ' ಬ್ಲಾಕ್, ಪಿ.ಬಿ.ರಸ್ತೆ, ದಾವಣಗೆರೆ–577006.

ನಂ:ದಾಹನಪ್ರಾ:ಯೋವಿ:ಭೂಬ:1818:2020–21/1295 ದಿನಾಂಕ: 14.10.2020

**ಪ್ರಕಟಣೆ**

**ಶ್ರೀಮತಿ ಕಮಲಮಮ್ಮ** ಕೋಂ ಶಿವಾನಂದಪ್ಪ, ವಡ್ಡಿನಹಳ್ಳಿ ಗ್ರಾಮ, ಹರಿಹರ ಇವರು ತಮ್ಮ ಹಕ್ಕು ಸ್ವಾಧೀನದಲ್ಲಿರುವ ದಾವಣಗೆರೆ ತಾಲ್ಲೂಕು ಹೆಚ್.ಕಲಪನಹಳ್ಳಿ ಗ್ರಾಮದ ರಿ.ಸ.ನಂ. 53/2ರಲ್ಲಿ ಕ್ಷೇತ್ರ:01ಎ–06ಗುಂ ಪ್ರದೇಶವನ್ನು ವ್ಯವಸಾಯ ಉದ್ದೇಶದಿಂದ ವಸತಿ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆಗೆ ಕೋರಿರುತ್ತಾರೆ. ಸರ್ಕಾರದಿಂದ ಅಂತಿಮ ಅನುಮೋದನೆಯಾಗಿರುವ ದಾವಣಗೆರೆ–ಹರಿಹರ ಸ್ಥಳೀಯ ಯೋಜನಾ ಮಹಾಯೋಜನೆ (ಪ–1)ರ ನಕ್ಷೆಯಲ್ಲಿ ಪ್ರಶ್ನಿತ ಜಮೀನನ್ನು **ವ್ಯವಸಾಯ ಉದ್ದೇಶಕ್ಕೆ** ಕಾದಿರಿಸಲಾಗಿದೆ. ಈ ಜಮೀನಿನಲ್ಲಿ ವಸತಿ ಬಡಾವಣೆ ರಚಿಸಿ ಸಾರ್ವಜನಿಕರಿಗೆ ಯೋಗ್ಯ ದರದಲ್ಲಿ ನಿವೇಶನಗಳನ್ನು ಮಾರಾಟ ಮಾಡುವುದಾಗಿ ಸಾರ್ವಜನಿಕ ಹಿತಾಸಕ್ತಿ ಬಗ್ಗೆ ತಿಳಿಸಿರುತ್ತಾರೆ. ಆದ್ದರಿಂದ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ಸೆಕ್ಷನ್ 14 (ಎ)ರ ಪ್ರಕಾರ ಸದರಿ ಭೂ ಉಪಯೋಗ ಬದಲಾವಣೆ ಬಗ್ಗೆ ಸಲಹೆ/ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆಯ ದಿನಾಂಕದಿಂದ 15 ದಿನದೊಳಗಾಗಿ ಆಕ್ಷೇಪಣೆಗಳನ್ನು ಲಿಖಿತ ಮೂಲಕ ಪ್ರಾಧಿಕಾರಕ್ಕೆ ಸಲ್ಲಿಸಬೇಕೆಂದು ತಿಳಿಸಲಾಗಿದೆ. 15 ದಿವಸಗಳ ನಂತರ ಸಲ್ಲಿಸಲಾಗುವ ಆಕ್ಷೇಪಣೆಗಳಿಗೆ ಮಾನ್ಯತೆ ನೀಡಲಾಗುವುದಿಲ್ಲ ತಿಳಿಯಿರಿ.


ಸಹಿ/– ಆಯುಕ್ತರು,
ದಾ–ಹ ನಗರಾಭಿವೃದ್ಧಿ ಪ್ರಾಧಿಕಾರ, ದಾವಣಗೆರೆ.

ವಾಸಾಸಂಇ/ದಾವಣಗೆರೆ/ಶಿರಡಿಸಾಯಿ/426/2020–21

**ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.**

ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

# 'ಡಿಜಿಟಲ್ ಇಂಡಿಯಾ' ಈಗ ಬದುಕಿನ ರೀತಿಯಾಗಿದೆ : ಮೋದಿ



ಬೆಂಗಳೂರು, ನ.19- ಭಾರತದಲ್ಲಿ ಅಭಿವೃದ್ಧಿಪಡಿಸಲಾದ ತಂತ್ರಜ್ಞಾನ ಪರಿಹಾರಗಳನ್ನು ಜಗತ್ತಿನ ಬೇರೆ ದೇಶಗಳಿಗೆ ತಲುಪಿಸಲು ಇದು ಸೂಕ್ತ ಸಮಯವಾಗಿದೆ ಎಂದು ಪ್ರಧಾನಮಂತ್ರಿ ನರೇಂದ್ರ ಮೋದಿ ಹೇಳಿದರು.

ಇದೇ ಮೊತ್ತಮೊದಲ ಬಾರಿಗೆ ವರ್ಚ್ಯುಯಲ್ ಆಗಿ ನಡೆಯಲಿರುವ ಮೂರು ದಿನಗಳ 'ಬೆಂಗಳೂರು ತಂತ್ರಜ್ಞಾನ ಮೇಳ' (ಬಿಟಿಎಸ್-2020)ವನ್ನು ಗುರುವಾರ ವಿಡಿಯೋ ಕಾನ್ಫರೆನ್ಸ್ ಮೂಲಕ ಉದ್ಘಾಟಿಸಿ ಅವರು ಮಾತನಾಡಿದರು.

'ಡಿಜಿಟಲ್ ಇಂಡಿಯಾ' ಎಂಬುದು ಈಗ ಕೇವಲ ಸರ್ಕಾರದ ಅಭಿಯಾನವಾಗಿ ಉಳಿದಿಲ್ಲ. ಇದು ಬದುಕಿನ ರೀತಿಯೇ ಆಗಿ ಹೋಗಿದೆ. ಡಿಜಿಟಲ್ ತಂತ್ರಜ್ಞಾನವು ಜನರಿಗೆ ಪಾರದರ್ಶಕ ರೀತಿಯಲ್ಲಿ ತ್ವರಿತವಾಗಿ ಸೇವೆಗಳನ್ನು ತಲುಪಿಸಲು ಅನುವು ಮಾಡಿಕೊಡುತ್ತಿದೆ. ವಿಶೇಷವಾಗಿ ಆರ್ಥಿಕವಾಗಿ ದುರ್ಬಲರಾದವರಿಗೆ, ನಿರ್ಲಕ್ಷಿತ ಸಮುದಾಯಗಳಿಗೆ ಹಾಗೂ ಸರ್ಕಾರಗಳಿಗೆ ಹೆಚ್ಚಿನ ಅನುಕೂಲವಾಗಿದೆ. ಇದಕ್ಕಾಗಿ ನಾವು 'ಡಿಜಿಟಲ್ ಇಂಡಿಯಾ'ಗೆ ಧನ್ಯವಾದ ಸಲ್ಲಿಸಬೇಕು ಎಂದು ಅಭಿಪ್ರಾಯಪಟ್ಟರು.

ಕೋವಿಡ್ ಸೋಂಕಿನ ಸನ್ನಿವೇಶದಲ್ಲಿ ರೂಢಿಗೆ ಬಂದ 'ಎಲ್ಲಿಂದಾದರೂ ಕೆಲಸ ಮಾಡಿ' ಎಂಬ ಪರಿಕಲ್ಪನೆಯು ಇನ್ನು ಮುಂದೆಯೂ ಉಳಿದುಕೊಳ್ಳಲಿದೆ. ಶಿಕ್ಷಣ, ಆರೋಗ್ಯ ಸೇವೆ, ಶಾಪಿಂಗ್ ಸೇರಿದಂತೆ ಹಲವು ವಲಯಗಳಲ್ಲಿ ತಂತ್ರಜ್ಞಾನದ ಅನ್ವಯಿಕತೆ ಹೆಚ್ಚಾಗಲಿದೆ. ಯಾವ ಬದಲಾವಣೆಯು ಈ ಮುಂಚೆ ಕನಿಷ್ಠ 10 ವರ್ಷಗಳನ್ನು ಹಿಡಿಯುತ್ತಿತ್ತೋ ಅದು ಕೋವಿಡ್ ಸನ್ನಿವೇಶದಲ್ಲಿ ತಾಂತ್ರಿಕ ಬಳಕೆಯಿಂದ ಕೆಲವೇ ತಿಂಗಳುಗಳಲ್ಲಿ ಆಗಿದೆ ಎಂದರು.

ಕೇಂದ್ರ ಸರ್ಕಾರವು ಪ್ರಪಂಚದ ಅತ್ಯಂತ ದೊಡ್ಡ ಆರೋಗ್ಯ ಸೇವಾ ಯೋಜನೆಯಾದ 'ಆಯುಷ್ಮಾನ್ ಭಾರತ' ವನ್ನು ಯಶಸ್ವಿಯಾಗಿ ನಿರ್ವಹಿಸುತ್ತಿದೆ. ತಂತ್ರಜ್ಞಾನದ ಬಳಕೆಯಿಲ್ಲದೆ ಇದು ಸಾಧ್ಯವಾಗುತ್ತಿರಲಿಲ್ಲ. ಕೋವಿಡ್ ಸಂಕಷ್ಟದ ವೇಳೆ ಕೋಟ್ಯಂತರ ಜನರಿಗೆ ಕೇವಲ ಒಂದು ಕ್ಲಿಕ್ ಮೂಲಕ ಆರ್ಥಿಕ ನೆರವು ಒದಗಿಸಲು ಸಾಧ್ಯವಾಯಿತು. ತಂತ್ರಜ್ಞಾನವು ಜನರನ್ನು ಒಗ್ಗೂಡಿಸುವಲ್ಲಿ ನೆರವಾಗಿದೆ ಎಂದು ಹೇಳಿದರು.

ಭಾರತಕ್ಕೆ ಇಂಟರ್ ನೆಟ್ 25 ವರ್ಷಗಳ ಹಿಂದೆ ಪಾದಾರ್ಪಣೆ ಮಾಡಿತು. ಈಗ ದೇಶದಲ್ಲಿ 75 ಕೋಟಿ ಇಂಟರ್ ನೆಟ್ ಸಂಪರ್ಕಗಳಿವೆ. ಇದರಲ್ಲಿ ಶೇ 50ಕ್ಕೂ ಹೆಚ್ಚು ಸಂಪರ್ಕಗಳು ಕಳೆದ ನಾಲ್ಕು ವರ್ಷಗಳಲ್ಲಿ ಆಗಿವೆ. ದೇಶದ ಪ್ರತಿಯೊಂದು ಮನೆಗೂ ವಿದ್ಯುತ್ ಎಂಬುದು ಬಹುತೇಕ ಸಾಕಾರಗೊಳ್ಳಲು ಕೂಡ ತಂತ್ರಜ್ಞಾನವೇ ಕಾರಣವಾಗಿದೆ. ಇದೀಗ ತಂತ್ರಜ್ಞಾನದ ಮಜಲನ್ನು ಇನ್ನಷ್ಟು ಉನ್ನತಿಗೇರಿಸುವ ಬಗ್ಗೆ ನಾವು ಆಲೋಚಿಸಬೇಕಿದೆ ಎಂದರು.

ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಮಾತನಾಡಿ, ರಾಜ್ಯವು ಉದ್ಯಮಿ ಸ್ನೇಹಿ ವಾತಾವರಣ ನಿರ್ಮಿಸಲು ಹಲವು ಕ್ರಮಗಳನ್ನು ಕೈಗೊಂಡಿದೆ. ಉದ್ದಿಮೆಗಳ ಬೆಳವಣಿಗೆಗೆ ಪೂರಕವಾದ ಕಾರ್ಯನೀತಿ ರೂಪಿಸುವ ಜೊತೆಗೆ ಭೂ ಕಾನೂನು ಮತ್ತು ಕಾರ್ಮಿಕ ಕಾನೂನುಗಳಲ್ಲಿ ಕೂಡ ಬದಲಾವಣೆಗಳನ್ನು ತಂದಿದೆ ಎಂದರು.

# ಎಲ್ಲಾ ವೃತ್ತಿ ಕ್ಷೇತ್ರಗಳಲ್ಲೂ ಕನ್ನಡ ಬಳಕೆಯಾದರೆ ಮಾತ್ರ ಶ್ರೀಮಂತ ಭಾಷೆಯಾಗಲು ಸಾಧ್ಯ

## ತಾಂತ್ರಿಕ ಉಪನ್ಯಾಸ ಕಾರ್ಯಕ್ರಮದಲ್ಲಿ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಡಾ. ಎಂ.ಜಿ. ಈಶ್ವರಪ್ಪ



ದಾವಣಗೆರೆ, ನ. 19- ಎಲ್ಲಾ ವೃತ್ತಿ ಕ್ಷೇತ್ರಗಳಲ್ಲೂ ಕನ್ನಡ ಬಳಕೆಯಾದರೆ ಮಾತ್ರ ಅದು ಶ್ರೀಮಂತ ಭಾಷೆಯಾಗಲು ಸಾಧ್ಯ ಎಂದು ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರೂ, ಬಾಪೂಜಿ ವಿದ್ಯಾಸಂಸ್ಥೆ ಶೈಕ್ಷಣಿಕ ನಿರ್ದೇಶಕರೂ ಆದ ಡಾ.ಎಂ.ಜಿ. ಈಶ್ವರಪ್ಪ ಪ್ರತಿಪಾದಿಸಿದರು.

ನಗರದ ಬಾಪೂಜಿ ಇಂಜಿನಿಯರಿಂಗ್ ಮತ್ತು ತಾಂತ್ರಿಕ ಮಹಾವಿದ್ಯಾಲಯದ ಬಸವೇಶ್ವರ ಸಭಾಂಗಣದಲ್ಲಿ ಗುರುವಾರ ತಾಂತ್ರಿಕ ಉಪನ್ಯಾಸ ಮಾಲೆ ಕಾರ್ಯಕ್ರಮ ಉದ್ಘಾಟಿಸಿ, ಸನ್ಮಾನ ಸ್ವೀಕರಿಸಿ ಅವರು ಮಾತನಾಡಿದರು.

ಆಯಾ ಕ್ಷೇತ್ರಕ್ಕೆ ತಕ್ಕಂತೆ ಕನ್ನಡ ಭಾಷೆಯನ್ನು ಬಳಸಿದರೆ ಅದು ಶ್ರೀಮಂತವಾಗುವುದರ ಜೊತೆಗೆ ನಮಗೆ ಗೊತ್ತಿರುವ ಜ್ಞಾನವು ಪ್ರತಿಯೊಬ್ಬರಿಗೂ ತಲುಪುತ್ತದೆ. ಹೀಗೆ ಜ್ಞಾನ ತಲುಪಿಸುವ ಕೆಲಸ ಮಾಡುವುದೇ ನಮ್ಮ ನಾಡು ನುಡಿಗೆ ಸಲ್ಲಿಸುವ ಸೇವೆಯ ಒಂದು ಅಂಶ ಎಂದವರು ಹೇಳಿದರು.

ಇಂಗ್ಲೀಷ್ ಹದಿನಾರನೇ ಶತಮಾನದ ಭಾಷೆಯಾದರೂ, ಅಲ್ಲಿನ ಜನರು ಸಾಹಸಿಗಳು. ಯಾವ ಪ್ರದೇಶಕ್ಕೆ ಬೇಕಾದರೂ ಹೋಗಿ ಭಾಷೆ ಬೆಳೆಸುತ್ತಿದ್ದರು. ಆದ್ದರಿಂದಲೇ ಅದು ಅಂತರರಾಷ್ಟ್ರೀಯ ಭಾಷೆಯಾಗಲು ಸಾಧ್ಯವಾಯಿತು. ಆದರೆ ಕನ್ನಡಿಗರು ಸಾಹಸಿಗಳಾಗದ ಕಾರಣ ಬೇರೆ ಬೇರೆ ಕ್ಷೇತ್ರಗಳಲ್ಲಿ ಭಾಷೆಯನ್ನು ಸಮೃದ್ಧವಾಗಿ ಬೆಳೆಸಲು ಸಾಧ್ಯವಾಗಿಲ್ಲ ಎಂದು ಅಭಿಪ್ರಾಯಿಸಿದರು.

ಎಂ.ಎ. ಮುಗಿಯುತ್ತಿದ್ದಂತೆ ದಾವಣಗೆರೆ ಡಿ.ಆರ್.ಎಂ. ಕಾಲೇಜನ್ನು ಆಯ್ಕೆ ಮಾಡಿಕೊಂಡೆ. ಅಲ್ಲಿಂದ ಇಲ್ಲಿಯವರೆಗೆ ಪ್ರತಿ ದಿನದ ಕೆಲಸ ಕಾರ್ಯಗಳನ್ನು ಸಂತೋಷದಿಂದ ಸಂಭ್ರಮಿಸಿದ್ದೇನೆ. ವೃತ್ತಿಯನ್ನು ಇಷ್ಟಪಟ್ಟಷ್ಟೂ ಪೂರಕವಾದ ಕೆಲಸಗಳನ್ನೇ ಮಾಡುತ್ತಿದ್ದೇನೆ ಎಂದು ಈಶ್ವರಪ್ಪ ಹೇಳಿದರು.

ಬಿಐಇಟಿ ನಿರ್ದೇಶಕ ಪ್ರೊ.ವೈ. ವೃಷಭೇಂದ್ರಪ್ಪ ಅಧ್ಯಕ್ಷತೆ ವಹಿಸಿ ಮಾತನಾಡುತ್ತಾ, ಮಗು ಹುಟ್ಟಿದಾಗ ಮನೆಯಲ್ಲೆಲ್ಲಾ ಸಂಭ್ರಮವಿರುತ್ತದೆ. ಹಾಗೆಯೇ ಬಾಪೂಜಿ ವಿದ್ಯಾ ಸಂಸ್ಥೆಯಲ್ಲಿರುವ ವ್ಯಕ್ತಿಗೆ ರಾಜ್ಯೋತ್ಸವ ಪ್ರಶಸ್ತಿ ಸಿಕ್ಕಾಗ ನಮಗೆಲ್ಲರಿಗೂ ಸಂಭ್ರಮ ಎಂದರು.

ಆರಂಭದಲ್ಲಿ ಲಿಂ. ಶಿವಣ್ಣ ಅವರು ಮೊದಲ ಬಾರಿ ರಾಜ್ಯೋತ್ಸವ ಪ್ರಶಸ್ತಿ ಪಡೆದರು. ನಂತರ ಕಾಸಲ್ ವಿಠ್ಠಲ್, ಡಾ. ನಿರ್ಮಲಾ ಕೇಸರಿ ಪ್ರಶಸ್ತಿ ಪಡೆದಿದ್ದರು. ಇದೀಗ ಈಶ್ವರಪ್ಪ ಅವರು ಪ್ರಶಸ್ತಿ ಪಡೆಯುವ ಮೂಲಕ ಬಾಪೂಜಿ ವಿದ್ಯಾಸಂಸ್ಥೆಯ ನಾಲ್ಕನೇ ವ್ಯಕ್ತಿಯಾಗಿದ್ದಾರೆ ಎಂದರು.

ಜನಸಂಖ್ಯೆ ಹೆಚ್ಚಿದಂತೆ ಪ್ರಶಸ್ತಿಗೆ ಅರ್ಹರಾಗುವವರ ಸಂಖ್ಯೆಯೂ ಹೆಚ್ಚಿರುತ್ತದೆ. ಪ್ರಶಸ್ತಿ ಸಿಗಲಿಲ್ಲವೆಂಬ ನೋವಿಗೆ ಅರ್ಥವಿಲ್ಲ. ಪ್ರತಿಷ್ಠಿತ ನೊಬೆಲ್ ಪ್ರಶಸ್ತಿಗೆ ಮಹಾತ್ಮ ಗಾಂಧಿ ಅವರ ಹೆಸರು 11 ಬಾರಿ ಪ್ರಸ್ತಾಪವಾಗಿತ್ತು. ಪ್ರಶಸ್ತಿ ಸಿಗದಿದ್ದರೂ ಗಾಂಧೀಜಿಯವರ ಗೌರವ ಕಡಿಮೆಯಾಗಿರಲಿಲ್ಲ ಎಂದು ಉದಾಹರಿಸಿದರು.

ಬಿಐಇಟಿ ಕಾಲೇಜು ಪ್ರಾಂಶುಪಾಲ ಡಾ. ಹೆಚ್.ಬಿ. ಅರವಿಂದ್ ಉಪಸ್ಥಿತರಿದ್ದರು. ಸಾರ್ವಜನಿಕ ಸಂಪರ್ಕ ಡೀನ್ ಡಾ.ಜಿ.ಪಿ. ದೇಸಾಯಿ ಅತಿಥಿಗಳನ್ನು ಪರಿಚಯಿಸಿದರು. ಸಿವಿಲ್ ವಿಭಾಗದ ಮುಖ್ಯಸ್ಥ ಸಿ.ಪಿ. ಅನಿಲ್ ಕುಮಾರ್ ನಿರೂಪಿಸಿದರು. ವಿದ್ಯುತ್ ವಿಭಾಗದ ಡಾ.ಎಂ.ಎಸ್. ನಾಗರಾಜ್ ಅತಿಥಿಗಳನ್ನು ಸ್ವಾಗತಿಸಿದರು. ಪೂರ್ಣಿಮಾ ವಂದಿಸಿದರು.

### 'ಬಾಲು ಕ್ಯಾಂಟಿನ್' ನಂಟು

ವ್ಯಾಸಂಗ ಪೂರ್ಣಗೊಂಡ ನಂತರ ಎಂ.ಜಿ. ಈಶ್ವರಪ್ಪನವರು ಡಿ.ಆರ್.ಎಂ. ಕಾಲೇಜು ಆಯ್ಕೆ ಮಾಡಿಕೊಂಡರೆ, ನಾನು ಬಿ.ಡಿ.ಟಿ. ಕಾಲೇಜು ಸೇರಿಕೊಂಡೆ. ಚಹಾ ಕುಡಿಯಲು ಸಮೀಪದಲ್ಲಿದ್ದ 'ಬಾಲು ಕ್ಯಾಂಟಿನ್'ಗೆ ಹೋಗುತ್ತಿದ್ದಾಗ ನಮ್ಮಿಬ್ಬರ ಸ್ನೇಹ ಹೆಚ್ಚಾಯಿತು ಎಂದು ವೃಷಭೇಂದ್ರಪ್ಪ ನೆನಪಿಸಿಕೊಂಡರು.

# ಡಿ.5ರ ಕರ್ನಾಟಕ ಬಂದ್‌ಗೆ ಅಖಿಲ ಭಾರತ ಹಿಂದೂ ಮಹಾಸಭಾ ಬೆಂಬಲ

ದಾವಣಗೆರೆ, ನ.19- ಮತ ಬ್ಯಾಂಕ್ ರಾಜಕಾರಣಕ್ಕಾಗಿ ಮರಾಠ ಪ್ರಾಧಿಕಾರ, ವೀರಶೈವ-ಲಿಂಗಾಯತ ಅಭಿವೃದ್ಧಿ ನಿಗಮ ರಚನೆ ಮಾಡಿರುವ ಬಿಜೆಪಿ ನೇತೃತ್ವದ ರಾಜ್ಯ ಸರ್ಕಾರದ ವಿರುದ್ಧ ಡಿಸೆಂಬರ್ 5ರಂದು ಕನ್ನಡಪರ ಸಂಘಟನೆಗಳು ನೀಡಿರುವ ಕರ್ನಾಟಕ ಬಂದ್‌ಗೆ ಅಖಿಲ ಭಾರತ ಹಿಂದೂ ಮಹಾಸಭಾ ಬೆಂಬಲ ಸೂಚಿಸಿದೆ.

ಅಧಿಕಾರಕ್ಕೂ ಮುಂಚೆ ಭ್ರಷ್ಟಾಚಾರ ಮುಕ್ತ ಭಾರತ, ಹಿಂದೂ ರಾಷ್ಟ್ರದ ಸಂಕಲ್ಪ ಸೇರಿದಂತೆ ಇತರೆ ವಿಚಾರಗಳನ್ನು ಪ್ರತಿಪಾದಿಸುತ್ತಿದ್ದ ಬಿಜೆಪಿ ಅಧಿಕಾರಕ್ಕೆ ಬಂದಾದ ಮೇಲೆ ವಿವಿಧ ಜಾತಿಗಳ ಪ್ರಾಧಿಕಾರ, ನಿಗಮಗಳನ್ನು ರಚನೆ ಮಾಡುವ ಮೂಲಕ ಅಖಂಡ ಹಿಂದೂ ಸಮುದಾಯವನ್ನು ಒಡೆದು ಆಳುತ್ತಿರುವುದು ಅತ್ಯಂತ ಖಂಡನೀಯವಾಗಿದೆ ಎಂದು ಸುದ್ದಿಗೋಷ್ಠಿಯಲ್ಲಿ ಮಹಾಸಭಾದ ರಾಜ್ಯ ಕಾರ್ಯಾಧ್ಯಕ್ಷ ರಾಜೇಶ್ ಪವಿತ್ರನ್ ಅಸಮಾಧಾನ ವ್ಯಕ್ತಪಡಿಸಿದರು.

ಭಾರತೀಯ ಜನತಾ ಪಾರ್ಟಿಯು ಕಾಂಗ್ರೆಸ್ ಮಾಡಿದ ತಪ್ಪುಗಳನ್ನೇ ಮಾಡುವ ಮೂಲಕ ಆ ಪಕ್ಷದ ಹಾದಿಯನ್ನೇ ತುಳಿಯುತ್ತಿದ್ದು, ದೇಶದಲ್ಲಿ ಕಾಂಗ್ರೆಸ್‌ನಂತೆ ಬಿಜೆಪಿಯನ್ನು ಜನತೆ ತಿರಸ್ಕರಿಸುವ ಕಾಲ ದೂರವಿಲ್ಲ. ನಮ್ಮ ಅಖಿಲ ಭಾರತ ಹಿಂದೂ ಮಹಾಸಭಾವು ರಾಜಕಾರಣದಲ್ಲಿ ಹೊಸ ಹೆಜ್ಜೆ ಇಡಲಿದ್ದು, ರಾಜಕೀಯ ಧೃವೀಕರಣ ಆರಂಭವಾಗಲಿದೆ ಎಂದರು.

ಮಹಾಸಭಾದ ಮುಖಂಡ ಧರ್ಮೇಂದ್ರ ಮಾತನಾಡಿ, ದೇಶದ ವಿಭಜನೆಯನ್ನು ತಡೆದ ನಾಥುರಾಮ್ ಗೋಡ್ಸೆ ಪುತ್ಥಳಿಯನ್ನು ಎಲ್ಲಾ ಜಿಲ್ಲೆಗಳಲ್ಲಿಯೂ ಸ್ಥಾಪಿಸಬೇಕು. ಗಾಂಧಿ ಹತ್ಯೆಯ ಹಿಂದಿರುವ ಸತ್ಯವನ್ನು ತಿಳಿಯಬೇಕಾದರೆ ಪಠ್ಯ ಪುಸ್ತಕಗಳಲ್ಲಿ ಗೋಡ್ಸೆ ಕುರಿತ ಪಾಠಗಳನ್ನು ಪರಿಚಯಿಸಬೇಕು. ಗಾಂಧೀಜಿಗೆ ಯಾವುದೇ ಸರ್ಕಾರವೂ ರಾಷ್ಟ್ರಪಿತ ಬಿರುದು ನೀಡಿಲ್ಲ. ಆದ್ದರಿಂದ ಗಾಂಧಿಗೆ ನೀಡುತ್ತಿರುವ ರಾಷ್ಟ್ರಪಿತ ಗೌರವವನ್ನು ತೆಗೆದು ಹಾಕಿ 1857ರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದಿಂದ ಹಿಡಿದು ಭಾರತ ಸ್ವತಂತ್ರಗೊಂಡವರೆಗೂ ದೇಶಕ್ಕಾಗಿ ಪ್ರಾಣಾರ್ಪಣೆ, ತ್ಯಾಗ, ಬಲಿದಾನ ಮಾಡಿದ ಎಲ್ಲಾ ಹೋರಾಟಗಾರರಿಗೂ ರಾಷ್ಟ್ರಪಿತ ಗೌರವ ನೀಡಬೇಕೆಂದು ಆಗ್ರಹಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಮಹಾಸಭಾ ಜಿಲ್ಲಾಧ್ಯಕ್ಷ ಜಿ. ಅರುಣ್, ಮುಖಂಡರಾದ ಬಾಲರಾಜ್, ನವೀನ್‌ಕುಮಾರ್, ಎಸ್.ಅರುಣಕುಮಾರ್, ಶ್ರೀನಿವಾಸ್ ಮತ್ತಿತರರು ಹಾಜರಿದ್ದರು.

# ನಾಳೆಯಿಂದ ರಾಜನಹಳ್ಳಿ ಶ್ರೀಗಳ ಪ್ರವಾಸ

3ನೇ ವರ್ಷದ ವಾಲ್ಮೀಕಿ ಜಾತ್ರೆ



ಮಲೇಬೆನ್ನೂರು, ನ.19- ರಾಜನಹಳ್ಳಿಯ ವಾಲ್ಮೀಕಿ ಗುರುಪೀಠದಲ್ಲಿ ಬರುವ ಫೆಬ್ರವರಿ 8 ಮತ್ತು 9 ರಂದು ನಡೆಯಲಿರುವ 3ನೇ ವರ್ಷದ ವಾಲ್ಮೀಕಿ ಜಾತ್ರೆ ಅಂಗವಾಗಿ ಶ್ರೀ ವಾಲ್ಮೀಕಿ ಪ್ರಸನ್ನಾನಂದ ಸ್ವಾಮೀಜಿ ನಾಡಿದ್ದು ದಿನಾಂಕ 21 ರಿಂದ ಬರುವ ಜನವರಿ 23 ರವರೆಗೆ 4 ಹಂತಗಳಲ್ಲಿ ರಾಜ್ಯದ ಎಲ್ಲಾ ತಾಲ್ಲೂಕುಗಳಲ್ಲಿ ಪೂರ್ವಭಾವಿ ಸಭೆಗಳನ್ನು ಏರ್ಪಡಿಸಿದ್ದಾರೆ.

ಮೊದಲ ಹಂತದ ಪ್ರವಾಸವನ್ನು ಶ್ರೀಗಳು ನಾಳೆ ದಿನಾಂಕ 21 ರಿಂದ ಡಿಸೆಂಬರ್ 8 ರವರೆಗೆ ಹರಿಹರ ಸೇರಿದಂತೆ ಬಳ್ಳಾರಿ, ರಾಯಚೂರು, ಯಾದಗಿರಿ, ಕಲುಬುರಗಿ, ಬೀದರ್, ವಿಜಾಪುರ, ಬಾಗಲಕೋಟೆ, ಗದಗ, ಕೊಪ್ಪಳ ಜಿಲ್ಲೆಗಳಲ್ಲಿ ನಡೆಸಲಿದ್ದಾರೆ.

2ನೇ ಹಂತದ ಪ್ರವಾಸದಲ್ಲಿ ಬರುವ ಡಿಸೆಂಬರ್ 13 ರಿಂದ 25 ರವರೆಗೆ ಶಿವಮೊಗ್ಗ, ಚಿಕ್ಕಮಗಳೂರು, ಹಾಸನ, ಮಡಿಕೇರಿ, ಮೈಸೂರು, ಚಾಮರಾಜನಗರ, ಮಂಡ್ಯ, ರಾಮನಗರ, ತುಮಕೂರು, ಚಿತ್ರದುರ್ಗ ಜಿಲ್ಲೆಗಳಲ್ಲಿ ಮತ್ತು ದಾವಣಗೆರೆ ತಾಲ್ಲೂಕಿನ ಆನಗೋಡು, ದಾವಣಗೆರೆ ನಗರದಲ್ಲಿ ಪೂರ್ವಭಾವಿ ಸಭೆಗಳನ್ನು ನಡೆಸುವರು.

3ನೇ ಹಂತದಲ್ಲಿ ಬರುವ ಜನವರಿ 2 ರಿಂದ 12 ರವರೆಗೆ ಹಾವೇರಿ, ಗದಗ, ಬೆಳಗಾವಿ, ಧಾರವಾಡ, ಉತ್ತರ ಕನ್ನಡ ಜಿಲ್ಲೆಗಳಲ್ಲಿ ಮತ್ತು 4ನೇ ಹಂತದಲ್ಲಿ ಜನವರಿ 16 ರಿಂದ 23 ರವರೆಗೆ ದಾವಣಗೆರೆ ಜಿಲ್ಲೆಯ ಜಗಳೂರು, ಚಿತ್ರದುರ್ಗ ಜಿಲ್ಲೆಯ ನಾಯಕನಹಟ್ಟಿ, ಮೊಳಕಾಲ್ಮೂರು, ಚಳ್ಳಕೆರೆ, ತುಮಕೂರು ಜಿಲ್ಲೆಯ ಪಾವಗಡ, ಮಧುಗಿರಿ, ಬೆಂಗಳೂರು ಗ್ರಾಮಾಂತರ, ಚಿಕ್ಕಬಳ್ಳಾಪುರ, ಕೋಲಾರ ಜಿಲ್ಲೆಗಳು ಸೇರಿದಂತೆ ಬೆಂಗಳೂರು ನಗರದಲ್ಲಿ ಶ್ರೀ ವಾಲ್ಮೀಕಿ ಪ್ರಸನ್ನಾನಂದ ಸ್ವಾಮೀಜಿ ಅವರು ಸಭೆ ಕರೆದಿದ್ದಾರೆ.

**ಶನಿವಾರದ ಸಭೆಗಳು :** ಇದೇ ದಿನಾಂಕ 21 ರ ಶನಿವಾರ ಬೆಳಿಗ್ಗೆ 10 ಕ್ಕೆ ಹರಿಹರ ತಾಲ್ಲೂಕು ಮಟ್ಟದ ಪೂರ್ವಭಾವಿ ಸಭೆಯನ್ನು ಹರಿಹರ ನಗರದ ಸಾರ್ವಜನಿಕ ನಾಯಕ ವಿದ್ಯಾರ್ಥಿ ನಿಲಯದಲ್ಲಿ ಕರೆಯಲಾಗಿದೆ ಎಂದು ತಾಲ್ಲೂಕು ಸಮಾಜದ ಅಧ್ಯಕ್ಷ ಕೆ.ಆರ್.ರಂಗಪ್ಪ ತಿಳಿಸಿದ್ದಾರೆ. ಅದೇ ದಿನ ಮಧ್ಯಾಹ್ನ 1 ಗಂಟೆಗೆ ಹರಪನಹಳ್ಳಿಯಲ್ಲಿ, ಸಂಜೆ 4 ಗಂಟೆಗೆ ಕೊಟ್ಟೂರಿನಲ್ಲಿ ಸಭೆಗಳು ಜರುಗಲಿವೆ.

# ಕೊರೊನಾ ನಿವಾರಣೆಗೆ 'ಬ್ರಹ್ಮಯಜ್ಞ'



ದಾವಣಗೆರೆ, ನ. 19- ವಿಕಾಸ ತರಂಗಿಣಿ, ಅಂಡಾಳ್ ಗೋಷ್ಠಿ, ಸ್ಫೂರ್ತಿ ಸೇವಾ ಟ್ರಸ್ಟ್ ವತಿಯಿಂದ ಲೋಕ ಕಲ್ಯಾಣಾರ್ಥ, ಕೊರೊನಾ ಸೋಂಕು ನಿವಾರಣೆಗಾಗಿ ಹರಿಹರದ ತುಂಗಭದ್ರಾ ನದಿ ದಡದಲ್ಲಿರುವ ಶ್ರೀ ರಾಘವೇಂದ್ರ ಸ್ವಾಮಿಗಳ ಮಠದ ಆವರಣದಲ್ಲಿ 'ಬ್ರಹ್ಮಯಜ್ಞ' ಹಮ್ಮಿಕೊಳ್ಳಲಾಗಿದೆ.

ಪತ್ರಿಕಾಗೋಷ್ಠಿಯಲ್ಲಿ ಈ ಬಗ್ಗೆ ವಿವರಣೆ ನೀಡಿದ ಸ್ಫೂರ್ತಿ ಸೇವಾ ಟ್ರಸ್ಟ್ ಪ್ರಧಾನ ಕಾರ್ಯದರ್ಶಿ ಬಿ. ಸತ್ಯನಾರಾಯಣ ಮೂರ್ತಿ, ನಾಳೆ ದಿನಾಂಕ 20 ರಿಂದ ಡಿಸೆಂಬರ್ 1 ರವರೆಗೆ ವಿವಿಧ ಯಜ್ಞಾಧಿ ಕಾರ್ಯಕ್ರಮಗಳು ಶ್ರೀ ತ್ರಿದಂಡಿ ಶ್ರೀ ಮನ್ನಾರಾಯಣ ರಾಮಾನುಜ ಚಿನ್ನಜಿಯ್ಯರ್ ಸ್ವಾಮೀಜಿ ನೇತೃತ್ವದಲ್ಲಿ ನಡೆಯಲಿವೆ ಎಂದು ಹೇಳಿದರು. ಸಿ.ಹೆಚ್. ಭಾವನಾರಾಯಣ ಗೋಷ್ಠಿಯಲ್ಲಿದ್ದರು.

# ಯೂಟ್ಯೂಬ್ ಮೂಲಕ ಮಕ್ಕಳಿಗೆ ಹಿಂಸಾತ್ಮಕ ಜಾಹೀರಾತು

ವಾಷಿಂಗ್ಟನ್, ನ. 20 – ಯೂಟ್ಯೂಬ್ ಬಳಸುವ ಚಿಕ್ಕ ಮಕ್ಕಳು ಶಿಕ್ಷಣಕ್ಕೆ ಏನೊಂದೂ ಸಹಕಾರಿಯಲ್ಲದ ಹಿಂಸಾತ್ಮಕ ದೃಶ್ಯಗಳಿರುವ ಜಾಹೀರಾತುಗಳನ್ನು ವೀಕ್ಷಿಸುತ್ತಿದ್ದಾರೆ ಎಂದು ಕಾಮನ್ಸ್ ಸೆನ್ಸ್ ಮೀಡಿಯಾ ಸಂಸ್ಥೆಯ ವರದಿ ತಿಳಿಸಿದೆ.


ಯೂಟ್ಯೂಬ್ ಮಕ್ಕಳಲ್ಲಿ ಜನಪ್ರಿಯವಾಗಿದೆ. ಕೊರೊನಾ ಸಮಯದಲ್ಲಿ ಅದರ ಬಳಕೆ ಹೆಚ್ಚಾಗಿದೆ. ಆದರೆ, ಮಕ್ಕಳು ನೋಡಬಾರದ ವಿಡಿಯೋಗಳನ್ನು ತಡೆಯಲು ಯೂಟ್ಯೂಬ್ ವಿಫಲವಾಗುತ್ತಿದೆ ಎಂದು ವರದಿ ತಿಳಿಸಿದೆ.

8 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳು ನೋಡುವ ವಿಡಿಯೋಗಳ ಅಧ್ಯಯನ ನಡೆಸಿ ವರದಿ ರೂಪಿಸಲಾಗಿದೆ. ಈ ವಿಡಿಯೋಗಳಲ್ಲಿ ಬರುವ ಶೇ.20ರಷ್ಟು ಜಾಹೀರಾತುಗಳು ಮಕ್ಕಳು ನೋಡುವುದಕ್ಕೆ ಸೂಕ್ತವಾಗಿಲ್ಲ ಎಂದು ತಿಳಿಸಲಾಗಿದೆ. ಮಕ್ಕಳ ಖಾಸಗಿತನದ ಕಾನೂನುಗಳನ್ನು ಉಲ್ಲಂಘಿಸಿದ್ದಕ್ಕಾಗಿ ಯೂಟ್ಯೂಬ್‌ನ ಮಾತೃಸಂಸ್ಥೆಯಾದ ಅಲ್ಫಾಬೆಟ್ ಕಳೆದ ವರ್ಷ ದಾಖಲೆ ಮೊತ್ತದ ದಂಡ ಪಾವತಿಸಿತ್ತು.

ಈ ಬಗ್ಗೆ ಹೇಳಿಕೆ ನೀಡಿರುವ ಯೂಟ್ಯೂಬ್ ವಕ್ತಾರರು, ಮಕ್ಕಳ ಹಾಗೂ ಕುಟುಂಬದ ರಕ್ಷಣೆ ನಮ್ಮ ಪ್ರಥಮ ಆದ್ಯತೆಯಾಗಿದೆ.

ಯೂಟ್ಯೂಬ್ ಮಕ್ಕಳಿಗಾಗಿ ರೂಪಿಸಿರುವಂಥದ್ದಲ್ಲ. ಹೀಗಾಗಿ ನಾವು ಮಕ್ಕಳಿಗಾಗಿ ಯೂಟ್ಯೂಬ್ ಕಿಡ್ಸ್ ಆಪ್ ಅನ್ನು ರೂಪಿಸಿದ್ದೇವೆ. ಇಲ್ಲಿ ಮಕ್ಕಳ ಕಲ್ಪನೆ ಹಾಗೂ ಕುತೂಹಲ ವಿಸ್ತರಣೆಗೆ ವಿಶೇಷ ಒತ್ತು ನೀಡಲಾಗಿದೆ. 13 ವರ್ಷದ ಒಳಗಿನ ಮಕ್ಕಳು ಯೂಟ್ಯೂಬ್ ಕಿಡ್ಸ್ ಅನ್ನೇ ಬಳಸಬೇಕೆಂದು ಶಿಫಾರಸ್ಸು ಮಾಡುತ್ತೇವೆ ಎಂದಿದ್ದಾರೆ.

# ಮೌಲ್ಯಗಳ ಪರಿಪಾಲನೆಯಿಲ್ಲದ ಜೀವನ ವ್ಯರ್ಥ



ರಂಭಾಪುರಿ ಪೀಠ (ಬಾಳೆಹೊನ್ನೂರು) ನ.19- ಸಂತಸ ಮತ್ತು ಶಾಂತಿಯ ಬದುಕಿಗೆ ಧರ್ಮವೇ ಮೂಲ. ಸುಖ - ಸಂತೋಷ ನಮಗಾಗಿ ಹೇಗೆ ಬಯಸುತ್ತೇವೆಯೋ ಹಾಗೆ ಇತರರಿಗಾಗಿ ಬಯಸುವುದು ನಿಜವಾದ ಧರ್ಮ. ಮೌಲ್ಯಗಳ ಪರಿಪಾಲನೆಯಿಲ್ಲದ ಮನುಷ್ಯನ ಜೀವನ ವ್ಯರ್ಥವಾಗುತ್ತದೆ ಎಂದು ರಂಭಾಪುರಿ ಪೀಠದ ಜಗದ್ಗುರು ಶ್ರೀ ಡಾ. ವೀರ ಸೋಮೇಶ್ವರ ಸ್ವಾಮೀಜಿ ಅಭಿಪ್ರಾಯಪಟ್ಟರು.

ಶ್ರೀ ರಂಭಾಪುರಿ ಪೀಠದಲ್ಲಿ ಬಲಿ ಪಾಡ್ಯಮಿಯಂದು ಧರ್ಮ ದೀಪೋತ್ಸವ ನೆರವೇರಿಸಿ ಜಗದ್ಗುರುಗಳು ಆಶೀರ್ವಚನ ನೀಡಿದರು.

ಸಾಧನೆಯ ಹಾದಿಯಲ್ಲಿ ಬರುವ ಕಷ್ಟಗಳು ಜೀವನ ಶ್ರೇಯಸ್ಸಿಗೆ ತಳಪಾಯ. ಸತ್ಯ ಸಂಸ್ಕೃತಿಗಾಗಿ ಶ್ರಮಿಸಿದವರು ಯಾವಾಗಲೂ ನೆನಪಿನಲ್ಲಿ ಉಳಿಯುತ್ತಾರೆ. ಅನ್ಯಾಯ ಅಧರ್ಮದಲ್ಲಿ ನಡೆದವರು ಕಾಲ ಗರ್ಭದಲ್ಲಿ ನಾಶವಾಗಿ ಹೋಗಿದ್ದಾರೆ.

ಬಾಳ ಪಥದಲ್ಲಿ ಆದರ್ಶ ಗುಣಗಳನ್ನು ಬೆಳೆಸಿಕೊಳ್ಳದಿದ್ದರೆ ನೆಮ್ಮದಿಯಿಂದ ಬಾಳಲು ಸಾಧ್ಯವಾಗುವುದಿಲ್ಲ. ಶ್ರೀಮಂತ ತನ್ನ ಬಗ್ಗೆ ಅಷ್ಟೇ ಚಿಂತಿಸುವನೇ ಹೊರತು ಪರರ ಹಿತ ಚಿಂತನೆ ಮಾಡಲಾರ. ಆದರೆ ಸತ್ಪುರುಷರು ಪರ ಹಿತ ಚಿಂತನೆಯನ್ನು ಸದಾ ಯೋಚಿಸುತ್ತಾರೆ. ಪ್ರತಿಷ್ಠೆ-ಮತ್ಸರ ಬಿಟ್ಟು ಸಹನೆ, ಶಾಂತಿಯಿಂದ ಬಾಳಿದರೆ ಬದುಕು ಸಮೃದ್ಧಗೊಳ್ಳುವುದೆಂದರು. ಇದೇ ಸಂದರ್ಭದಲ್ಲಿ ಕರ್ಮವೀರ ದೀಪಾವಳಿ ವಿಶೇಷ ಸಂಚಿಕೆಯನ್ನು ಶ್ರೀ ರಂಭಾಪುರಿ ಜಗದ್ಗುರುಗಳು ಬಿಡುಗಡೆಗೊಳಿಸಿದರು.

**ಅಭಿವೃದ್ಧಿ ನಿಗಮ ರಚನೆಗೆ ಸ್ವಾಗತ:** ಬೇರೆ ಬೇರೆ ಸಮುದಾಯಗಳ ಬೆಳವಣಿಗೆಗಾಗಿ ಅಭಿವೃದ್ಧಿ ನಿಗಮ ರಚಿಸಿದಂತೆ ವೀರಶೈವ ಲಿಂಗಾಯತ ಸಮುದಾಯದ ಬಹಳ ವರುಷಗಳ ಬೇಡಿಕೆಯನ್ನು ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪನವರು ಕರ್ನಾಟಕ ವೀರಶೈವ ಲಿಂಗಾಯತ ಅಭಿವೃದ್ಧಿ ನಿಗಮ ರಚನೆ ಘೋಷಣೆ ಮಾಡಿ ಒಂದು ಐತಿಹಾಸಿಕ ನಿರ್ಧಾರ ಕೈಗೊಂಡಿದ್ದನ್ನು ಸ್ವಾಗತಿಸುತ್ತೇವೆ. ಸಮುದಾಯದ ಬೆಳವಣಿಗೆಗೆ ಅಭಿವೃದ್ಧಿ ನಿಗಮ ಕಾರ್ಯ ಕೈಗೊಳ್ಳಲೆಂದು ಶ್ರೀ ರಂಭಾಪುರಿ ವೀರಸೋಮೇಶ್ವರ ಜಗದ್ಗುರುಗಳು ಹಾರೈಸಿದ್ದಾರೆ.


## ವಿದೇಶ ಪ್ರಯಾಣ-ಶುಭ ಹಾರೈಕೆಗಳು



ದಿನಾಂಕ : 21.11.2020 ರಂದು ಶನಿವಾರ ಬೆಳಗ್ಗೆ ಫಿನ್‌ಲ್ಯಾಂಡ್, ಯೂರೋಪ್ ದೇಶಗಳಿಗೆ ಪ್ರಯಾಣ ಬೆಳೆಸುತ್ತಿರುವ

ಶ್ರೀಮತಿ ಕೆ.ಪಿ. ಶೋಭಾ
ಶ್ರೀ ಎನ್.ಎಂ. ನಾಗರಾಜ್
ಶಿಕ್ಷಕರು
ಇವರ ಮಗಳು ಮತ್ತು ಅಳಿಯ
ಶ್ರೀಮತಿ ನವ್ಯ ಎನ್.ಎಸ್.
ಶ್ರೀ ಕೆ.ಎಸ್. ಪ್ರಶಾಂತ್
ಇಂಜಿನಿಯರ್
ಇವರಿಗೆ ಶುಭ ಕೋರುವವರು...

- ಶ್ರೀಮತಿ ಕೆ. ನಾಗರತ್ನಮ್ಮ, ಶ್ರೀ ಕೆ. ಪಂಚಪ್ಪ, ನಿವೃತ್ತ ಶಿಕ್ಷಕರು
- ಶ್ರೀಮತಿ ಕೆ.ಪಿ. ಪ್ರೇಮಲೀಲಾ, ಶ್ರೀ ಈ.ಜಿ. ಪ್ರಭು, ಶಿಕ್ಷಕರು,
- ಶ್ರೀಮತಿ ಕೆ.ಪಿ. ಸುಜಾತ ✢ ಶ್ರೀ ಎಸ್.ಎನ್. ರಾಜಶೇಖರ್, ಶಿಕ್ಷಕರು
- ಶ್ರೀಮತಿ ಗೌಡ್ರ ಇಂದಿರಮ್ಮ ಶ್ರೀ ಗೌಡ್ರ ಜಯ್ಯಪ್ಪ ವಿಠಲಾಪುರ
- ಶ್ರೀಮತಿ ಕಾವ್ಯರಾಣಿ, ಶ್ರೀ ಪ್ರದೀಪ್ ಕುಮಾರ್ ಹೆಚ್.ಎಸ್.
- ಶ್ರೀಮತಿ ವಿದ್ಯಾಶ್ರೀ, ಶ್ರೀ ಗಣೇಶ್ ಜಿ.
- ಶ್ರೀಮತಿ ಮೀನಾಕ್ಷಮ್ಮ ✢ ಶ್ರೀಮತಿ ಚಂದ್ರಮ್ಮ
- ಈ.ಪಿ. ಸಿದ್ದಾರ್ಥ್ ✢ ಎನ್.ಎಸ್. ಸ್ನೇಹ
- ಆರ್.ಎಸ್. ವಿಕಾಸ್ ✢ ವಿನಯ್ ✢ ಪ್ರವೀಣ್


# ವಾಲ್ಮೀಕಿ ಜಾತ್ರೆ : ಹರಪನಹಳ್ಳಿಯಲ್ಲಿ ಪೂರ್ವಭಾವಿ ಸಭೆ

ಹರಪನಹಳ್ಳಿ, ನ. 19- ಪಟ್ಟಣದ ವಾಲ್ಮೀಕಿ ಸಮುದಾಯ ಭವನದಲ್ಲಿ ನಾಡಿದ್ದು ದಿನಾಂಕ 21ರ ಶನಿವಾರ ಮಧ್ಯಾಹ್ನ 1 ಗಂಟೆಗೆ ರಾಜನಹಳ್ಳಿ ವಾಲ್ಮೀಕಿ ಗುರುಪೀಠದ ಶ್ರೀ ಪ್ರಸನ್ನಾನಂದಪುರಿ ಸ್ವಾಮೀಜಿ ಸಾನ್ನಿಧ್ಯದಲ್ಲಿ ಸಭೆ ನಡೆಯಲಿದೆ ಎಂದು ತಾಲ್ಲೂಕು ವಾಲ್ಮೀಕಿ ನಾಯಕ ಸಮಾಜದ ಅಧ್ಯಕ್ಷ ಕೆ. ಉಚ್ಚಂಗೆಪ್ಪ ತಿಳಿಸಿದ್ದಾರೆ.

ಫೆಬ್ರವರಿ 8 ಮತ್ತು 9ರಂದು ಜರುಗಲಿರುವ ವಾಲ್ಮೀಕಿ ಜಾತ್ರೆಯ ಅಂಗವಾಗಿ ಪೂರ್ವಭಾವಿ ಸಭೆ ಕರೆಯಲಾಗಿದೆ.

# ಡಿವೈಎಸ್ಪಿ ವೀರೇಂದ್ರ ನಾಯ್ಕ್‌ಗೆ ಸಿಎಂ ಪದಕ



ದಾವಣಗೆರೆ,ನ.19- ಜಿಲ್ಲೆಯವರೇ ಆಗಿರುವ ಬೆಳಗಾವಿಯ ಡಿವೈಎಸ್‌ಪಿ ಎನ್. ವೀರೇಂದ್ರ ನಾಯ್ಕ್ ಅವರು ಮುಖ್ಯಮಂತ್ರಿ ಪದಕಕ್ಕೆ ಆಯ್ಕೆ ಆಗಿದ್ದಾರೆ.

ಬೆಳಗಾವಿಯಲ್ಲಿ ಡಿವೈಎಸ್‌ಪಿ ಹಾಗೂ ಪಿಟಿಎಸ್ ಆಗಿ ಸೇವೆ ಸಲ್ಲಿಸುತ್ತಿದ್ದಾರೆ.

# ಜಿಲ್ಲೆಯ ಐವರು ಪೊಲೀಸರಿಗೆ ಸಿಎಂ ಪದಕ



ದಾವಣಗೆರೆ, ನ.19- ಪೊಲೀಸ್ ಇಲಾಖೆಯಲ್ಲಿ ಅತ್ಯುತ್ತಮ ಸೇವೆಯನ್ನು ಪರಿಗಣಿಸಿ ನೀಡಲಾಗುವ 2017-18ರ ಮುಖ್ಯಮಂತ್ರಿ ಪದಕಕ್ಕೆ ಜಿಲ್ಲೆಯ ಐವರು ಪೊಲೀಸ್ ಅಧಿಕಾರಿಗಳು ಭಾಜನರಾಗಿದ್ದು, ನ.20ರಂದು ಬೆಂಗಳೂರಿನ ವಿಧಾನಸೌಧದ ಬಳಿಯ ಬ್ಯಾಂಕ್ವೆಟ್ ಹಾಲ್‌ನಲ್ಲಿ ನಡೆಯುವ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನವಾಗಲಿದೆ.

ಹೊನ್ನಾಳಿ ಸಿಪಿಐ ದೇವರಾಜ್, ಚನ್ನಗಿರಿ ಸಿಪಿಐ ಆರ್. ಆರ್. ಪಾಟೀಲ್, ಪಿಎಸ್‌ಐ ವೀರಬಸಪ್ಪ ಕುಸಲಾಪುರ, ಡಿಸಿಐಬಿ ಮುಖ್ಯಪೇದೆ ಕೆ.ಸಿ. ಮಜೀದ್, ಡಿಎಆರ್ ಶ್ವಾನ ದಳದ ಕೆ.ಎಂ. ಪ್ರಕಾಶ್ ಇವರುಗಳನ್ನು ಡೈರೆಕ್ಟರ್ ಜನರಲ್ ಆಫ್ ಪೊಲೀಸ್ ಪ್ರವೀಣ್ ಸೂದ್ ಅವರು ಆಯ್ಕೆ ಮಾಡಿದ್ದಾರೆ.

ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಪ್ರಶಸ್ತಿ ನೀಡಲಿದ್ದು, ಗೃಹ ಸಚಿವ ಬಸವರಾಜ ಬೊಮ್ಮಾಯಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ.

ಪದಕ ಸಾಧನೆಗೆ ಪಾತ್ರರಾದ ಪೊಲೀಸರಿಗೆ ಪೂರ್ವ ವಲಯ ಐಜಿಪಿ ಎಸ್. ರವಿ, ಎಸ್ಪಿ ಹನುಮಂತರಾಯ, ಎಎಸ್ಪಿ ರಾಜೀವ್ ಅಭಿನಂದಿಸಿದ್ದಾರೆ.

# ರಾಜಧಾನಿಯಲ್ಲಿ ಉಲ್ಬಣಿಸಿದ ಕೊರೊನಾ, ಸಾವುಗಳ ಏರಿಕೆ

ನವದೆಹಲಿ, ನ. 18 – ರಾಜಧಾನಿ ದೆಹಲಿಯಲ್ಲಿ ಕೊರೊನಾ ವೈರಸ್ ಸೋಂಕಿತರ ಸಂಖ್ಯೆ ತೀವ್ರವಾಗಿ ಹೆಚ್ಚಾಗುತ್ತಿದ್ದು, ರಾಜ್ಯ ಸರ್ಕಾರ ಹೆಚ್ಚುವರಿಯಾಗಿ 660 ಐ.ಸಿ.ಯು. ಬೆಡ್‌ಗಳ ವ್ಯವಸ್ಥೆ ಮಾಡಿಕೊಳ್ಳುತ್ತಿದೆ.

ದೆಹಲಿಯಲ್ಲಿ ಬುಧವಾರ ಒಂದೇ ದಿನ 7,486 ಸೋಂಕಿತರು ಕಂಡು ಬಂದಿದ್ದು, 131 ಜನರು ಸಾವನ್ನಪ್ಪಿದ್ದಾರೆ. ಇದು ಒಂದೇ ದಿನದಲ್ಲಿ ಕಂಡು ಬಂದ ಅತಿ ಹೆಚ್ಚಿನ ಸಾವಿನ ಪ್ರಮಾಣವಾಗಿದೆ.

ವೈದ್ಯಕೀಯ ಸೌಲಭ್ಯಗಳ ಮೇಲೂ ಒತ್ತಡ ಬಿದ್ದಿದೆ. ಸೈನಿಕ ಪಡೆಗಳ 45 ವೈದ್ಯರು ಹಾಗೂ 160 ವೈದ್ಯಕೀಯ ಸಿಬ್ಬಂದಿಯನ್ನು ರಾಜಧಾನಿಯ ಆಸ್ಪತ್ರೆಗಳಿಗೆ ಕರೆಸಲಾಗಿದೆ.

ದೆಹಲಿಯ ಕೆಲ ಪ್ರದೇಶಗಳಲ್ಲಿ ತಾತ್ಕಾಲಿಕ ಸಂಚಾರ ನಿರ್ಬಂಧ ಹೇರುವ ಬಗ್ಗೆಯೂ ಮುಖ್ಯಮಂತ್ರಿ ಕೇಜ್ರಿವಾಲ್ ಯೋಜಿಸುತ್ತಿದ್ದಾರೆ.

ಅಕ್ಟೋಬರ್ 28ರಂದು ದೆಹಲಿಯಲ್ಲಿ ಪ್ರತಿನಿತ್ಯ ಕಂಡು ಬರುತ್ತಿರುವ ಪ್ರಕರಣಗಳ ಸಂಖ್ಯೆ 5 ಸಾವಿರದ ಗಡಿ ದಾಟಿತ್ತು. ಆನಂತರದಿಂದ ನಿರಂತರವಾಗಿ ಕೊರೊನಾ ಪ್ರಕರಣಗಳ ಸಂಖ್ಯೆ ಹೆಚ್ಚಾಗುತ್ತಲೇ ಇದೆ.

# ಕೇಂದ್ರ ಸಚಿವ ಸದಾನಂದ ಗೌಡಗೆ ಕೊರೊನಾ ಪಾಸಿಟಿವ್

ಬೆಂಗಳೂರು, ಜ. 19 - ಕೇಂದ್ರ ಸಚಿವ ಡಿ.ವಿ.ಸದಾನಂದಗೌಡ ಅವರಿಗೆ ಕೊರೊನಾ ಸೋಂಕು ತಗುಲಿದೆ. ಈ ಬಗ್ಗೆ ಸ್ವತಃ ಅವರೇ ಟ್ವೀಟ್ ಮೂಲಕ ತಿಳಿಸಿದ್ದಾರೆ. ಆರಂಭಿಕ ಲಕ್ಷಣಗಳ ಹಿನ್ನೆಲೆಯಲ್ಲಿ ಕೊರೊನಾ ಟೆಸ್ಟ್ ಮಾಡಿಸಿದಾಗ ವರದಿ ಪಾಸಿಟಿವ್ ಬಂದಿದೆ. ಸದ್ಯ ಸ್ವಯಂ ಕ್ವಾರಂಟೈನ್‌ನಲ್ಲಿದ್ದೇನೆ ಎಂದರು.


॥ ಶ್ರೀ ಹುಚ್ಚಂಗೆಮ್ಮ ದೇವಿ ಪ್ರಸನ್ನ ॥

## ಕೈಲಾಸ ಸಮಾರಾಧನೆ ಆಹ್ವಾನ ಪತ್ರಿಕೆ



ದಾವಣಗೆರೆ ಜಿಲ್ಲೆ ಹರಿಹರ ನಗರದ ಶಿವಮೊಗ್ಗ ರಸ್ತೆ ವಾಸಿ
ಶ್ರೀಮತಿ ಯಶೋಧಮ್ಮ ಮತ್ತು ಮಕ್ಕಳು
ಮಾಡುವ ವಿಜ್ಞಾಪನೆಗಳು.
ದಿನಾಂಕ : 12.11.2020ನೇ ಗುರುವಾರ ಬೆಳಿಗ್ಗೆ 4.30ಕ್ಕೆ ನನ್ನ ಪೂಜ್ಯ ಪತಿಯವರಾದ
ಶ್ರೀ ಬಾವಿಕಟ್ಟೆ ಜಯದೇವಪ್ಪನವರು
ಕಾರ್ಯದರ್ಶಿಗಳು, ಬಾಬಾ ಸಾಹೇಬ್ ಅಂಬೇಡ್ಕರ್ ಟ್ರಸ್ಟ್
ಇವರು ಲಿಂಗೈಕ್ಯರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
'ಕೈಲಾಸ ಸಮಾರಾಧನೆ'ಯನ್ನು
ದಿನಾಂಕ : 20.11.2020ನೇ ಶುಕ್ರವಾರ ಮಧ್ಯಾಹ್ನ 12.30ಕ್ಕೆ
ಹರಿಹರ ನಗರದ ಶಿವಮೊಗ್ಗ ರಸ್ತೆಯಲ್ಲಿರುವ ಮೃತರ ಸ್ವಗೃಹದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು :
ಶ್ರೀಮತಿ ಯಶೋಧಮ್ಮ ಮತ್ತು ಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು
ಬಾವಿಕಟ್ಟೆ ವಂಶಸ್ಥರು, ಹರಿಹರ ಹಾಗೂ ಬಂಧು-ಮಿತ್ರರು. ಮೊ : 72046 90489


JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte